

ಕಲ್ಯಾಣ ಕಿರಣ

ಮಾರ್ಚ್-2007


ಬೆಲೆ-೮



ಶೂನ್ಯ ಪೀಠಾಧೀಶ ಅಲ್ಲಮ ಪ್ರಭು ದೇವರು



16-02-07 ಶರಣ ಗಣ ಮೇಳದಲ್ಲಿ ಪೂಜಾ ಕಾರ್ಯಕ್ರಮ. ಜರಗನ ಹಳ್ಳಿ ಶಿವಶಂಕರ್, ಪುಟ್ಟರುದ್ರ, ಪೂಜ್ಯ ಮಾತಾಜಿ, ದೇವಿಕಾ ಶರಣಪ್ಪ ಪೂಜ್ಯ ಬಸವ ಕುಮಾರ ಸ್ವಾಮೀಜಿ



ಮೈಸೂರು ರಾಷ್ಟ್ರೀಯ ಬಸವ ದಳದ ವತಿಯಿಂದ ಪೂಜ್ಯ ಮಾತಾಜಿಯವರ 62ನೆಯ ವರ್ಧಂತಿ ನಿಮಿತ್ತ ಪುಷ್ಪವನದಲ್ಲಿ ಅಭಿನಂದನೆ

ಸಂಪುಟ-36 ಸಂಚಿಕೆ-11 | ಬಸವ ಶಕೆ-873 ಮಾರ್ಚ-2007 | ಆಜೀವ ಸದಸ್ಯತ್ವ 600 ರೂ. ವಾರ್ಷಿಕ ಚಂದಾ 60/- ರೂ.

ದೇವರೆ, ನಿನಗೆ ಧನ್ಯವಾದ.

ಏತಕ್ಕಾಗಿ?

ಅತ್ತಲಿತ ಹರಿಯದ ಅಚಲಿತ ಮನವನಿತ್ತುದಕೆ
ಉದಾತ್ತ ಗುರಿ ಎಡೆಗೆ ಸಾಗುವ ಸ್ಥೈರ್ಯವನ್ನಿತ್ತುದಕೆ
ದೇಶ ದ್ರೋಹ, ಧರ್ಮ ದ್ರೋಹ, ಗುರು ದ್ರೋಹ ಮಾಡದಿರುವ
ದೃಢ ಚಿತ್ತವ ನೀಡಿದುದಕೆ
ಕನಕ, ಕೀರ್ತಿಗಳ ಆಮಿಷಕ್ಕೆ ಬಲಿಯಾಗುವ
ದುರ್ಬಲ ವ್ಯಕ್ತಿತ್ವ ನೀಡದುದಕೆ,
ನನ್ನ ಕುಟುಂಬವೇ ವಿಶ್ವ ಎಂಬ ಸ್ವಾರ್ಥವ ನಿವಾರಿಸಿ
ವಿಶ್ವವೇ ನನ್ನ ಕುಟುಂಬ ಎಂಬ ತ್ಯಾಗ ಬುದ್ಧಿ ನೀಡಿದುದಕೆ,
ನಾನು ನನ್ನದೆಂಬ ಅಹಂಕಾರ ಮಮಕಾರ ಹರಿದು
ಎಲ್ಲವೂ ನೀನು, ನಿನ್ನದೆಂಬ ದಾಸೋಹಂಭಾವ ಬೆಳೆಸಿದುದಕೆ,
ಎಲ್ಲಕ್ಕೂ ಮಿಗಿಲಾಗಿ ಮಾನವ ಜನ್ಮವ ನೀಡಿದುದಕೆ
ಅದರೊಳು ವಿವೇಕವ ತುಂಬಿದುದಕೆ
ಚಿನ್ಮಯ ಜ್ಞಾನಿ ಲಿಂಗಾನಂದ ಗುರು ತಂದೆಯ ಅನುಗ್ರಹ ಕೊಡಿಸಿದುದಕೆ
ಬಸವ ಗುರು ಚರಣಕ್ಕೆ ಶರಣಾಗಿಸಿದುದಕೆ
ಅಕ್ಕಮಹಾದೇವಿಯ ಕಾರುಣ್ಯ ಕೊಡಿಸಿದುದಕೆ
ಬಸವ ತತ್ತ್ವ ಪಥಕ್ಕೆನ್ನ ಕರೆ ತಂದುದಕೆ
ಇದನ್ನು ಪಸರಿಸಲು ತನು, ಮನ, ಧನ, ಅಭಿಮಾನ
ಸಮಯ, ಪ್ರಾಣಗಳೆಂಬ ಷಡಂಗಗಳ ಮೀಸಲಿಡುವ
ಸರ್ವಾರ್ಪಣ ಭಾವ ನೀಡಿದುದಕೆ
ಸಚ್ಚಿದಾನಂದ ಸ್ವರೂಪಿ ಲಿಂಗದೇವ
ನಿನ್ನ ಪ್ರಿಯ ಸತಿಯಾದುದಕೆ.

– ಬಸವಾತ್ಮಜೆ

ಹೃತ್ಪೂರ್ವಕ ಆಹ್ವಾನ

1. ಮಹಾರಾಷ್ಟ್ರ ರಾಜ್ಯದ ಕೊಲ್ಹಾಪುರ ಜಿಲ್ಲೆಯ ಹಾತ್ ಕಣಂಗಲೆ ತಾಲ್ಲೋಕಿನ ಆಳತೆ ಗ್ರಾಮದ ಬಳಿ ಇರುವ ಅಲ್ಲಮ ಪ್ರಭು ಡೋಂಗರ್ (ಗಿರಿ)ದಲ್ಲಿ 2007 ಮಾರ್ಚ್ 18,19,20 ರಂದು ನಡೆಯುವ ದ್ವಿತೀಯ ಲಿಂಗಾಯತ ಗಣ ಮೇಳಕ್ಕೆ ಹಾಗೂ
2. ಬೀದರ್ ಜಿಲ್ಲೆಯ ಬಸವ ಕಲ್ಯಾಣದಲ್ಲಿ 2007ರ ಮೇ 1.2.3ರಂದು ನಡೆಯಲಿರುವ 6ನೆಯ ಕಲ್ಯಾಣ ಪರ್ವಕ್ಕೆ ತಮ್ಮೆಲ್ಲರಿಗೂ ಹೃತ್ಪೂರ್ವಕ ಸುಸ್ವಾಗತ

ಶರಣರ ಬರುವೆಮಗೆ ಪ್ರಾಣ ಜೀವಾಳ

★ಕಲ್ಯಾಣ ಕಿರಣ★

ಸಂಪುಟ 36 ಬಸವ ಶಕೆ 873 ಆಜೀವ ಸದಸ್ಯತ್ವ 600ರೂ
ಸಂಚಿಕೆ 11 ಮಾರ್ಚ- 2007 ವಾರ್ಷಿಕ ಚಂದಾ 60/-ರೂ.

ಕಿರಣ ಗನ್ನಡಿ

ಏಪ್ರಿಲ್ ತಿಂಗಳಲ್ಲಿ ಬರುವ ಹಬ್ಬ ಉತ್ಸವಗಳು

1.ಅಕ್ಕಮಹಾದೇವಿ ಜಯಂತಿ	-	ಏಪ್ರಿಲ್ 2
2.ಹರಳಯ್ಯ ಜಯಂತಿ	-	ಏಪ್ರಿಲ್ 2
3.874ನೆಯ ಬಸವ ಜಯಂತಿ	-	ಏಪ್ರಿಲ್ 20

KALYANA KIRANA-Reg No.19988/70. Monthly Magazine Edited And Published by Pujya Mate Kasturidevi on behalf of Vishwakalyana Mission Charitable Trust, Basava Mantapa, at Padma Shri Printers, Rajaji Nagara, 2nd Block, Bangalore-560010

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ
ವಿಳಾಸಕ್ಕೆ ಬರೆಯಿರಿ :
ದೂರವಾಣಿ : 23325335/23131476

ಬಸವ ಮಂಟಪ, 2035
20ನೆಯ ಮುಖ್ಯ ರಸ್ತೆ, ಎರಡನೆಯ ಬ್ಲಾಕು
ರಾಜಾಜಿ ನಗರ, ಬೆಂಗಳೂರು-560010



ಧರ್ಮಗುರು ಬಸವಣ್ಣ

॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥

866666



ಗಣ ಧ್ವಜ

ಕಾಯಕವೇ ಕೈಲಾಸವೆಂದು ಸಾರಿದ
ಶರಣ ಭೂಮಿ ಬಸವ ಕಲ್ಯಾಣದಲ್ಲಿ
ವಿಶ್ವ ಕಾಯಕದ ದಿನದ ಅಂಗವಾಗಿ ಆರನೆಯ

ಕಲ್ಯಾಣ ಪರ್ವ

2007ರ ಮೇ 1, 2, 3,ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವ ತತ್ತ್ವಾಭಿಮಾನಿಗಳೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತ್ವ ಮತ್ತು ಸಹೋದರತ್ವ ಬೆಳೆಸಲು ಸಹ ಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ಶರಣ ಮೇಳವನ್ನು ನಡೆಸಲಾಗುತ್ತಿದೆ. ಧರ್ಮಕರ್ತ ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮವನ್ನು ಲಿಂಗಾಯತ (ಬಸವ) ಧರ್ಮೀಯರ ಧರ್ಮಕ್ಷೇತ್ರ ಎಂದು ಗುರುತಿಸಿಕೊಂಡು 1988ರಿಂದ ನಡೆಸಿಕೊಂಡು ಬರಲಾಗುತ್ತಿದೆ.

ಅದೇ ರೀತಿ ಶರಣ ಭೂಮಿ ಬಸವ ಕಲ್ಯಾಣದಲ್ಲಿ ಕಲ್ಯಾಣ ಪರ್ವ ಎಂಬ ಧಾರ್ಮಿಕ ಸಮಾವೇಶವನ್ನು ಪ್ರತಿ ವರ್ಷದ ಮೇ 1,2,3ರಂದು ನಡೆಸಲು ಸಂಕಲ್ಪಿಸಲಾಗಿದೆ. ವರ್ಣಾಂತರ ವಿವಾಹವನ್ನು ಪ್ರೋತ್ಸಾಹಿಸಿದ್ದಕ್ಕಾಗಿ ತಪ್ಪರಾದ ಸಂಪ್ರದಾಯವಾದಿಗಳಿಂದಾಗಿ ಧರ್ಮಪಿತ ಬಸವಣ್ಣನವರು ಗಡಿಪಾರು ಶಿಕ್ಷೆ ಅನುಭವಿಸಬೇಕಾಯಿತು. ಹರಳಯ್ಯ- ಮಧುವರಸ-ಶೀಲವಂತರು ಎಳೆಹೂಟೆ ಶಿಕ್ಷೆಗೆ ಒಳಗಾಗಿ ಪ್ರಾಣಬಿಡಬೇಕಾಯಿತು. ವಚನ ಸಾಹಿತ್ಯವನ್ನು ಜಾತಿವಾದಿಗಳು ನಾಶ ಮಾಡಲು ಯತ್ನಿಸಿದಾಗ ಅದನ್ನು ಸಂರಕ್ಷಿಸಲು ಚಿನ್ಮಯ ಜ್ಞಾನಿ ಚನ್ನಬಸವಣ್ಣ, ವೀರ ಮಾತೆ ಅಕ್ಕನಾಗಲಾಂಬಿಕೆ, ವೀರ ಗಣಾಚಾರಿ ಮಡಿವಾಳ ಮಾಚಿದೇವರು ವಚನ ವಾಙ್ಮಯವನ್ನು ಹೊತ್ತು ಕಲ್ಯಾಣದಿಂದ ಹೊರ ನಡೆದರು. ಶರಣರ ಈ ಬಲಿದಾನದ ಸಂಸ್ಮರಣೆಗಾಗಿ ಕಾಯಕವೇ ಕೈಲಾಸ ಎಂಬ ದುಡಿಮೆಯ ಸಪ್ತಾಕ್ಷರಿ ಮಂತ್ರವನ್ನು ಸಾರಿದ ಶರಣ ಭೂಮಿ ಬಸವ ಕಲ್ಯಾಣದಲ್ಲಿ ಕಲ್ಯಾಣ ಪರ್ವ ಎಂಬ ವಾರ್ಷಿಕ ಸಮಾವೇಶ ನಡೆಸಲಾಗುತ್ತಿದೆ. ಉದ್ಘಾಟನಾ ಗೋಷ್ಠಿ, ಸಾಮೂಹಿಕ ಇಷ್ಟಲಿಂಗಾರ್ಚನೆ, ಸಮುದಾಯ ಪ್ರಾರ್ಥನೆ,ಶರಣ ಸ್ಮರಣೆ, ಮೆರವಣಿಗೆ, ಪಥ ಸಂಚಲನ ಕಲ್ಯಾಣ ಪರ್ವದ ಮುಖ್ಯ ಧಾರ್ಮಿಕ ವಿಧಿಗಳು. ಮೇ 1ರಂದು ಬೆಳಗ್ಗೆ 10ರಿಂದ ಬಸವ ಧ್ವಜಾರೋಹಣ, ಸಮುದಾಯ ಪ್ರಾರ್ಥನೆ ಮತ್ತು ಶರಣಾರ್ಥಿ (ಶರಣ ವಂದನೆ) ಕಾರ್ಯಕ್ರಮ ನೆರವೇರಲಿದೆ. ಚಿಂತನ ಗೋಷ್ಠಿ ಉಪನ್ಯಾಸ,ಧಾರ್ಮಿಕ ರಸಪ್ರಶ್ನೆ ಮುಂತಾದ ಕಾರ್ಯಕ್ರಮಗಳಿಂದ ಕೂಡಿದ ಕಲ್ಯಾಣ ಪರ್ವವು ಉತ್ತಮ ಜ್ಞಾನ ದಾಸೋಹದೊಡನೆ ಅನ್ನ ದಾಸೋಹವನ್ನು ಅಚ್ಚುಕಟ್ಟಾಗಿ ಮಾಡುತ್ತದೆ.

ತನ್ನ ಜೀವಮಾನದಲ್ಲಿ ಆಯುಷ್ಯ, ಆರೋಗ್ಯ ಇರುವವರಿಗೆ ಎಷ್ಟು ಸಲ ಒಬ್ಬ ವ್ಯಕ್ತಿ ಶರಣ ಮೇಳ/ ಕಲ್ಯಾಣ ಪರ್ವದಲ್ಲಿ ಭಾಗಿಯಾಗುತ್ತಾನೋ ಆತ ನಿಜಕ್ಕೂ ಹೆಚ್ಚು ಪುಣ್ಯವಂತ. ಇಂಥ ಪವಿತ್ರ ಸಮಾಗಮ ಕಲ್ಯಾಣ ಪರ್ವಕ್ಕೆ ಜಾತಿ,ಮತ,ಪಂಥಗಳ ಭೇದವಿಲ್ಲದೇ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಗಟ್ಟಲೆ ಸಂಖ್ಯೆಯಲ್ಲಿ ಬನ್ನಿರಿ.

★ ಶರಣರ ಬರುವೆಮಗೆ ಪ್ರಾಣ ಜೀವಾಳ ★

ಬೆಂಗಳೂರು ವಿಳಾಸ :
ಬಸವ ಮಂಟಪ
2035, 2ನೇ ಬ್ಲಾಕ್, ಕಾರ್ಡ್ ರಸ್ತೆ
ರಾಜಾಜಿ ನಗರ, ಬೆಂಗಳೂರು-560010
ದೂ: 080-23131476/23325335

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಕಲ್ಯಾಣ ಪರ್ವ ಉತ್ಸವ ಸಮಿತಿ,
ಬಸವ ಕಲ್ಯಾಣ-585327
ತಾ-ಬಸವ ಕಲ್ಯಾಣ, ಜಿ-ಬೀದರ್
ದೂ-08481-251921/252856

ಬಾಳೊಂದು ವರ, ಬದುಕೊಂದು ಕಲೆ

-ಮಾತಾಜಿ

ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟ
ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರು
ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯಾ, ಲಿಂಗದೇವ

ವಿಶ್ವಗುರು ಬಸವಣ್ಣನವರ ದಿವ್ಯ ಸಂದೇಶಗಳಲ್ಲಿ ಅಮೂಲ್ಯವಾದುದು ಈ ವಚನ. ಮರ್ತ್ಯಲೋಕ-ನಾವು ವಾಸಿಸುವ ಈ ಪೃಥ್ವಿ ಅತ್ಯಂತ ಸುಂದರವಾದುದು. ಇದನ್ನು ಜೀವಂತ ಗೋಳ ಎನ್ನುತ್ತಾರೆ. ಏಕೆಂದರೆ ಈವರೆಗಿನ ಅನ್ವೇಷಣೆ, ಸಂಶೋಧನೆಯಿಂದ ಇಲ್ಲಿ ಮಾತ್ರ ಜೀವವಿದೆ; ಇನ್ನೂ ಬೇರೆ ಯಾವ ಗ್ರಹಗಳಲ್ಲಿ ಜೀವ ಇರುವುದು ನಮ್ಮ (ವಿಜ್ಞಾನಿಗಳ) ಗಮನಕ್ಕೆ ಬಂದಿಲ್ಲ. ಒಂದು ವೇಳೆ ಅಂಥದೊಂದು ಗೋಳ ಅಥವಾ ಗ್ರಹ ಇರುವುದು ಸಿದ್ಧವಾದರೂ ಈ ವಚನದ ಅಂತಃಸತ್ವಕ್ಕೆ ಏನೂ ಚ್ಯುತಿ ಬರದು. ಏಕೆಂದರೆ ಆ ಗೋಳದಲ್ಲಿ ವಾಸಿಸುವವರಿಗೆ ಅದುವೇ ಮರ್ತ್ಯಲೋಕ.

ಇಂಥ ಮರ್ತ್ಯಲೋಕ ಭೌತಿಕವಾಗಿ ಸುಂದರವಾಗಿ ಇರುವುದು ಮಾತ್ರವಲ್ಲ ಇದು ಸದಾ ಕ್ರಿಯಾಶೀಲವಾಗಿದೆ. ನದಿ ನದ ಕಾನನ ಪ್ರಕೃತಿ, ಜೀವರಾಶಿ ಒಂದೊಂದು ಈ ಮರ್ತ್ಯಲೋಕದ ಚೆಲುವನ್ನು ಹೆಚ್ಚಿಸಿದರೆ, ಇಲ್ಲಿ ಸೃಷ್ಟಿಯಾಗಿರುವ ಮಾನವ ಜೀವವು ಜಗತ್ತಿನ ಅಂತಃಸತ್ವವನ್ನು ಹೆಚ್ಚಿಸಿದೆ. ದೇವನ ಸೃಷ್ಟಿಯಲ್ಲಿ ಮನುಷ್ಯನನ್ನು ಸೃಷ್ಟಿಯ ಕಿರೀಟ, ವಿಕಾಸದ ಮಹೋನ್ನತ ಶಿಖರ ಎಂದೆಲ್ಲ ಕರೆಯಬಹುದು. ಹೀಗೆ ಭೌತಿಕ ಜಗತ್ತು, ಮನುಷ್ಯ ಜನ್ಮ ಮತ್ತು ಇದನ್ನು ಸಾರ್ಥಕಗೊಳಿಸುವ ಮಾನವ ದೇಹ ಇವೆಲ್ಲವೂ ಸೃಷ್ಟಿಕರ್ತನ ಅದ್ಭುತ ಕೊಡುಗೆ. ಇಂಥ ಕೊಡುಗೆಯನ್ನು ಸರಿಯಾದ ರೀತಿಯಲ್ಲಿ ಸಾರ್ಥಕ ಪಡಿಸಿಕೊಳ್ಳುವ ದೃಷ್ಟಿಯಿಂದ ಬಾಳೊಂದು ದೇವನ ವರವಾದರೆ ಬದುಕುವುದು ಒಂದು ಕಲೆಯೇ ಸರಿ. Life is a great gift given by God, but living is an art.

ಕಲೆ ಎಂಬ ನಾಮ ಪದಕ್ಕೆ ಕನ್ನಡ ಭಾಷೆಯಲ್ಲಿ ಹಲವು ಅರ್ಥಗಳಿವೆ. Art ಎಂಬ ಆಂಗ್ಲ ಪದಕ್ಕೆ ಸಮಾನಾರ್ಥ ಕೊಡುವ ಲಲಿತ ಕಲೆಗಳಿಗೆ ಅನ್ವಯವಾಗುವುದು ಪ್ರಮುಖ ಅರ್ಥ. ಕಲೆ ಎಂದರೆ ಏನಾದರೂ ಮಸಿ ಮುಂತಾದ Stain. ಈ ಕಲೆಯು ವಸ್ತುವನ್ನು ಅಂದಗೆಡಿಸುತದೆ. ಕ್ರಿಯಾಪದವಾಗಿ ಕಲೆ ಎಂದರೆ ಸೇರುವುದು, ಸಮಾವೇಶಗೊಳ್ಳುವುದು ಎಂದು ಸಹ ಅರ್ಥವಾಗುತ್ತದೆ. ಮೊದಲನೆ ಎರಡು ಅರ್ಥಗಳನ್ನು ಗಮನದಲ್ಲಿ ಇಟ್ಟುಕೊಂಡರೆ ಜೀವನವು ಒಂದು ಕಲೆ, Art ಆಗಬೇಹುದು ಅಥವಾ ಕಲೆ-Stain ಸಹ ಆಗಬಹುದು. ಜೀವನದಲ್ಲಿ ಕೆಲವು ಉತ್ತಮ ಮೌಲ್ಯಗಳನ್ನು ಅಳವಡಿಸಿಕೊಳ್ಳುವುದರಿಂದ ಜೀವನವು ಮೊದಲನೆ ಅರ್ಥದಲ್ಲಿ ಕಲೆ ಆಗಬಹುದು; ಉದಾತ್ತ ಮೌಲ್ಯಗಳನ್ನು ಅಳವಡಿಸಿಕೊಳ್ಳದೆ ಇಳಿಜಾರಿನ ಹಾದಿ ಹಿಡಿದಾಗ ಬಾಳು ಮಸಿಯ ಕಲೆಯೂ ಆಗೆಬಹುದು. ಆದ್ದರಿಂದ ಜೀವನವನ್ನು ಸಾರ್ಥಕಗೊಳಿಸಿಕೊಳ್ಳಲು ಯಾವ ಯಾವ ಗುಣಗಳನ್ನು ಅಳವಡಿಸಿಕೊಳ್ಳಬೇಕು ಎಂಬುದನ್ನು ನೋಡೋಣ.

1.ಸಮಯದ ಸದುಪಯೋಗ

ಉದಯಾಸಮಾನವೆಂಬ ಎರಡು ಕೊಳಗದಲ್ಲಿ
ಆಯುಷ್ಯವೆಂಬ ರಾಶಿ ಅಳೆಯುತಿದೆ.
ಬೇಗ ಬೇಗ ಶರಣೆನ್ನಿ, ಚನ್ನ ಮಲ್ಲಿಕಾರ್ಜುನ
ದೇವರಿಗೆ ಬೇಗ ಬೇಗ ಶರಣೆನ್ನಿ

ಜಗನ್ಮಾತಾ ಅಕ್ಕಮಹಾದೇವಿ ಬಹಳ ಅವಸರ ಪಡಿಸುತ್ತಿದ್ದಾರೆ. ಬೇಗ ಬೇಗ ಶರಣೆನ್ನಿ ಎಂದು ಎಚ್ಚರಿಸುತ್ತಿದ್ದಾರೆ. ಏಕೆಂದರೆ ಆಯುಷ್ಯ ಎಂಬುದೊಂದು ಕಾಳಿನ ರಾಶಿ. ಇಷ್ಟು ವರುಷ, ಇಷ್ಟು ತಿಂಗಳು, ಇಷ್ಟು ದಿವಸ, ಇಷ್ಟು ಗಳಿಗೆ ಜೀವಿಸು ಎಂದು ಸೃಷ್ಟಿಸಿದ ದೇವರು, ಬಾಡಿಗೆ ಕರಾರು ಹಾಕಿ ಬಿಟ್ಟಿದ್ದಾನೆ. ಆಯುಷ್ಯವು ಕರ್ಪೂರ ಕರಗಿದಂತೆ ಕ್ಷಣ ಕ್ಷಣಕ್ಕೂ ಕರಗುತ್ತಿದೆ. ಜಗತ್ತಿನ ಕಣದಲ್ಲಿ ಆಯುಷ್ಯದ ಕಾಳಿನ ರಾಶಿ ಬಿದ್ದಿದ್ದು ಇದನ್ನು ಹಗಲು, ರಾತ್ರಿ ಎಂಬ ಇಬ್ಬರು ಕೆಲಸಗಾರರು ಸೂರ್ಯೋದಯ, ಸೂರ್ಯಾಸ್ತ ಎಂಬ ಎರಡು ಸೇರು - ಅಳೆಯುವ ಮಾಪನ (ಕೊಳಗ) ಹಿಡಿದು ಅಳೆಯುತ್ತ ರಾಶಿಯನ್ನು

ಬರಿದುಗೊಳಿಸುತ್ತಿದ್ದಾರೆ. ಪ್ರತಿ ಕ್ಷಣದಲ್ಲೂ ಆಯುಷ್ಯವು ಸವೆಯುತ್ತ ಸಾವೆನ್ನುವುದು ಹತ್ತಿರ ಬರುತ್ತದೆ. ಬಾಳು ಇಷ್ಟು ನಶ್ವರವಾಗಿದೆ. ಆದ್ದರಿಂದ ದೇವನಿಗೆ ಬೇಗ ಬೇಗನೆ ಶರಣೆನ್ನಿ; ದಿವ್ಯ ಪಥವ ಹಿಡಿಯಿರಿ." ಎನ್ನುತ್ತಾರೆ ಅಕ್ಕಮಹಾದೇವಿಯವರು.

ಇಲ್ಲಿ ದೇವನಿಗೆ ಶರಣಾಗಿರಿ ಎಂಬ ಸ್ಥಳದಲ್ಲಿ ಒಂದು ಉದಾತ್ತ ಗುರಿಯನ್ನು ಇರಿಸಿಕೊಳ್ಳಿರಿ ಎಂದೂ ಅರ್ಥ ಮಾಡಬೇಕು. ಬೇಗ ಬೇಗ ಎಂಬಲ್ಲಿ ಸಮಯವನ್ನು ಸದುಪಯೋಗ ಪಡಿಸಿಕೊಳ್ಳಿರಿ ಎಂದು ಹೇಳುವ ಧ್ವನಿಯನ್ನು ಗುರುತಿಸಬಹುದು. ಸಮಯವು ಅತ್ಯಂತ ಅಮೂಲ್ಯ. ಅದನ್ನು ಕೆಟ್ಟ ಚಟಗಳಿಗೆ ಕಳೆಯುವುದರಲ್ಲಿ, ಕಾಡು ಹರಟೆ ಹೊಡೆಯುತ್ತ ಅಪವ್ಯಯ ಮಾಡುವುದರಲ್ಲಿ ವ್ಯರ್ಥಗೊಳಿಸಬಾರದು. ಸಮಯದ ಸಾರ್ಥಕತೆಯಾಗುವುದು ಅಧ್ಯಯನದಿಂದ, ಪೂಜೆ-ಧ್ಯಾನಗಳಿಂದ, ಆಟ ಓಟಗಳಿಂದ, ಉತ್ತಮರ ಒಡನಾಡುತ್ತ ಸತ್ವಭರಿತ ಚಿಂತನೆ ಮಾಡುವುದರಿಂದ.

ಕಾವ್ಯ ಶಾಸ್ತ್ರ ವಿನೋದೇನ ಕಾಲೋಗಚ್ಛತಿ ಧೀಮತಾಂ
ವ್ಯಸನೇನಚ ಮೂರ್ಖಾಣಾಂ ನಿದ್ರಯಾ ಕಲಹೇನವಾ.

ಬುದ್ಧಿವಂತರು ಕಾವ್ಯಾಧ್ಯಯನದಲ್ಲಿ, ಪ್ರೌಢ ಶಾಸ್ತ್ರ ಗ್ರಂಥಗಳನ್ನು ಓದುವುದರಲ್ಲಿ, ಉತ್ತಮ ಮಟ್ಟದ ಹಾಸ್ಯ ಮಾಡುವುದರಲ್ಲಿ ಕಾಲವನ್ನು ಕಳೆಯುತ್ತಾರೆ. ಮೂರ್ಖರು ವ್ಯಸನಗಳಲ್ಲಿ, ನಿದ್ರೆಯಲ್ಲಿದ್ದಾಗ ಕಲಹದಲ್ಲಿ ಕಾಲವನ್ನು ಹಾಳು ಮಾಡುತ್ತಾರೆ.

ವ್ಯಕ್ತಿಯು ತನ್ನ ತನು ಮನ ಬುದ್ಧಿಗಳನ್ನು ಸದಾ ಕ್ರಿಯಾಶೀಲವಾಗಿ ಇಟ್ಟುಕೊಳ್ಳಬೇಕು. ಆಲಸ್ಯದಿಂದ ಶರೀರದ ಆರೋಗ್ಯವು ಹಾಳಾಗುತ್ತದೆ. ಮನಸ್ಸು ದೆವ್ವದ ಕಾರ್ಯಾಗಾರವಾಗುತ್ತದೆ ಎಂದು ಅದಕ್ಕೇ ಹೇಳಲಾಗುತ್ತದೆ. ಮನಸ್ಸನ್ನು ಕ್ರಿಯಾಶೀಲವಾಗಿ ತೊಡಗಿಸದಿದ್ದರದು ಸ್ವಚಿಂತೆಯನ್ನು ಮಾಡುತ್ತಾ ವ್ಯಕ್ತಿಯನ್ನು ಹಾಳು ಮಾಡುತ್ತದೆ; ಇಲ್ಲವೆ ಇನ್ನೊಬ್ಬರ ಬಗ್ಗೆ ಆಡಿಕೊಳ್ಳುತ್ತಾ ತಾನು ಕಲಂಕಿತವಾಗುವುದಲ್ಲದೆ ಇನ್ನೊಬ್ಬರ ಜೀವನವನ್ನೂ ಹಾಳು ಮಾಡುತ್ತದೆ. ಆದ್ದರಿಂದ ವ್ಯಕ್ತಿಯು ತನ್ನ ಬದುಕಿನ ಪ್ರತಿ ಕ್ಷಣವನ್ನು ಸಾರ್ಥಕವಾಗಿ ವ್ಯಯಿಸುತ್ತ ಉದಾತ್ತ ಗುರಿಯನ್ನು ತಲುಪಲು ಪ್ರಯತ್ನಿಸಬೇಕು. ಏಕೆಂದರೆ ಹರಿದು ಹೋದ ನೀರು, ಒಡೆದು ಹೋದ ಮುತ್ತು ಹೇಗೆ ವ್ಯರ್ಥವೋ ಕಳೆದು ಹೋದ ಕಾಲವು ಎಂದೆಂದೂ ವಾಪಸು ಸಿಗುವುದಿಲ್ಲ. ಕಳೆದು ಕೊಂಡ ಸಂಪತ್ತನ್ನು ಮರಳಿ ಗಳಿಸಿಕೊಳ್ಳಬಹುದು; ಆದರೆ, ಕಾಲವನ್ನು ಮರಳಿ ಪಡೆಯಲು ಸಾಧ್ಯವಿಲ್ಲ. ★

ಸ್ವಾನುಭಾವಿ ಪೂಜ್ಯ ಮಾತಾಜಿ

ಗುರು ಲಿಂಗಾನಂದರಿಂದ ಸುದೀಕ್ಷೆಯ ಹೊಂದಿ
ಸ್ವಾನುಭಾವಿಯಾದಿರಲ್ಲಾ ಮಾತೆ ಮಹಾದೇವಿ।
ಗುರು ಬಸವನೊಲುಮೆಯ ಕುವರಿಯಾಗಿ
ಧೈರ್ಯ, ಧ್ಯೇಯ, ಸಾಧನೆ, ತ್ಯಾಗದಿಂದ ನೀವಾದಿರಲ್ಲಾ ಅಭಿನವ ಅಕ್ಕಮಹಾದೇವಿ।
ಗುರು ಬಸವ ನಾಮವ ದಹಿಸಲು ಪಂಚ ಪೀಠಾಧೀಶರೆಲ್ಲರ,
ಸಚಿವ, ಸಾಹಿತಿ, ಸಂಶೋಧಕರು ಉಗುಳುತ್ತಿರುವಾಗ್ನಿಯನ್ನು
ಬಸವನ ಪಾದೋದಕದಿಂದ ಶಮನಗೊಳಿಸಿ
ವೀರ ವಿರಾಗಿಣಿಯಾದಿರಲ್ಲ ಮಾತೆ ಮಹಾದೇವಿ।
ಗುರು ಬಸವಾದಿ ಪ್ರಮಥರ ವಚನಗಳ ಹೊತ್ತು
ವಚನ ವಾಹಿನಿಯಾದಿರಲ್ಲಾ ಮಾತೆ ಮಹಾದೇವಿ।
ಸಾವಿರಾರು ಅನಾಥ ಮಕ್ಕಳನ್ನು ಸಾಕಿ, ಬೆಳೆಸಿ, ಶಿಕ್ಷಣ ನೀಡಿ
ಜಗದ ಮಕ್ಕಳನ್ನು ನನ್ನ ಮಕ್ಕಳೆಂದು ತಿಳಿದು ಜಗನ್ಮಾತೆಯಾದಿರಲ್ಲಾ ಮಾತೆ ಮಹಾದೇವಿ ತಾಯಿ।
ಬಸವಾಕ್ಷರವೆಂಬ ಹಡಗನೇರಿ ಬಸವಾ ಬಸವಾ ಎಂದು
ಭವ ಸಾಗರವ ದಾಟಿ ಮೃತ್ಯುಂಜಯದೇವನನ್ನು
ಕೂಡಿದಿರಲ್ಲಾ ಮಾತೆ ಮಹಾದೇವಿ।

ಡಿ.ಎಸ್.ಎಂ

ಸಂಪಾದಕೀಯ:

ಸತ್ಯದ ತಲೆಯ ಮೇಲೆ ಹೊಡೆಯುವ ಶ್ರೀ ಎಸ್.ಎಂ. ಜಾಮದಾರ್

-ಮಾತಾಜಿ

ಒಡೆಯನಿಗೆ ಉಂಡಿಗೆಯ ಮುರಿದಿಕ್ಕಿದಂತೆ
ಎನ್ನಿಂದಲೇ ಆಯ್ತು, ಎನ್ನಿಂದಲೇ ಹೋಯ್ತು
ಎನ್ನುವವನ ಬಾಯಲ್ಲಿ ಮಿಟ್ಟಿ ಹುಡಿಯ
ಹೊಯ್ಯದೆ ಮಾಣ್ಬನೆ ನಮ್ಮ ಲಿಂಗದೇವ ?

ಎಂಬ ಧರ್ಮಪಿತರ ಒಂದು ವಚನವಿದೆ."ಹತ್ತು ಮತ್ತರ ಭೂಮಿ, ಬತ್ತುವ ಹಯನ" ಎಂಬ ವಚನದಲ್ಲಿ ಬರುವ ಎರಡು ಸಾಲುಗಳು ಬಹಳ ಮಹತ್ವಪೂರ್ಣ. ಮಾಲಿಕನ ಮನೆಯಲ್ಲಿ ಕೂಲಿ ಪಡೆದು ಅಡಿಗೆ ಮಾಡುವ ಆಳು ಒಂದು ದಿವಸ ಉಂಡೆಯನ್ನು ಮಾಡಿದ್ದೇನೆ ಎಂದು ಹೆಮ್ಮೆಯಿಂದ ಸ್ವಪ್ರಶಂಸೆ ಮಾಡಿಕೊಳ್ಳುತ್ತಾನೆ. ಮಾಲಿಕನು ತಂದು ಕೊಟ್ಟ ತುಪ್ಪ, ರವೆ; ಎಲ್ಲ ಮಾಡಿದಕ್ಕೆ ಕೂಲಿಯನ್ನು ಸಹ ಮಾಲಿಕನೇ ಕೊಡುತ್ತಾನೆ. ಎಲ್ಲವೂ ಮಾಲೀಕನದೇ ಇದ್ದರೂ ತನ್ನ ಪಾಕ ಕಲೆಯಿಂದ ರುಚಿಯಾಗಿ ಮಾಡಿ, ಪ್ರೀತಿಯಿಂದ ನೀಡಿದಾಗ ಯಜಮಾನ ಖಂಡಿತವಾಗಿಯೂ ಮೆಚ್ಚಿ ಶಹಭಾಸ್‌ಗಿರಿ ನೀಡದೆ ಇರುವುದಿಲ್ಲ. ಆದರೆ ಆತ ನಾನು ಮಾಡಿದೆ, ನಾನು ನೀಡಿದೆ ಎಂದು ಕೊಚ್ಚಿಕೊಂಡರೆ ಮಾತ್ರ ಅದು ಹಾಸ್ಯಾಸ್ಪದವಾಗಿ ತೋರುತ್ತದೆ.

ಇತ್ತೀಚಿಗೆ ಒಬ್ಬರು ಗಣ್ಯರು ನನ್ನ ಗಮನಕ್ಕೆ ಒಂದು ಪುಸ್ತಕ ತಂದು, ಅದರಲ್ಲಿ ಬಂದ ಕೆಲವು ಮಾತುಗಳ ಕಡೆಗೆ ಲಕ್ಷ್ಯವನ್ನು ಸೆಳೆದರು. ಅದು ಶ್ರೀ ಡಾ|| ಎಸ್.ಎಂ.ಜಾಮದಾರ್ ಬರೆದ "ಕೂಡಲ ಸಂಗಮ - ಬಸವ ಕಲ್ಯಾಣ ಪುನರುತ್ಥಾನದ ಪಕ್ಷಿನೋಟ" ಎಂಬ 96 ಪುಟದ ಪುಸ್ತಕ. ಇದನ್ನು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ 2006ರಲ್ಲಿ ಪ್ರಕಾಶಿಸಿದೆ.

ಈ ಕೃತಿಯ ಪ್ರಕಟಣೆಯ ಪ್ರಾಯೋಜಕರು ಧಾರವಾಡದ ಶ್ರೀ ಚಂದ್ರಕಾಂತ ಗುರಪ್ಪ ಬೆಲ್ಲದ. ಅವರನ್ನಂತೂ ಮತಿಗೆಟ್ಟು ಹೊಗಳಲಾಗಿದೆ. ಹೊಗಳಿಕೆಯ ಪಟ್ಟಿಯನ್ನು ನೋಡಿದರೆ ಈವರೆಗೂ ಬಸವ ತತ್ವ, ವಚನ ಸಾಹಿತ್ಯ ಪ್ರಚಾರದ ಎಲ್ಲ ಕೆಲಸಗಳನ್ನು ಬೆಲ್ಲದ ಒಬ್ಬರೇ ಮಾಡಿರಬೇಕು ಎಂಬ ಭಾವ ಓದುಗರಿಗೆ ಉಂಟಾಗುತ್ತದೆ. ಒಂದು ಉದಾಹರಣೆ ಕೊಡಬಹುದು. ಬೆಲ್ಲದರ ಸಾಧನೆಯಲ್ಲಿ ಇಂಗಳೇಶ್ವರದ ವಚನ ಮಂಟಫ ನಿರ್ಮಾಣವು ಸೇರಿದೆ. ನಾಡಿನ ಬಹುಪಾಲು ಜನಕ್ಕೆ ಗೊತ್ತಿದೆ ಇಂಗಳೇಶ್ವರದ ವಿರಕ್ತ ಮಠಾಧೀಶರಾದ ಪೂಜ್ಯರು ಹಲವಾರು ದಶಕಗಳಿಂದ ಜನರಿಂದ ದೇಣಿಗೆ ಪಡೆದು ಪರಿಶ್ರಮ ಪಟ್ಟು ಬಸವೇಶ್ವರ ಮತ್ತು ಅಲ್ಲಮಪ್ರಭುದೇವರ ವಚನಗಳನ್ನು ಕಲ್ಲಿನ ಮೇಲೆ ಕೆತ್ತಿಸಿ, ವಚನ ಮಂಟಪಗಳನ್ನು ಮಾಡುತ್ತಾ ಬಂದಿದ್ದಾರೆ ಎಂಬುದು.

ಬೆಂಗಳೂರಿನಲ್ಲಿ ಅನೇಕ ಸಂಘ - ಸಂಸ್ಥೆಗಳವರು ಸೇರಿ ಬಸವ ಜಯಂತಿಯನ್ನು ಅದ್ದೂರಿಯಾಗಿ ಮಾಡಿದರು. ಆಗ ನಾವುಗಳು ವಿಸ್ತಾರವಾಗಿ ನೀರು ನಿಂತ ಒಂದು ಪೋಸ್ಟರ್ ಖರೀದಿಸಿ ಅದರಲ್ಲಿ ಬಸವ ಸಾಗರ ಎಂದು ಶೀರ್ಷಿಕೆ ಕೆಳಗೆ ಬರೆದು ಚಿತ್ರವನ್ನು ಸಿದ್ಧಪಡಿಸಿದೆವು. ಆ ಚಿತ್ರವನ್ನು ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರಿಗೆ ನಮ್ಮ ಕೆಲವು ಪ್ರತಿನಿಧಿಗಳು ಸಮರ್ಪಿಸಿದರು. ಜೊತೆಗೆ ಒಂದು ಮೆಮೊರ್‍ಯಾಂಡಮ್ ಕೊಡಲಾಯಿತು."ಅದಕ್ಕೆ ಇಂದಿರಾ ಸಾಗರ ಎಂದು ಹೆಸರಿಡುವ ಕುರಿತು ಚರ್ಚೆ ನಡೆದಿದೆ; ಹಾಗೆ ಮಾಡಬಾರದು. ವಿಶ್ವಗುರು ಬಸವಣ್ಣನವರ ಐಕ್ಯಕ್ಷೇತ್ರ ಮತ್ತು ಐಕ್ಯ ಮಂಟಪಕ್ಕೆ ಸಂಬಂಧಿಸಿದ ಜಲಾಶಯ ನಾರಾಯಣಪುರ ಜಲಾಶಯ. ಇದಕ್ಕೆ ಬಸವ ಸಾಗರ ಎಂಬುದೇ ಸೂಕ್ತ. ಹಿಂದೆ ಸನ್ಮಾನ್ಯ ಗುಂಡೂರಾವ್ ಅವರು ಬಸವ ಜಯಂತಿಗೆ ರಜೆ ಕೊಡುವ ಮೂಲಕ ವಿಶೇಷ ಕೀರ್ತಿ ಪಡೆದರು. ತಾವು ಬಸವ ಸಾಗರ ಎಂದು ನಾರಾಯಣಪುರ ಜಲಾಶಯಕ್ಕೆ ಹೆಸರಿಟ್ಟು ಕೀರ್ತಿಶಾಲಿಗಳಾಗಬೇಕು". ಎಂದು ಮನವಿಯಲ್ಲಿ ಕಾಣಿಸಲಾಗಿತ್ತು. ಆಗ ಆ ಚಿತ್ರ ಪಡೆದುಕೊಂಡು ರಾಮಕೃಷ್ಣ ಹೆಗಡೆಯವರು ಮುಗುಳ್ನಕ್ಕು 'ಹಾಗೆ ಆಗಲಿ, ಮಾಡೋಣ' ಎಂದರು. ಸತ್ಯವನ್ನು

ಮುಚ್ಚಿ ಹಾಕುವ ಕೆಲಸ ಆತ್ಮ ವಂಚನೆಯೇ ಸರಿ ಎಂದು ಹೇಳದೆ ನಮಗೆ ಗತ್ಯಂತರವಿಲ್ಲ.

ಡಾ|| ಜಾಮದಾರ ಅವರ ಅಪ್ರಾಮಾಣಿಕತೆಯ ಪರಾಕಾಷ್ಠೆಯನ್ನು ಒಂದು ವಿಷಯದಿಂದ ಗುರುತಿಸಬಹುದು. ತಮ್ಮ ಪುಸ್ತಕದಲ್ಲಿ ಎಲ್ಲೆಲ್ಲಿಯೂ ಅಂದು ಅಖಿಲ ಭಾರತ ವೀರಶೈವ ಮಹಾ ಸಭಾ ಅಧ್ಯಕ್ಷರಾಗಿದ್ದ ಶ್ರೀ ಐ.ಎಂ.ಮುಗದುಮ್ ಅವರ ಹೆಸರನ್ನು ಪ್ರಸ್ತಾಪಿಸದೆ ಇರುವುದು. ಚಂದ್ರಕಾಂತ್ ಬೆಲ್ಲದ ಅವರನ್ನು ಪುಸ್ತಕ ಮುದ್ರಣಕ್ಕೆ (ಹಣ ಕೊಟ್ಟು) ಪ್ರಾಯೋಜಕತ್ವ ಪಡೆದುದಕ್ಕೆ ಹೊಗಳಿ ಅಟ್ಟಕ್ಕೇರಿಸಿರುವ ಜಾಮದಾರ್, ಕೂಡಲ ಸಂಗಮದ ಇಂದಿನ ಸ್ಥಿತಿಗೆ ಮೂಲ ಮತ್ತು ಮುಖ್ಯ ಕಾರಣರಾಗಿರುವ ಐ.ಎಂ.ಮುಗದುಮ್ ಅವರ ಹೆಸರನ್ನು ಪ್ರಸ್ತಾಪಿಸದೆ ಬಹುದೊಡ್ಡ ದ್ರೋಹ ಮಾಡಿದ್ದಾರೆ.

ಸತ್ಯ ಸಂಗತಿ ಏನು?

1987ರಲ್ಲಿ ಶ್ರೀ.ಐ.ಎಂ.ಮುಗದುಮ್ ಅ.ಭಾ.ವೀ.ಮಹಾಸಭಾ ಅಧ್ಯಕ್ಷರಿದ್ದರು. ಶ್ರೀ ದಯಾನಂದ ಸ್ವಾಮಿ ಸಂಚಾಲಕರಾಗಿದ್ದರು. ಒಮ್ಮೆ ನಮ್ಮ ಬಸವ ಮಂಟಪಕ್ಕೆ ಬಂದು 'ಕೂಡಲ ಸಂಗಮೇಶ್ವರನ ಗುಡಿಯನ್ನು ಕೀಳುತ್ತಿದ್ದಾರೆ. ಅನ್ಯಾಯವಾಗುತ್ತಿದೆ. ಇದನ್ನು ತಡೆಯಬೇಕು' ಎಂದರು. ಒಂದನೆಯದಾಗಿ ನಮಗೆ ಸಾಮಾಜಿಕ ಹೋರಾಟದಲ್ಲಿ ಆಗ ಆಸಕ್ತಿ ಇರಲಿಲ್ಲ ; ಎರಡನೆಯದಾಗಿ ಸ್ಥಾವರ ಪೂಜಕರು ನಾವಾಗಿ ಇರದ್ದರಿಂದ ಆ ಬಗ್ಗೆ ಒಲವು ಇರಲಿಲ್ಲ, ಬಸವೈಕ್ಯ ಕ್ಷೇತ್ರ ಎಂಬ ಬಗ್ಗೆ ಅಭಿಮಾನ ಮಾತ್ರ ಇತ್ತು. ಹೀಗಾಗಿ ಶ್ರೀ ಮುಗದುಮ್ ಅವರಿಗೆ ಬೆಂಬಲ ಸೂಚಿಸಲಿಲ್ಲ. ಸ್ವಲ್ಪ ನಿರಾಶೆಯಿಂದಲೇ ಅವರು ಎದ್ದು ಹೋದರು. ಪುನಃ ಒಂದೆರಡು ತಿಂಗಳು ಕಳೆದ ಬಳಿಕ ಅವರು ಮತ್ತು ದಯಾನಂದ ಸ್ವಾಮಿ ಬಸವ ಗಂಗೋತ್ರಿಯಲ್ಲಿ ಬಂದು ಭೇಟಿಯಾಗಿ, "ಕೂಡಲ ಸಂಗಮದ ದೇವಾಲಯದ ಹೊರಭಾಗವನ್ನೆಲ್ಲ ಕಿತ್ತಿದ್ದಾರೆ. ಗರ್ಭಗುಡಿ ಮಾತ್ರ ಉಳಿದಿದೆ. ಅದನ್ನು ಬಿಚ್ಚಲು ಹೋದಾಗ ಗ್ರಾಮಸ್ಥರು ಅಡ್ಡ ಮಲಗಿ ಪ್ರತಿಭಟನೆ ಮಾಡಿದ್ದಕ್ಕೆ ನಿಲ್ಲಿಸಿದ್ದಾರೆ. ಈಗ ಸುಮ್ಮನೆ ಕುಳಿತುಕೊಳ್ಳುವುದು ಸರಿಯಲ್ಲ." ಎಂದು ಹೇಳಿದರು. ಆಗ ಪೂಜ್ಯ ಗುರುಗಳು ಮತ್ತು ನಾನು ಶ್ರೀ ಐ.ಎಂ.ಮುಗದುಮ್ ಅವರೊಡನೆ ನಡೆಸಿದ ಸಂವಾದ ಹೀಗಿದೆ:

ಪ್ರಶ್ನೆ: ನೀವೇ ಚೀಫ್ ಇಂಜನಿಯರ್ ಇದ್ದಾಗ ಮಾಡಿದ ಯೋಜನೆ. ಆಗೇಕೆ ನೀವು ಆಲೋಚಿಸಲಿಲ್ಲ ?

ಮ: ನಾನು ಧರ್ಮದಲ್ಲಿ ಶ್ರದ್ಧೆ ಇಲ್ಲದವನಾಗಿದ್ದೆ ಆಗ. ಆದರೂ ನಮ್ಮ ಧಾರ್ಮಿಕ ಕ್ಷೇತ್ರ ಎಂಬ ಅಭಿಮಾನವಿತ್ತು. ನಾಲತ್ವಾಡದ ಬಳಿ ಅಣೆಕಟ್ಟು ಮಾಡುವ ಯೋಜನೆಯನ್ನು ಅನೇಕರು ಮುಂದಿಟ್ಟಿದ್ದರು.ಅಲ್ಲಿ ಆಗಿದ್ದರೆ ಸಂಗಮೇಶ್ವರ ಗುಡಿಯ ಕಳಸ ಮುಳುಗುತ್ತಿತ್ತು. ಅದನ್ನು ತಪ್ಪಿಸಲು ನಾರಾಯಣಪುರ ಬಳಿ ಮಾಡಲಾಯಿತು.ಬಸವೇಶ್ವರ ಐಕ್ಯ ಮಂಟಪವನ್ನೂ ಉಳಿಸಿಕೊಳ್ಳಲು ಸಾಧ್ಯವೇ ಇರಲಿಲ್ಲ. ಏಕೆಂದರೆ ಅದು ಬಹಳ ಕೆಳಗಡೆ ಇದೆ. ಅನಿವಾರ್ಯ-ವಾಗಿ ಕೊಳವೆ ಭಾವಿ ಕಟ್ಟಲು ನಿರ್ಧರಿಸಿ, ನಾರಾಣಯಪುರ ಬಳಿ ಅಣೆಕಟ್ಟು ಕಟ್ಟಿದೆವು.

ಪ್ರ: ಬಿಜಾಪುರ-ಗುಲ್ಬರ್ಗಾ ಸದಾ ಬರಗಾಲದಿಂದ ಬಳಲುವ ಜಿಲ್ಲೆಗಳು. ಅಣೆಕಟ್ಟಿನಿಂದ ಸಮೃದ್ಧಿ ಉಂಟಾಗುತ್ತದೆ. ಜನರಿಗೆ ಉಪಕಾರವಾಗುವುದಾದರೆ ಒಂದು ದೇವಾಲಯ ಮುಳುಗಿದರೆ ಏನಂತೆ?

ಮ: ಅಣೆಕಟ್ಟು ಪೂರಾ ಮುಗಿದಿದೆ.ಜಲಾಶಯದಲ್ಲಿ ಪೂರ್ಣಮಟ್ಟದ ನೀರು ನಿಂತಾಗ ಸಹಿತ ದೇವಾಲಯದ ಅಡಿ ಭಾಗ ಒಂದೂವರೆ ಮೀಟರ್‌ ಎತ್ತರದಲ್ಲೇ ಇರುತ್ತದೆ. ದೇವಾಲಯ ಮೂಲ ಸ್ಥಳದಲ್ಲಿ ಇರುವುದೇ ಸೂಕ್ತ. ಮುಸ್ಲೀಮರ ಒಂದು ಗೋರಿ(ಅದು ಡೆಮ್ಮಿ ಇರಲೂ ಬಹುದು) ಇದ್ದರೂ ಅದನ್ನು ಕೆಡವಿಸದೆ ಸರ್ಕಾರವು ಹೆದ್ದಾರಿಯನ್ನು ಬದಲಿಸುತ್ತದೆ. ರೇಲ್ವೆ ಲೈನ್ ಬದಲಿಸುತ್ತದೆ. ಸಂಗಮೇಶ್ವರ ದೇವಾಲಯಕ್ಕೆ 2000 ವರ್ಷಗಳ ಇತಿಹಾಸವಿದೆ.

ಪ್ರ: ನೀವೇ ಹೋರಾಡಬಹುದಲ್ಲ?

ಮ: ನಮ್ಮ ಹಿಂದೆ ಜನರು ಇಲ್ಲ. ನೀವು ಬಂದರೆ ಜನ ಬೆಂಬಲ ಕ್ರೋಡೀಕರಿಸಬಹುದು.

ಆಗ ನಾವು ಆಲೋಚಿಸಿದೆವು. "ನಿಜ; ಸಂಗಮೇಶ್ವರ ದೇವಾಲಯ ಒಂದು ಐತಿಹಾಸಿಕ ಸ್ಮಾರಕ, ಶ್ರದ್ಧಾ ಕೇಂದ್ರ. ನಮ್ಮ ಧರ್ಮಗುರು ಬಸವಣ್ಣನವರಿಗೆ ಸಾಕ್ಷಾತ್ಕಾರವಾದುದು, ನವ ಧರ್ಮ ದ್ರಷ್ಟಾರರಾದುದು ಅದೇ ಪವಿತ್ರ ಸ್ಥಾನದಲ್ಲಿ ಅದನ್ನು ಉಳಿಸಿಕೊಳ್ಳಲೇಬೇಕು." ಆಗ ಒಂದು ಮಾತು ಹೇಳಿದೆ; "ನಾವು ಹೋರಾಟಕ್ಕೆ ಬಂದರೆ ಕೆಲವು ಅನಾನುಕೂಲತೆಗಳಿವೆ. ಏನೆಂದರೆ ನಾವು ಯಾವುದಕ್ಕಾದರೂ ಕೈ ಹಾಕಿದರೆ ಅದರ ವಿರುದ್ಧ ಹೋರಾಡಲು ಕೆಲವು ಮಠಾಧೀಶರು ಸದಾ ಸಿದ್ಧ. ನಂತರ ನೀವು ಇವರನ್ನು ಏತಕ್ಕಾದರೂ ಕರೆದೆವೋ ಎಂದು ಬೇಸರ ಪಡಬಾರದು."

"ಅವರಾರೂ ಚಳುವಳಿಗೆ ಬರುವವರಲ್ಲ; ಅವರ ಅನುಯಾಯಿಗಳಲ್ಲಿ ಸಾಮಾಜಿಕ ಕಳಕಳಿ ಇಲ್ಲ. ನೀವು ಬನ್ನಿರಿ." ಆಗ ಮತ್ತೊಂದು ಮಾತು ಹೇಳಿದೆವು, "ನಮಗೆ ತಾಂತ್ರಿಕ ಜ್ಞಾನವಿಲ್ಲ. ಆ ದಿಶೆಯಲ್ಲಿ ನೀವು ಜನರಿಗೆ ಉತ್ತರಿಸಬೇಕು. ನಾವು ಜನ ಸಂಘಟನೆ ಮಾಡುತ್ತೇವೆ." ಶ್ರೀ.ಐ.ಎಂ.ಮಗದುಮ್ ಒಪ್ಪಿದರು. ಪ್ರಮುಖ ಸ್ವಾಮಿಗಳನ್ನು ಸಭೆಗೆ ಆಹ್ವಾನಿಸಿದರು. ಚರ್ಚೆಯ ನಂತರ ನಿರ್ಣಯಗಳನ್ನು ತೆಗೆದುಕೊಂಡು ಸುದೀರ್ಘವಾದ ಮನವಿಯನ್ನು ತಯಾರು ಮಾಡಿ ಸರ್ಕಾರಕ್ಕೆ ಕೊಡಲಾಯಿತು.

ತಾಂತ್ರಿಕ ಸಮಿತಿಯೊಂದನ್ನು ರಚಿಸಿದ ಸರ್ಕಾರವು "ದೇವಾಲಯವು ಒಂದು ಬಂಡೆಯ ಮೇಲೆ ಇದ್ದರೂ ಆ ಬಂಡೆಯ ಕೆಳಗೆ ಸಡಿಲವಾದ (ಎರೆ)ಮಣ್ಣು ಇರುವುದರಿಂದ ಅಲ್ಲೇ ದೇವಾಲಯ ಉಳಿಸುವುದು ಸೂಕ್ತವಲ್ಲ" ಎಂದು ತಿಳಿಸಿದಾಗ ಶ್ರೀ ಐ.ಎಂ.ಮಗದುಮ್ ಸರ್ಕಾರಕ್ಕೆ ಚಾಲೆಂಜ್ ಮಾಡಿದರು. "ವಿದೇಶಗಳ ತಂತ್ರಜ್ಞರನ್ನೂ ಕರೆಸಿರಿ; ನಾನೆಲ್ಲ ಮನವರಿಕೆ ಮಾಡುತ್ತೇನೆ" ಎಂದರು. ಆಗ ಸರ್ಕಾರವು ಶ್ರೀ.ಬಿ.ಡಿ.ಜತ್ತಿಯವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿತು. ಶ್ರೀ ಮಗೆದುಮ್ ಮತ್ತು ನಮ್ಮಗಳ ಹೋರಾಟ ಮೂಲಸ್ಥಾನದಲ್ಲೇ ಸಂಗಮೇಶ್ವರ ದೇವಾಲಯ ಉಳಿಯಬೇಕೆಂದಿದ್ದರೆ ಸಿರಿಗೆರೆ ಶ್ರೀಗಳದು ಬೇರೆ ಕಡೆ ಸ್ಥಳಾಂತರವಾಗಿ, ನಿರ್ಮಾಣವಾಗಬೇಕು ಎಂಬುದಾಗಿತ್ತು. ಶ್ರೀ ಜತ್ತಿಯವರು ಹೆದರಿ, ಅನಾರೋಗ್ಯದ ನೆಪ ಒಡ್ಡಿ ರಾಜೀನಾಮೆ ಕೊಟ್ಟರು. ಆ ಜಾಗಕ್ಕೆ ಶ್ರೀ ವಿಶ್ವನಾಥ ರೆಡ್ಡಿ ಮುದ್ನಾಳ್ ಕುಳಿತರು.

ತಂತ್ರಜ್ಞಾನಿಗಳ ಮೀಟಿಂಗ್‌ದಲ್ಲಿ ಮಗದುಮ್ ಮನವರಿಕೆ ಮಾಡಿಕೊಟ್ಟರು. ಮುದ್ನಾಳ್ ಸಮಿತಿ ರಾಜ್ಯದಾದ್ಯಂತ ಸಂಚಾರ ಮಾಡಿದಾಗ ನಮ್ಮ ಸಂಘಟನೆಯ ಕಾರ್ಯಕರ್ತರು ಮನವಿಗಳನ್ನು ಸಲ್ಲಿಸಿದರು. ಕೂಡಲ ಸಂಗಮಕ್ಕೆ ಮುದ್ನಾಳ್ ಸಮಿತಿಯವರು ಬಂದಾಗ ಸಾವಿರಾರು ಜನ ಪ್ರದರ್ಶನ ಮಾಡಿದರು. ಅಷ್ಟು ಹೊತ್ತಿಗೆ ನಾವು ಜಾಗ ಖರೀದಿಸಿದ್ದೆವು. ಅಂದು ಬಂದ ಸಹಸ್ರಾರು ಜನರಿಗೆ ಪ್ರಸಾದವನ್ನೂ ಮಾಡಿಸಿದೆವು.

ಜನಾಭಿಪ್ರಾಯ ಸಂಗ್ರಹ ಮಾಡಿದ ಬಳಿಕ,

ಮುದ್ನಾಳ್ ಸಮಿತಿಯವರು ಬೆಂಗಳೂರಿನಲ್ಲಿ ಮೀಟಿಂಗ್ ಆರಂಭಿಸಿದರು. ಅಂತಿಮ ಘಟ್ಟಕ್ಕೆ ಬರುತ್ತಿತ್ತು. ಬಹಳ ವಿಚಿತ್ರವೆಂದರೆ, ನನಗೆ ಅದೇ ದಿನ ಕೇರಳದಲ್ಲಿ ಒಂದು ಕಾರ್ಯಕ್ರಮಕ್ಕೆ ಆಹ್ವಾನವಿದ್ದು ವಿಮಾನದ ಟಿಕೆಟ್ ಸಹ ಅವರು ಕಳಿಸಿದ್ದರು. ಆದರೆ ಮಗದುಮ್ ಫೋನ್ ಮಾಡಿ, "ನೀವು ಹೋಗಬೇಡಿ. ಏಕೆಂದರೆ ಸಮಿತಿಯವರಲ್ಲಿ ಕುತಂತ್ರ ನಡೆಯುತ್ತಿದೆ. ನಾನಂತೂ ದೇವಸ್ಥಾನ ಸ್ಥಳಾಂತರಕ್ಕೆ ಒಪ್ಪುವುದಿಲ್ಲ. ಒಂದು ವೇಳೆ ವಿರುದ್ಧವಾಗಿ ನಿರ್ಣಯ ತೆಗೆದುಕೊಂಡರೆ ತಕ್ಷಣ ಪ್ರತಿಭಟನಾ ಪ್ರದರ್ಶನ ಮಾಡಬೇಕಾಗುತದೆ. ಜನರನ್ನು ಸಂಘಟಿಸಬೇಕಾಗುತ್ತದೆ." ಎಂದರು. ನಾನು ಕೇರಳ ಕಾರ್ಯಕ್ರಮಕ್ಕೆ ಹೋಗುವುದನ್ನು ರದ್ದು ಮಾಡಿದೆ.

ಅಂದು ಸಂಜೆ 5 ಗಂಟೆಗೆ ಎಲ್ಲ ಸದಸ್ಯರ ಸಹಿ ಆಗುವ ಹಂತದಲ್ಲಿ ಮಗದುಮ್, "ಇಷ್ಟೆಲ್ಲ ಮನವರಿಕೆ ಮಾಡಿಕೊಟ್ಟೂ ಸಹ ನೀವು ದುರುದ್ದೇಶದಿಂದ ವರ್ತಿಸುತ್ತಿದ್ದೀರಿ. ನಾನು ಈ ವರದಿ ಒಪ್ಪುವುದಿಲ್ಲ." ಎಂದು ಪ್ರತಿಭಟಿಸಿ ಹೊರಬಂದರು. ಫೋನ್ ಮೂಲಕ ಆದುದನ್ನೆಲ್ಲ ವಿವರಿಸಿದರು. "ಸಮಾಜಕ್ಕೆ ಹಿತ ಮಾಡುವ ಬದಲು ಸಿರಿಗೆರೆ ಸ್ವಾಮಿಗಳ ಪ್ರತಿಷ್ಠೆ ಕಾಯಲು ವಿಶ್ವನಾಥ ರೆಡ್ಡಿಯವರು

ವರ್ತಿಸುತ್ತಿರುವುದೇಕೆ ಎಂಬುದೇ ಅರ್ಥವಾಗುತ್ತಿಲ್ಲ." ಎಂದರು.

ಸ್ವಲ್ಪ ಹೊತ್ತಿನಲ್ಲೇ ವಿಶ್ವನಾಥ ರೆಡ್ಡಿಯವರ ಫೋನ್ ಬಂದಿತು. ಬಸವ ಮಂಟಪಕ್ಕೆ ಅವರು ಬರಲಿರುವುದಾಗಿ ಹೇಳಿದರು. ಅವರ ಪತ್ನಿಯನ್ನು ಕರೆದುಕೊಂಡು ಬಂದರು. ಪೂಜ್ಯ ಅಪ್ಪಾಜಿಯವರಿಗೆ ಬಹಳ ಹಿಂದಿನಿಂದಲೂ ಪರಿಚಯ. ನನಗೆ 1975ರಿಂದ ಪರಿಚಯವಿತ್ತು; ಸಂತೋಷದಿಂದ ಬರಮಾಡಿಕೊಂಡೆವು.

" ನೀವು ಒಂದು ಉಪಕಾರ ಮಾಡಬೇಕಲ್ಲ." ಎಂದರು, ಅಚ್ಚರಿಯಾಯಿತು. "ಮಗದುಮ್ ಯಾರ ಮಾತೂ ಕೇಳುವವರಲ್ಲ, ನಿಮ್ಮ ಮಾತಿಗೆ ಗೌರವ ಕೊಡುವಂತೆ ಕಾಣುತ್ತದೆ. ಅವರು ಹಠ ಬಿಡಲಿ. ಸರ್ಕಾರದವರು 40-50 ಲಕ್ಷ ಖರ್ಚು ಮಾಡಿ ಬೇರೆ ಜಾಗದಲ್ಲಿ ಹೊಸ ಗುಡಿ ಕಟ್ಟಿಸಿಕೊಡಲು ಸಿದ್ಧರಿದ್ದಾರೆ, ಒಪ್ಪಿಸಿರಿ."

"ವಿಶ್ವನಾಥ ರೆಡ್ಡಿಯವರೇ, ಸರ್ಕಾರ ಬಂಗಾರದ ಗುಡಿ ಕಟ್ಟಿದರೂ ಭಾವುಕ ಭಕ್ತರು ಮೂಲ ಸ್ಥಾನಕ್ಕೇ ಹೋಗಿ ಬರುವರು. ತಲೆ ಇಲ್ಲದಂತೆ ಯೋಜನೆ ಹಾಕಿ ಹೊಸ ಆವರಣದಲ್ಲಿ ನಾಲ್ಕಾರು ಗುಡಿಗಳನ್ನು ಕಟ್ಟಿಸಲಾಗಿದೆ. ಅವೆಲ್ಲ ಜಾಲಿ ಕಂಟಿಯಲ್ಲಿ ಮುಚ್ಚಿ ಹೋಗುತ್ತಿವೆ. ಹಣವು ವ್ಯರ್ಥ. ಎರಡು ನದಿಗಳ ಸಂಗಮದ ಸುಂದರ ತಾಣ ಬಿಟ್ಟು ನೀವು ಒಂದು ಕಿಲೋ ಮೀಟರ್ ದೂರದಲ್ಲಿ ಸಂಗಮೇಶ್ವರನ ಗುಡಿ ಕಟ್ಟಿಸುವುದರಲ್ಲಿ ಅರ್ಥವಿದೆಯೆ? ಒಂದು ವೇಳೆ ಗುಡಿಯು ನೀರಿನಲ್ಲಿ ಪೂರ್ಣವಾಗಿ ಮುಳುಗುತ್ತಿದ್ದರೆ ಆ ವಿಷಯ ಬೇರೆ.

ಈ ವರೆಗೂ ನಾನು ಮೂಲಸ್ಥಾನದಲ್ಲೇ ಗುಡಿ ಉಳಿಯಬೇಕು ಎಂದು ಹೋರಾಟ ಕೈಗೊಂಡುದಲ್ಲದೆ ಜನಾಭಿಪ್ರಾಯ ಸಹ ಸಂಗ್ರಹಿಸಿ ಕೊಟ್ಟು ಈಗ ನನ್ನ ವಿಚಾರ ಬದಲು ಮಾಡಿದರೆ ನನಗೆ ತಲೆ ಕೆಟ್ಟಿದೆ ಎಂದು ಜನರು ಅಂದು ಕೊಳ್ಳುವುದಿಲ್ಲವೆ?" ಎಂದು ಹೇಳಿದೆ.

ವಿಶ್ವನಾಥ ರೆಡ್ಡಿಯವರಿಗೆ ಭಯಂಕರ ಕೋಪ ಬಂದು ಪ್ರಸಾದಕ್ಕೆ ಸಿದ್ಧ ಮಾಡಿದ್ದರೆ ಅದನ್ನೂ ಬಿಟ್ಟು ಹೊರಟರು. ಅವರ ಪತ್ನಿ, "ಬೇಡ್ರಿ ಪ್ರಸಾದ ಬಿಟ್ಟು ಹೋಗಬಾರದು, ವಿಚಾರ ಬೇರೆ ಆದರೇನಂತೆ." ಎಂದು ಹೇಳುತ್ತಿದ್ದರೂ ಕೇಳದೆ ಸಿಡಿಗುಟ್ಟುತ್ತಾ ಹೋದರು. ಸುಮಾರು 13 ವರ್ಷಗಳ ಆತ್ಮೀಯ ಸಂಬಂಧವನ್ನು ಅಂದು ಕಳೆದುಕೊಂಡರು. (ನಮ್ಮ ಸಮಾಜದ ಗಣ್ಯರ ಬಗ್ಗೆ ನನಗೆ ವಿಚಿತ್ರ ಎನಿಸುತ್ತದೆ, ಸತ್ಯ ಹೇಳುವುದೇ ತಪ್ಪು, ನ್ಯಾಯಕ್ಕಾಗಿ ಹೋರಾಡುವವರೇ ಅಪರಾಧಿಗಳೆಂಬಂತೆ, ಅಸ್ಪೃಶ್ಯರೆಂಬಂತೆ ವರ್ತಿಸುತ್ತಾರೆ.)

ಮರು ದಿವಸ ವರದಿ ರೆಡಿಯಾಗಿ, ಸಹಿಯಾಯಿತು. ಮೂಲ ಸ್ಥಳದಲ್ಲಿಯೇ ದೇವಾಲಯವನ್ನೂ ಆಧುನಿಕ ತಂತ್ರಜ್ಞಾನ ಬಳಸಿ ಕಟ್ಟಿಕೊಡುವುದಾಗಿ ಸಮಿತಿ ಒಪ್ಪಿತು. ಆದರೆ......... ಮೀಟಿಂಗ್ ಮುಗಿಸಿಕೊಂಡು ಬಂದು ಮನೆ ಸೇರಿದ ಶ್ರೀ ಮಗದುಮ್ ದೂರವಾಣಿಯಲ್ಲಿ ನಡೆದ ಸಂಗತಿಯನ್ನೆಲ್ಲ ತಿಳಿಸಿದರು. "ಮೂಲ ಸ್ಥಾನದಲ್ಲಿ ಸಂಗಮೇಶ್ವರ ದೇವಾಲಯವನ್ನು ಉಳಿಸಿಕೊಳ್ಳಲು ಮುದ್ನಾಳ್ ಸಮಿತಿ ಒಪ್ಪಿಗೆ ನೀಡಿದೆ. ಆದರೆ ನಿಮ್ಮ ಸಂಸ್ಥೆಯ ಮೇಲೆ ಸೇಡು ತೀರಿಸಿಕೊಂಡಿದೆ." ಎಂದರು.

ಪೂಜ್ಯ ಅಪ್ಪಾಜಿಯವರಿಗೆ, ನನಗೆ ಆಶ್ಚರ್ಯವಾಯಿತು. ಹೇಗೆ, ಏಕೆ ಎಂದು ಕೇಳಿದೆವು. ಹೊಸ ಸಂಕೀರ್ಣದ ಒಂದು ಕಿಲೋಮೀಟರ್ ವ್ಯಾಪ್ತಿಯೊಳಗೆ ಯಾವುದೇ ಖಾಸಗಿ ಟ್ರಸ್ಟ್‌ಗಳು ಇರತಕ್ಕದಲ್ಲ ಎಂದು ಸೇರಿಸಲಾಗಿದೆ. ತಿರುವುಗಳು ಇರುವಲ್ಲಿ ರಸ್ತೆಯನ್ನು ನೇರಗೊಳಿಸಬೇಕು ಎಂದೂ ಸೇರಿಸಲಾಗಿದೆ. ಇದರಿಂದ ನಿಮ್ಮ ಜಾಗವನ್ನು ಕಳೆಯಬೇಕೆಂಬ ಹುನ್ನಾರವಿದೆ. ನನಗೂ ತಿಳಿಯಿತು. ಇದು ನಿಮ್ಮ ಮೇಲಿನ ದ್ವೇಷಕ್ಕಾಗಿ ಮಾಡಿರುವ ಕೆಲಸ ಎಂದು. ಹೇಗಿದ್ದರೂ ನ್ಯಾಯಾಲಯ ಇದೆ. ನಿಮ್ಮದೂ ಸಾರ್ವಜನಿಕ ಸಂಸ್ಥೆ. ಅದಕ್ಕಾಗಿ ಈ ಬಗ್ಗೆ ಆಕ್ಷೇಪ ಮಾಡಲಿಲ್ಲ." ಎಂದರು.

ನೀವೇ ಆಲೋಚಿಸಿರಿ. ಕೆಲವು ಮಠಾಧಿಕಾರಿಗಳಿಂದ ಪ್ರಚೋದಿತರಾಗಿ ವಿಶ್ವನಾಥ ರೆಡ್ಡಿ ಮುದನಾಳ್ ಎಂಥಾ ದ್ವೇಷದ ವರ್ತನೆ ಮಾಡಿದ್ದಾರೆ ಎಂಬುದನ್ನು. ಪುಟ 10-11ರಲ್ಲಿ ಶ್ರೀ ಜಾಮದಾರ ಬರೆದಿರುವ ಮಾತುಗಳನ್ನು ಮತ್ತು ನಮ್ಮನ್ನು ಕುರಿತು ಬರೆದ ಮಾತುಗಳನ್ನು ಗಮನಿಸೋಣ. ಪುಟ 11, ಸಾಲು, 1ರಿಂದ 7. "ಆ ಊರಿನಲ್ಲಿ 3 ಗುಂಪುಗಳಾಗಿ ಒಂದೊಂದು

ಗುಂಪು ಒಂದೊಂದು ರಾಜಕೀಯ ಪಕ್ಷದ ಪ್ರಭಾವ ತೋರಿಸಿ ತಮ್ಮದೇ ಆದ ಗುರಿಗಾಗಿ ನಡೆಸುತ್ತಿದ್ದ ಹೋರಾಟ ಅಲ್ಲಿಯ ಅಭಿವೃದ್ಧಿಗೆ ಅಡ್ಡಿಯಾದವು. "ಸರ್ಕಾರ ಸಂಗಮ ಕ್ಷೇತ್ರದಲ್ಲಿ ಕೈ ಹಾಕುವ ಅವಶ್ಯಕತೆಯಿಲ್ಲ ಎಂಬುದು ಮಾತೆ ಮಹಾದೇವಿ ಎಂಬ ಮಹಿಳಾ ಜಗದ್ಗುರುವಿನ ವಾದವಾಗಿತ್ತು. ಅದಕ್ಕಾಗಿ ಅವರು ಉಚ್ಚ ನ್ಯಾಯಾಲಯದಲ್ಲಿ ಐದು ರಿಟ್ ಅರ್ಜಿ ಸಲ್ಲಿಸಿದ್ದಲ್ಲದೆ ಪ್ರಭಾವಿ ವ್ಯಕ್ತಿಗಳ ಮೂಲಕ ಆಯುಕ್ತರ ಮೇಲೆ ಒತ್ತಾಯ ತಂದು ಭೂಸ್ವಾಧೀನ ಪ್ರಕ್ರಿಯೆಗೆ ಒಳಪಟ್ಟ ಭೂಮಿಯನ್ನು ಬಿಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರು. ಇವೆಲ್ಲವುಗಳನ್ನು ಪರಿಹರಿಸದೆಯೇ ಅಲ್ಲಿ ಅಭಿವೃದ್ಧಿ ಸಾಧ್ಯವೇ ಇರಲಿಲ್ಲ."

ಜಾಮದಾರ ಎಂಥಾ ಅಪ್ಪಟ ಸುಳ್ಳುಗಾರರು ಎಂಬುದು ಈ ಮಾತುಗಳನ್ನು ಓದಿದಾಗ ಗೊತ್ತಾಗುತ್ತದೆ. 1987ರ ಜುಲೈದಲ್ಲಿ ನಡೆದ ಮೀಟಿಂಗ್‌ದಲ್ಲಿ ಕೂಡಲ ಸಂಗಮದಲ್ಲಿ ಏನೇನು ಆಗಬೇಕು ಎಂಬ ಬಗ್ಗೆ ಒಂದು ದೊಡ್ಡ ಪಟ್ಟಿ ಮಾಡಿದ್ದೆವು. ಶ್ರೀ ಮಗದುಮ್ ಅವರು ಮೀಟಿಂಗ್‌ದಲ್ಲಿ ಸ್ವತಃ ನನ್ನ ಹಸ್ತಾಕ್ಷರದಲ್ಲಿಯೇ ಎಲ್ಲವನ್ನೂ ಬರೆಸಿದರು. ದಾಸೋಹ ಭವನ, ಲೈಬ್ರರಿ, ಕಲ್ಯಾಣ ಮಂಟಪ,ಕಾರ್ಯಕ್ರಮ ನಡೆಸಲು ಸಭಾ ಭವನ, ಮಹಾದ್ವಾರ, ಅಂತರ ರಾಷ್ಟ್ರೀಯ ಬಸವ ಕೇಂದ್ರ, ಬಂದವರು ಉಳಿಯಲು ಪ್ರವಾಸಿ ಮಂದಿರ ಇವೆಲ್ಲ ಆಗ ಬೇಕು ಎಂದು ಬರೆಯಲಾಗಿದೆ. ರೇಲ್ವೆ ನಿಲ್ದಾಣ ಮತ್ತು ಹೆಲಿಪ್ಯಾಡ್ ಬಗ್ಗೆ ಸಹ ಬರೆಯಲಾಗಿದೆ.

ಇದೆಲ್ಲಕ್ಕಿಂತ ಮಿಗಿಲಾಗಿ ನಾನು ಅಂದು ಬರೆದ ಮನವಿಯಲ್ಲಿ ಮತ್ತು ನಂತರ ವಿಶ್ವನಾಥ ರೆಡ್ಡಿ ಮುದ್ನಾಳ್ ಸಮಿತಿಗೆ ಮತ್ತು ಅದು ಸಂಚಾರ ಬಂದಾಗ ಬೇರೆ ಬೇರೆ ಸ್ಥಳಗಳಲ್ಲಿ ಬಸವ ಭಕ್ತರು ಕೊಟ್ಟ ಮನವಿಯಲ್ಲಿ ಮುಖ್ಯವಾಗಿ ಕಾಣಿಸಿರುವ ಸಂಗತಿ, "ಸಂಗಮೇಶ್ವರ ದೇವಾಲಯದ ಆದಾಯವು ಸೋರಿ ಹೋಗುತ್ತಿದೆ. ಅರ್ಚಕರ ಕುಟುಂಬಗಳ ಸಂಖ್ಯೆ ಸುಮಾರು 65 ಇರುವುದರಿಂದ ಬಂದ ಆದಾಯವನ್ನು ಅವರೇ ಹಂಚಿಕೊಂಡು ಬಿಡುತ್ತಾರೆ.ದೇವಾಲಯದ ಪರಿಸರ ತುಂಬಾ ಕೊಳಕು; ಅಲ್ಲೇ ಮಕ್ಕಳು ಮರಿಯೊಡನೆ ಬಿಡಾರ ಹೂಡಿದ್ದಾರೆ. ರಾತ್ರಿ ಮಂಟಪದಲ್ಲಿ ಕೆಲವರು ಜೂಜಾಡುತ್ತಾರೆ. ಅಲ್ಲೇ ಎಮ್ಮೆ-ಹಸು ಎಲ್ಲ ಕಟ್ಟಿರುತ್ತಾರೆ. ಬಸವೈಕ್ಯ ಮಂಟಪದಲ್ಲಿ ಬಸವ ತತ್ವಕ್ಕೆ ವಿರುದ್ಧವಾದ ಆಚರಣೆ ಇದೆ.ಯಡೆಯೂರು, ಮಹದೇಶ್ವರ ಬೆಟ್ಟದಲ್ಲಿ ಸರ್ಕಾರವು ವಹಿಸಿಕೊಂಡಂತೆ ಇಲ್ಲಿಯೂ ವಹಿಸಿಕೊಳ್ಳಬೇಕು." ಎಂದು ನಾವು ಒತ್ತಾಯಿಸುತ್ತಿದ್ದೆವು. ಅದಕ್ಕಾಗಿಯೇ ಅರ್ಚಕರು ಮೊದಲನೆಯ ಶರಣ ಮೇಳದಿಂದಲೇ ಮತ್ತು ನಾವು ಅಲ್ಲಿಗೆ ಹೋದಾಗಿನಿಂದಲೇ ದ್ವೇಷಿಸಲು ತೊಡಗಿದ್ದು. ಒಂದು ಕಡೆ ಅರ್ಚಕರಿಂದ ದ್ವೇಷ; ಇನ್ನೊಂದು ಕಡೆ ಇಂಥ ಸರ್ಕಾರಿ ಅಧಿಕಾರಿಗಳಿಂದ ಮತ್ಸರ; ಬಹಳ ಮಾನಸಿಕ ಹಿಂಸೆಯನ್ನು ನಾವು ಅನುಭವಿಸ ಬೇಕಾಯಿತು.

ಸಂಗಮೇಶ್ವರ ಗುಡಿಯ ಸುತ್ತ ಬೀಡು ಬಿಟ್ಟದ್ದ 56ಕ್ಕೂ ಹೆಚ್ಚಿನ ಅಂಗಡಿ ಮಾಲಿಕರು, 65ಕ್ಕೂ ಮಿಕ್ಕಿದ ಅರ್ಚಕರು ಮುಂತಾದವರು ವಿರೋಧಿಸಿದ್ದು ನಿಜ. ನಾವು ಉಚ್ಚ ನ್ಯಾಯಾಲಯದಲ್ಲಿ ರಿಟ್ ಹಾಕಿದ್ದೂ ನಿಜ. ಇದನ್ನು ನಾವು ಜನರ ಮುಂದೆ ಇಡುತ್ತಲೇ ಬಂದಿದ್ದೇವೆ. ನಾವು ಬಸವ ಧರ್ಮ ಪೀಠಕ್ಕಾಗಿ ಜಾಗ ಖರೀದಿಸಿದ್ದು ಜುಲೈ 1987ರಲ್ಲಿ ; ಅದೇ ವರ್ಷ ಇನ್ನೊಂದು ಜಮೀನು ಸಹ ಖರೀದಿಸಿದ್ದೆವು. ನಾವು ಅಲ್ಲಿಗೆ ಹೋಗಿ ಚಳುವಳಿ ಆರಂಭಿಸಿದ ಮೇಲೆ ಶ್ರೀ.ಬಿ.ಡಿ.ಜತ್ತಿಯವರ ಅಧ್ಯಕ್ಷತೆಯಲ್ಲಿ 9-12-1987ರಂದು ವಿಶೇಷ ಸಮಿತಿಯನ್ನು ರಚಿಸಲಾಯಿತು. ಅನಾರೋಗ್ಯದ ನೆಪ ಒಡ್ಡಿ ಅವರು ಅದಕ್ಕೆ ರಾಜಿನಾಮೆ ಕೊಟ್ಟ ಮೇಲೆ 26-2-1988ರಿಂದ ಶ್ರೀ ವಿಶ್ವನಾಥ ರೆಡ್ಡಿ ಮುದನಾಳ್ ಅಧ್ಯಕ್ಷತೆ ವಹಿಸಿಕೊಂಡರು. ಅವರು ದಿ 7-6-1988ರಂದು ಅಂತಿಮ ವರದಿ ನೀಡಿದರು. ನಂತರ ಆ ವರದಿಯನ್ನು ಸಂಪೂರ್ಣವಾಗಿ ಸ್ವೀಕರಿಸಿ 22-9-1988ರಂದು ರಾಜ್ಯ ಸರ್ಕಾರ ಆದೇಶ ಹೊರಡಿಸಿತು. ವಾಸ್ತವಿಕವಾಗಿ 1990ರ ನಂತರ ಭೂಸ್ವಾಧೀನ ಪ್ರಕ್ರಿಯೆ ಆರಂಭಿಸಲಾಯಿತು.

ಅಷ್ಟರಲ್ಲಿ ಬಸವ ಧರ್ಮ ಪೀಠದ ಹಲವಾರು ಕಟ್ಟಡಗಳು ತ್ವರಿತ ಗತಿಯಲ್ಲಿ ನಿರ್ಮಾಣ

ಆಗಿದ್ದಲ್ಲದೆ, ಬಸವೇಶ್ವರ ಧ್ಯಾನ ಮಂಟಪ ಆಗಿ ಪೂಜಾ ಮೂರ್ತಿ ಸಹ ಪ್ರತಿಷ್ಠಾಪನೆಯಾಗಿತ್ತು; ಶರಣರ ಮಂಟಪಗಳು ಆಗುತ್ತಿದ್ದವು; ಆಗಲೇ 2-3 ಶರಣ ಮೇಳಗಳು ನಡೆದಿದ್ದವು. ನೀವೇ ಸ್ವಲ್ಪ ಆಲೋಚಿಸಿರಿ. ಒಂದು ವೇಳೆ ಬಸವ ಧರ್ಮ ಪೀಠದ ಧಾರ್ಮಿಕ ಆವರಣ, ಮಹಾಮನೆ ಮಹಾಮಠ ಇರದಿದ್ದರೆ, ಶರಣ ಮೇಳ ನಡೆಯದಿದ್ದರೆ ಕೇವಲ ಶ್ರೀ ಜಾಮದಾರ್ ಕಟ್ಟಿದ ಕಟ್ಟಡಗಳಿಂದಲೇ ಕೂಡಲ ಸಂಗಮವು ಇಂದಿನ ಶೋಭೆ ಪಡೆಯುತ್ತಿತ್ತೇ?

ಶ್ರೀ ಜಾಮದಾರರ ಮಹಾದ್ವಾರ ನೋಡಿರಿ, ಮಹಾಮನೆಯದನ್ನೂ ನೋಡಿರಿ.ನಮ್ಮದಕ್ಕಿಂತ ಹತ್ತು ಹದಿನೈದು ಪಟ್ಟು ಖರ್ಚು ಮಾಡಿರಬಹುದು. ಅವರ ಮಹಾದ್ವಾರದಲ್ಲಿ ಏನಾದರೂ ಶರಣ ಸಂಸ್ಕೃತಿ ಇದೆಯೆ? ಅದರ ಮೇಲೆ 2 ನಂದಿಗಳನ್ನು ಕೂರಿಸಿದ್ದಾರೆ. ಇನ್ನು ಆ ಸರ್ಕಲ್‌ನಲ್ಲಿರುವ ಬಸವ ಮೂರ್ತಿಯಂತೂ ಕುರೂಪದ ಮುದ್ದೆ. ಸ್ಥಳೀಯರು,ಬಂದ ಪ್ರವಾಸಿಕರು ಎಲ್ಲರೂ ಬೈದರೂ ಅದನ್ನು ತೆಗೆಯಲಾರದ ಹಠಮಾರಿತನ ಬೇರೆ! ಶ್ರೀ ಜಿ.ಜಿ.ಪಾಟೀಲರ ಅಧ್ಯಕ್ಷತೆಯಲ್ಲಿ ನಡೆಯುತ್ತಿರುವ ಶ್ರೀ ಸಂಗಮೇಶ್ವರ ಬೋರ್ಡಿಂಗ್ ಸುಮಾರು 30 ವರ್ಷಗಳಿಂದ ಸಹಸ್ರಾರು ಗ್ರಾಮೀಣ ಪ್ರದೇಶದ ಮಕ್ಕಳಿಗೆ ಅನ್ನ ನೀಡಿದೆ, ಬದುಕು ಕೊಟ್ಟಿದೆ. ಬಸವೇಶ್ವರ ವಿದ್ಯಾ ಸಂಸ್ಥೆ ನಡೆಸುತ್ತಿರುವ ಶ್ರೀ ಸಂಗಮೇಶ್ವರ ಮಾಧ್ಯಮಿಕ ಮತ್ತು ಪ್ರೌಢ ಶಾಲೆ ವಿದ್ಯಾ ಪ್ರಸಾರದ ಏಕೈಕ ಕೇಂದ್ರವಾಗಿತ್ತು. ಅದರ ಪಕ್ಕದ ಜಮೀನನ್ನು ಆಟ ಓಟಕ್ಕಾಗಿ ಖರೀದಿಸಿದ್ದರು, ಅದರ ಪಕ್ಕದ ಜಮೀನನ್ನು ಓರ್ವ ಬಡ ದಲಿತ ಮಹಿಳೆ ವಿದ್ಯಾ ಸಂಸ್ಥೆಗೆ ಕೊಟ್ಟು ಹಣ ಪಡೆದಿದ್ದಳು. ನಮ್ಮ ಸಂಸ್ಥೆ ಆಗಲೇ ಗಣನೀಯವಾಗಿ ಬೆಳೆದಿತ್ತು. ಹೀಗಿದ್ದಾಗ ನಾವೆಲ್ಲ ತಟ್ಟೆಯಲ್ಲಿ ಕಾಣಿಕೆ ಇಟ್ಟು ಜಾಮದಾರ್ ಸಾಹೇಬರಿಗೆ ಜಮೀನುಗಳನ್ನು ಅರ್ಪಿಸಬೇಕಿತ್ತೆ ?"ಸಂಗಮೇಶ್ವರ ದೇವಾಲಯದಿಂದ ಬಾಗಲಕೋಟೆಗೆ ಹೋಗುವ ರಸ್ತೆಯ ಎಡಬದಿಯಲ್ಲಿ ಇರುವ ಜಮೀನುಗಳನ್ನು ಬಿಟ್ಟು ಬಿಡಿರಿ. ಸರ್ಕಾರ ಮಾಡುವ ಕೆಲಸವನ್ನೇ ಈ ಎಲ್ಲ ಸಂಘ -ಸಂಸ್ಥೆಗಳು ಬಸವ ಧರ್ಮ ಪೀಠ, ಸಂಗಮೇಶ್ವರ ಬೋರ್ಡಿಂಗ್, ಸಂಗಮೇಶ್ವರ ಮಾಧ್ಯಮಿಕ ಮತ್ತು ಪ್ರೌಢ ಶಾಲೆ ಮಾಡುತ್ತಿವೆ" ಎಂದು ಆಯುಕ್ತರಲ್ಲಿ ಬೇಡಿಕೆ ಸಲ್ಲಿಸಲಾಯಿತಲ್ಲದೆ, ನಾವು ಮತ್ತು ಗ್ರಾಮದ ಮುಖಂಡರಾದ ಶರಣ. ಜಿ. ಜಿ. ಪಾಟೀಲ್ ಮುಂತಾದವರು ಅನಿವಾರ್ಯವಾಗಿ ಹೈಕೋರ್ಟಿನಲ್ಲಿ ರಿಟ್ ಹಾಕಬೇಕಾಯಿತು. ಇದು ನಮ್ಮ ಕರ್ತವ್ಯವೇ ಆಗಿತ್ತು, ಅಪರಾಧವಲ್ಲ. ಅಗತ್ಯವಿಲ್ಲದಿದ್ದರೂ ನಮ್ಮ ಜಮೀನುಗಳನ್ನು ವಶಪಡಿಸಿಕೊಳ್ಳುವಂತೆ ಕೆಲವರು ಕುತಂತ್ರ ನಡೆಸಿದರು. ಶ್ರೀ ಮಗದುಮ್ ಹೇಳಿದರು, "ಹುಲಿ ತಪ್ಪಿಸಿಕೊಂಡಿದೆ ಅದರ ಬಾಲವನ್ನಾದರೂ ಹಿಡಿಯೋಣ ಎಂಬ ಕುತಂತ್ರ ಇಲ್ಲಿದೆ." ಸಂಗಮೇಶ್ವರ ದೇವಾಲಯವು ಮೂಲ ಸ್ಥಳದಲ್ಲಿ ಉಳಿಯಬೇಕೆಂಬ ಹೋರಾಟದಲ್ಲಿ ನಾವು ನೇತೃತ್ವ ವಹಿಸಿದ್ದು. ಅದರಲ್ಲಿ ಯಶಸ್ಸು ಪಡೆದುದು ಅನೇಕರಿಗೆ ಕಣ್ಣಿನಲ್ಲಿ ಕಿಸುರು ತರಿಸಿತು.

ಇನ್ನೂ ಹಲವಾರು ಬಗೆಯ ಕಿರುಕುಳಗಳನ್ನು ನಾವು ಅನುಭವಿಸಬೇಕಾಯಿತು.ಇನ್ನೂ ಸಂಗಮಕ್ಕೆ ಹೆಜ್ಜೆ ಇಡುತ್ತಲೇ ನಾವು ಜಮೀನು ಖರೀದಿಸಿದ್ದು ಕಾನೂನಿಗೆ ವಿರುದ್ಧವಾಗಿ ಎಂದು ತಕರಾರು ಅರ್ಜಿ ಸಲ್ಲಿಸಲಾಯಿತು. ಮೊದಲನೆಯ ಶರಣ ಮೇಳದಲ್ಲೇ ಲಿಂ|| ಜ.ಚ.ನಿಯವರು ಮತ್ತು ದಿ|| ಶಿವಾನಂದ ಸ್ವಾಮಿಯವರು ನಮ್ಮ ಜಮೀನಿಗೆ ಜನರನ್ನು ನುಗ್ಗಿಸಿ ಬೆಳೆಯನ್ನೇ ನಾಶ ಮಾಡಿದ್ದರು. ಕೂಡಲ ಸಂಗಮ ಕ್ಷೇತ್ರದ ಬೆಳವಣಿಗೆಗಾಗಿ ದುಡಿಯಬೇಕು ಎಂದು ಹೋದವರಿಗೆ ಸಿಕ್ಕ ಸ್ವಾಗತ ಹೇಗಿದೆ ನೋಡಿರಿ. (ಅದಕ್ಕಿಂತಲೂ ಕೆಟ್ಟದ್ದು ಕಲ್ಯಾಣ ಪರ್ವದಲ್ಲಿ ನಡೆದ, ಪೋಲಿಸರ ಮೂಲಕ ಮಾಡಿಸಿದ ದೌರ್ಜನ್ಯ) ಇಂಥ ಎಲ್ಲ ಕೃತ್ಯಗಳ ಹಿಂದೆ ಮಠಾಧೀಶರ ಕೈವಾಡ ಇದ್ದೇ ಇರುತ್ತದೆ. ಲಿಂಗಾಯತ ಸಮಾಜದ ವಿಲಕ್ಷಣ ವರ್ತನೆ ಬಹಳ ನಿಗೂಢ. ಏನೇನೂ ಸಮಾಜಕ್ಕಾಗಿ ದುಡಿಯದವರಿಗೆ ಎಂಥಾ ಪುರಸ್ಕಾರ, ಹಗಲಿರುಳು ಧರ್ಮ, ಸಮಾಜಗಳಿಗಾಗಿ ದುಡಿಯುವವರಿಗೆ ತಿರಸ್ಕಾರ, ಮತ್ಸರ. ಗುರು ಬಸವಣ್ಣನವರು ಮತ್ತು ಆದಿ ಶರಣರ ಋಣ ತೀರಿಸಬೇಕು ಎಂಬ ಏಕೈಕ ಹಂಬಲದಿಂದ ನಿರುತ್ಸಾಹಿತರಾಗದೆ ನಾವುಗಳೂ ದುಡಿಯುತ್ತಿದ್ದೇವೆ.

ಸತ್ಯ ಮತ್ತು ತತ್ವ ನಿಷ್ಠರಾಗಿ ಛಲದಿಂದ ನಾವು ಮುನ್ನಡೆಯುವಾಗ ಇಂಥ ವಿರೋಧ ಸಂಕಷ್ಟ ಎದುರಾಗುತ್ತವೆಷ್ಟೆ. ಅದನ್ನು ಎದುರಿಸಲಾರದ ಅಂಜುಬುರುಕರಾದ ಕಾವಿ ತೊಟ್ಟ ಶಿಷ್ಯರು ಕೆಲವರು ನಮ್ಮ ಸಂಸ್ಥೆ ಬಿಟ್ಟು ಹೊರಹೋಗಿ ಅಸತ್ಯದೊಡನೆ ರಾಜಿ ಮಾಡಿಕೊಳ್ಳುವುದೂ ಉಂಟು.

ಕಾಕತಾಳೀಯ ನ್ಯಾಯವೇನೋ ಎಂಬಂತೆ ಸಂಗಮೇಶ್ವರ ದೇವಾಲಯ ಸ್ಥಳಾಂತರಗೊಳ್ಳುವ ಅಂತಿಮ ಹಂತದಲ್ಲಿ ಶ್ರೀ ಐ.ಎಂ.ಮಗದುಮ್ ಅವರ ಒತ್ತಾಯದ ಆಹ್ವಾನದ ಮೇರೆಗೆ ಹೋಗಿ ಚಳುವಳಿ ಮಾಡಿ, ಸರ್ಕಾರ ಸಮಿತಿ ರಚಿಸಿ ನಮ್ಮ ಬೇಡಿಕೆಗಳು ಈಡೇರಿದ್ದಕ್ಕೆ ಅಲ್ಲಿಯ ಜನರಿಗೆಲ್ಲ ಖುಷಿಯೋ ಖುಷಿ."ಅಮ್ಮಾವ್ರು ಬಂದರು,ಸಂಗಮೇಶ್ವರ ದೇವಾಲಯ ಉಳಿಯಿತು; ಇವರು ಬಂದರು, ಸಂಗಮ ನೋಡೋಹಂಗೆ ಆಯಿತು."ಎಂದು ಎಲ್ಲರ ಬಾಯಿಯಲ್ಲಿ ಸುಳಿಯುತ್ತಿದೆ. ತುಂಬಾ ತಮಾಷೆ ಎಂದರೆ, "ಮಾತಾಜಿ ಸಂಗಮಕ್ಕೆ ಬಂದರು, ಸರ್ಕಾರ ನಂತರ ಅಭಿವೃದ್ಧಿ ಪ್ರಾಧಿಕಾರ ರಚಿಸಿ ಕೆಲಸ ಮಾಡಿತು "ಎನ್ನುತ್ತಾರೆ. ಬಸವ ಕಲ್ಯಾಣದಲ್ಲಿಯೂ ಅಷ್ಟೆ, ನಾವು ಹೋಗಿ ಜಾಗ ಖರೀದಿಸಿ ಕೆಲಸ ಶುರು ಮಾಡಿದ ಮೇಲೆ ಅಲ್ಲಿಯೂ ಅಭಿವೃದ್ಧಿ ಪ್ರಾಧಿಕಾರ ಆಗಿದೆ. ಜನರಿಗೇನು ಮುಗ್ಧರಾಗಿ ಮಾತನಾಡುತ್ತಾರೆ, "ಅಮ್ಮಾವ್ರು ಬಂದ ಮ್ಯಾಲೆ ಸರ್ಕಾರದ ಪ್ರಾಧಿಕಾರ ಕಣ್ಣು ಬಿಟೈತ್ರಿ....".ಈ ಮಾತುಗಳಿಂದ ಜಾಮದಾರರಿಗೆ ಬಹಳ ಸಂಕಟವಾಗುತ್ತದೆ. ಅದಕ್ಕೆ ನಾವೇನು ಮಾಡೋಣ.?

ನಾನು ಯಾಕೆ ಈ ವಿಚಾರಗಳನ್ನೆಲ್ಲ ಬರೆಯುತ್ತಿದ್ದೇನೆ ಎಂದರೆ ನನ್ನ ಮನಸ್ಸು ಈ ಜನರ ಸುಳ್ಳು ಮಾತು ಕೇಳಿ ರೋಸಿ ಹೋಗಿದೆ. ನಡೆದ ಸಂಗತಿಯೇ ಬೇರೆ ಇರುತ್ತದೆ. ಈ ದೊಡ್ಡ ಮನುಷ್ಯರುಗಳು ಬರೆದು ಪ್ರಕಟಿಸುವುದೇ ಬೇರೆ ಇರುತ್ತದೆ. ನನ್ನ ಹೆಸರನ್ನು ಎಳೆದು ತಂದು ಜಾಮದಾರ್ ಸೇರಿಸುವುದು ಅನಗತ್ಯವಾಗಿತ್ತು. ನನ್ನನ್ನು ಜೈಯದ್ರಿ ಶರಣ ಸಾಹಿತ್ಯ ಪರಿಷತ್ತು, ಅದರ ಅಧ್ಯಕ್ಷರಾದ ಶ್ರೀ.ಗೊ.ರು. ಚನ್ನಬಸಪ್ಪ ಅವರು ಪುಸ್ತಕವನ್ನು ಪ್ರಕಟಿಸಬಹುದು ಎಂದು ನನ್ನನ್ನು ದೂಷಣೆ ಮಾಡಿದಂತೆ ಕಾಣುತ್ತದೆ. ಒಟ್ಟು ನಾವು ಮಾಡಿದ ಒಳ್ಳೆಯ ಕೆಲಸಗಳು ಯಾವುವೂ ಪ್ರಚಾರಕ್ಕೆ ಬರಬಾರದು. ಒಳ್ಳೆಯ ಕೆಲಸಗಳೆಲ್ಲ ತಮ್ಮಿಂದಲೇ ಆದವು ಎಂದು ಜಾಮದಾರ್ ಹೇಳಿಕೊಳ್ಳ ಲೋಸುಗ ನನ್ನ ಹೆಸರನ್ನು ಎಳೆದು ತಂದಿದ್ದಾರೆ. ಸಂಗಮೇಶ್ವರ ದೇವಾಲಯವನ್ನು ಮೂಲ ಸ್ಥಳದಿಂದ ಬದಲಾಯಿಸಬೇಕು ಎಂದು ಶತಾಯಗತಾಯ ಪ್ರಯತ್ನಿಸಿದವರ ಹೆಸರನ್ನು ಪ್ರಮುಖವಾಗಿ ಹೊಗಳಿ ಪ್ರಾಮಾಣಿಕವಾಗಿ ಹೋರಾಡಿದ ಶ್ರೀಮಗದುಮ್ಮರ ಹೆಸರನ್ನು ಕೈ ಬಿಟ್ಟಿರುವುದು, ನಮ್ಮನ್ನು ಇದಕ್ಕೆ ಅಡ್ಡಿ ಮಾಡಿದವರೆಂಬಂತೆ ಚಿತ್ರಿಸಿರುವುದು ಜಾಮದಾರರ ವ್ಯಕ್ತಿತ್ವದ ಕುಬ್ಜತೆಯನ್ನು, ವಿಕೃತಿಯನ್ನು ಹಮ್ಮನ್ನು ಬಿಂಬಿಸುತ್ತದೆ. ಯಾವುದಾದರೊಂದು ವಿಷಯದಲ್ಲಿ ನ್ಯಾಯಕ್ಕಾಗಿ ನಾವು ಹೋರಾಡುವಾಗ ವಿರೋಧಿಸಿದವರು ಅದರಲ್ಲಿ ಗೆಲುವು ಸಿಗುತ್ತಲೇ ತಾವೇ ಈ ಯಶಸ್ಸಿಗೆ ಕಾರಣರು ಎಂದು ಧಾವಿಸಿಬಂದು ಫೋಟೋಕ್ಕೆ ಪೋಸು ಕೊಡುತ್ತಾರೆ.

ರಸ್ತೆಯನ್ನು ಅಗಲೀಕರಣ ಮಾಡುವಾಗ ಒಂದು ದಿನ ಬಂದು ಭೇಟಿಯಾಗಿ ಶ್ರೀ ಜಾಮದಾರ್ ಹೇಳಿದರು,"ರಸ್ತೆಯನ್ನು ಅಗಲವಾಗಿ, ಸುಂದರವಾಗಿ ಮಾಡಿಸುತ್ತಿದ್ದೇವೆ.ಇದಕ್ಕೆ ನಮಗೆ ಹೆಚ್ಚುವರಿ ಜಾಗಬೇಕು; ಬಿಟ್ಟುಕೊಡಿರಿ. ನೀವು ಕೋರ್ಟ್‌ಗೆ ಹೋದರೆ ಕೆಲಸದಲ್ಲಿ ವಿಳಂಬ ಉಂಟಾಗುತ್ತದೆ."

ಆಗ ನಾನು ಹೇಳಿದೆ :

"ಕೂಡಲ ಸಂಗಮ ಚೆಂದವಾಗಿರಬೇಕು ಎಂಬುದೇ ನಮ್ಮ ಬಯಕೆ. ಎಷ್ಟು ಅಗತ್ಯವೋ ಅಷ್ಟು ನೀವು ತಗೋಬಹುದು. ನಮ್ಮನ್ನು ಇಲ್ಲಿಂದ ಖಾಲಿ ಮಾಡಿಸಬೇಕು ಎಂದುದಕ್ಕೆ ನಾವು ಕೋರ್ಟಿಗೆ ಹೋಗಬೇಕಾಯಿತು. ತುದಿಯಲ್ಲಿ ಬಿಟ್ಟು ಕೊಡಲು ನಮ್ಮ ಅಭ್ಯಂತರವಿಲ್ಲ"ಅಂದೆ. ಸುಮಾರು 4-5 ಗುಂಟೆ ಜಾಗವನ್ನು ರಸ್ತೆ ವಿಸ್ತರಣೆಗೆ ಉಚಿತವಾಗಿಯೇಕೊಟ್ಟೆವು, ತೆಗೆದುಕೊಂಡರು.

ಪಾಲ್ಕುರಿಕೆ ಸೋಮನಾಥ, ಭೀಮಕವಿ ಎಲ್ಲರೂ ಕಾವ್ಯಗಳಲ್ಲಿ ಗೌರವ ಪೂರ್ಣವಾದ ರೀತಿಯಲ್ಲಿ ಚಿತ್ರಿಸಿದರೆ ಧರಣಿ ಪಂಡಿತ ಬಸವಣ್ಣನವರನ್ನು ಖಳನಾಯಕರಂತೆ ಚಿತ್ರಿಸಿದ. ಬಸವ ವಿರೋಧಿಗಳಿಗೆ ಅದೇ ಅಪ್ಯಾಯಮಾನ.ಅದೇ ರೀತಿ ಡಾ|| ಜಾಮದಾರ ಬರೆದುದೇ ಸತ್ಯ ಎಂಬಂತಾಗಬಾರದು. ನಿಜ ಸಂಗತಿ ಏನು ನಡೆಯಿತು ಎಂಬುದು ಒಂದು ಕಡೆಯಾದರೂ ದಾಖಲಾಗಬೇಕು ಎಂದು

ನಾನು ವಿವರವನ್ನು ತಿಳಿಸಬೇಕಾಯಿತು.ಲೇಖಕರ ನುಡಿಯಲ್ಲಿ ಎಸ್.ಎಂ.ಜಾಮದಾರ ಬರೆದಿದ್ದಾರೆ: "ಇದರಲ್ಲಿ ಏನಾದರೂ ಲೋಪದೋಷಗಳಿದ್ದರೆ ಅವು ನನ್ನ ಜ್ಞಾನದ ಮಿತಿ ಎಂದು ಮಾತ್ರ ಭಾವಿಸಬಹುದು.ಅಂತಹ ಅಂಶಗಳನ್ನು ಬಲ್ಲವರು ನನ್ನ ಗಮನಕ್ಕೆ ತಂದರೆ ಅವುಗಳನ್ನು ಮುಂದಿನ ಆವೃತ್ತಿಗಳಲ್ಲಿ ಸರಿಪಡಿಸುವ ಪ್ರಯತ್ನ ಮಾಡಲಾಗುವುದು." ಎಂದು.

ನೋಡೋಣ, ಲೋಪವನ್ನು ಅವರ ಗಮನಕ್ಕೆ ತಂದಾಗಿದೆ. ಮುಂದಿನ ಆವೃತ್ತಿಯಲ್ಲಿ ಸರಿಪಡಿಸಿಕೊಳ್ಳುವರೇನೋ! ಒಂದು ವೇಳೆ ಎಲ್ಲ ದಾಖಲೆಗಳನ್ನು ಇಟ್ಟಿದ್ದೇ ಆದರೆ ಪರಿಶೀಲಿಸಲಿ: ಕೂಡಲ ಸಂಗಮ ಅಭಿವೃದ್ಧಿ ಯೋಜನೆ ಕುರಿತು ಬರೆದ ರೂಪುರೇಷೆ ನನ್ನ ಕೈ ಬರಹದಲ್ಲೇ ಇದೆ. ಮಾತ್ರವಲ್ಲ ಅಂತರ ರಾಷ್ಟ್ರೀಯ ಬಸವ ಕೇಂದ್ರ ನಿರ್ಮಾಣಕ್ಕೆ ಒತ್ತಾಯಿಸಿ, ನಾವು ಕ್ರಾಂತಿಯೋಗಿ ಬಸವಣ್ಣಕ್ಕೆ ಸಿದ್ಧಪಡಿಸಿದ್ದ ಆರು ಅಂತಸ್ತಿನ ಒಂದು ಸ್ಮಾರಕ ಚಿತ್ರದ ಪ್ರತಿಯನ್ನು ಸಹ ಲಗತ್ತಿಸಲಾಗಿತ್ತು. ಮುಂದಿನ ಆವೃತ್ತಿಯಲ್ಲಿ ಈ ಲೋಪಗಳನ್ನು ತಿದ್ದಿಕೊಂಡು ತಮ್ಮ ಪ್ರಾಮಾಣಿಕತೆಯನ್ನು ಶ್ರೀ ಜಾಮದಾರ್ ಪ್ರದರ್ಶಿಸಲಿ.

ಸ್ವರ್ಣ ಪರುಷ (13-03-07ರಂದು ವಾಚಿಸಿದ ಕವನ)

ದಶಕಗಳಾರು ಮೀರಿದವು
ವರುಷಗಳರವತ್ತೊಂದು ಉರುಳಿದವು
ಆರು ಸ್ಥಲಗಳನೇರಿದ ಮೂವತ್ತಾರರ ಮೀರಿದ
ಶತವೆರಡನದಿನಾರು ಸ್ಥಾನವ ದಾಂಟಿದಾ || ಪ ||

ಸಾಟಿಯಿಲ್ಲದ ಶಕ್ತಿಯೊಂದು
ಬಂದೀ ಜಗದಲ್ಲಿ ಅವತರಿಸಿ ನಿಂದು
ಆಗಲು ಬಯಸಿತು ವಿಶ್ವ ಬಂಧು
ಇರಲುಂಟೇನಿವರಿಗೆ ಸಾಟಿ ಇನ್ನೊಂದು || ಪ ||

ಕಾಡಾನೆ ಮದ್ದಾನೆ ಏರಿದವರೆಲ್ಲರೂ
ಕಾಣದ ಕತ್ತಲಲಿ ಮುಳುಗಿದರು.
ಜ್ಞಾನದ ಬೆಳಕೊಂದು ಮುಕುಟದಿ ಧರಿಸಿ
ಮಾತಾಜಿ ಜಗದಲಿ ನಿಂದಿಹರು. || ಪ ||

ಹೊಳೆಯುವ ಕ್ಷೇತ್ರದಿ ಬೆಳ್ಳಿ ಕಳಸವು ಇವರಂತೆ
ಕರ್ಮ ಕಳೆದಿಹ ಪುಣ್ಯ ಸಸ್ಯದ ಚಿಗುರಂತೆ
ವಿಚಾರದ ಹೂವಿದು ಆಚಾರದ ಕಾಯಾಗಿ
ನಿಷ್ಪತ್ತಿಯ ಸ್ಥಿತಿಯಲಿ ಇವರಂತೆ
ಮಾತೆ ಮಹಾದೇವಿಯೆಂಬ ನಾಮದಿ ನಿಂದಿರೆ ನಿಶ್ಚಿಂತೆ || ಪ ||

ಜಗದ ತಾಯಿಯು ಇವರಾಗಿ
ಅಮೃತ ಬಿಂದುವಿನ ತವರಾಗಿ
ಪವಾಡವ ಮೆರೆದಿಹ ನಿಜಯೋಗಿ
ಜನ ಮನ ಸೆಳೆದಿಹ ಅನುರಾಗಿ || ಪ ||

ಅನುಭಾವವ ಮೆರೆದಿಹ ಅರವತ್ತು
ನಲವತ್ತು ತುಂಬಿದ ಕಸರತ್ತು
ಇವರಾಗೆಮನದ ಅಗತ್ಯ ಜಗಕ್ಕಿತ್ತು.
ಅಂಥ ಪುಣ್ಯ ಕಾಲವೆ ಇವತ್ತು. || ಪ ||

ಕೆ.ವೀರೇಶ್ ಕುಮಾರ್, ರಾ.ಬ.ದಳ.ಬೆಂ.

ವಚನ ದುಂದುಭಿ

ಕಲ್ಯಾಣ ಕಿರಣದಲ್ಲಿ ವಚನ ದುಂದುಭಿ ಎನ್ನುವ ಹೊಸ ಅಂಕಣವೊಂದನ್ನು ಪ್ರಾರಂಭಿಸಲಾಗಿದ್ದು, ಇದು ಇನ್ನು ಮುಂದೆ ಪ್ರತಿ ತಿಂಗಳೂ ಪ್ರಕಟಿಸಲಾಗುವುದು. ಇದರಲ್ಲಿ ಪ್ರತಿ ತಿಂಗಳು 20/25 ಪ್ರಶ್ನೆಗಳು ಪ್ರಕಟವಾಗುತ್ತದೆ. ಪ್ರತಿ ವರ್ಷ ಕಲ್ಯಾಣ ಪರ್ವ ಮತ್ತು ಶರಣ ಮೇಳದಲ್ಲಿ ನಡೆಯುವ ಧಾರ್ಮಿಕ ರಸ ಪ್ರಶ್ನೆ ಕಾರ್ಯಕ್ರಮದಲ್ಲಿ ಈ ಅಂಕಣದಲ್ಲಿ ಪ್ರಕಟವಾದ ಪ್ರಶ್ನೆಗಳನ್ನು ಕೇಳಲಾಗುವುದು. ಮತ್ತು ಈ ಪ್ರಶ್ನೆಗಳಿಗೆ ಸರಿ ಉತ್ತರಗಳನ್ನು ತಾವು ಅಂಚೆ ಕಾರ್ಡ್‌ನಲ್ಲಿ ಬರೆದು, ವಚನ ದುಂದುಭಿ ವಿಭಾಗ ಎಂದು ಕಾಣಿಸಿ ಕಲ್ಯಾಣ ಕಿರಣ ಕಾರ್ಯಾಲಯಕ್ಕೆ ಕಳುಹಿಸಬೇಕು. ಸರಿಯುತ್ತರ ಕೊಟ್ಟವರ ಹೆಸರುಗಳನ್ನು ಕಲ್ಯಾಣ ಕಿರಣ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

ಪ್ರಶ್ನೆಗಳು

1.ಗುರು ಬಸವಣ್ಣನವರಲ್ಲಿ 52 ಗುಣಗಳನ್ನು ಕಂಡು ಹೊಗಳಿದ ವಚನಕಾರರು ಯಾರು ?
2.ಪಂಚ ಪರುಷಗಳು ಯಾವುವು ?
3.ನವ ವಿಧ ಭಕ್ತಿಗಳು ಯಾವುವು ?
4.ತ್ರಿವಿಧ ಜಂಗಮ ಯಾವುವು ?
5."ಆಚಾರವೇ ಪ್ರಾಣವಾದ ರಾಮೇಶ್ವರ ಲಿಂಗ " ಇದು ಯಾರ ವಚನಾಂಕಿತ ?
6.ನಾ ಸತ್ತೆ ಎಂದು ಹೆಣ ಕೂಗಿದುದುಂಟೆ ? ಬೈಚಿಟ್ಟ ಬಯಕೆ ಕರೆದುದುಂಟೆ ? ಹೆಪ್ಪಿಟ್ಟ ಹಾಲು ಸಿಹಿಯಾಗುವುದೇ? ಈ ಮಾತನ್ನು ಯಾರು ಯಾರಿಗೆ ಹೇಳಿದರು ?
7.ಬೊಂತಾದೇವಿ ತಾಯಿಯ ವಚನಾಂಕಿತವೇನು ?
8.ಅನುಭವ ಮಂಟಪಕ್ಕೆ ಅಕ್ಕ ಬಂದಾಗ ನಡೆ ಮಡಿಯನ್ನು ಯಾರು ಹಾಸಿದರು ?
9.ಪಂಕ್ತಿ ಭೇದ ಮಾಡಬಾರದು ಎನ್ನುವ ಗುರು ಬಸವಣ್ಣನವರ ವಚನ ಯಾವುದು?
10.ಶೂನ್ಯ ಪೀಠದ 5ನೆಯ ಪೀಠಾಧಿಕಾರಿ ಎಂದು ಯಾರನ್ನು ಗುರುತಿಸಲಾಗಿದೆ?
11.ಕರ್ನಾಟಕದ ಗಾಂಧಿ ಎಂದು ಕರೆಯಲ್ಪಟ್ಟ ಲಿಂಗಾಯತ ಧರ್ಮಿ ಯಾರು?
12.ಮಾಯಾದೇವಿಯ ತಂದೆ-ತಾಯಿ ಯಾರು?
13.ಯೋಗಾಂಗ ತ್ರಿವಿಧಿಯನ್ನು ರಚಿಸಿದವರು ಯಾರು ?
14.ಬಸವ ಸ್ತೋತ್ರ ತ್ರಿವಿಧಿಯನ್ನು ರಚಿಸಿದವರು ಯಾರು?
15.ಬಸವ ಧರ್ಮ ಪೀಠ ಹುಟ್ಟಿಕೊಂಡು ನಂತರ, ಬಸವ ನಾಣ್ಯ ಮೆರೆಯುತ್ತದೆ ಎಂದು ಹೇಳಿದವರು ಯಾರು ?
16.ಚಿಕ್ಕ ದಣ್ಣಾಯಕರು ಎಂದು ಯಾರನ್ನು ಕರೆಯುತ್ತಾರೆ ?
17.ತ್ರಿವಿಧ ದ್ರೋಹ ಯಾವುವು ?
18.ವಚನ ಭಂಡಾರಿ ಎಂದು ಯಾವ ಶರಣರನ್ನು ಕರೆಯುತ್ತಿದ್ದರು ?
19.ಅನುಭವ ಮಂಟಪವು ಭಾರತದ ಪ್ರಥಮ ಸಂಸತ್ತು ಎಂದು ಹೇಳಿದ ರಾಷ್ಟ್ರಪತಿ ಯಾರು?
20.ಗುರು ಕರುಣ ತ್ರಿವಿಧಿ ರಚಿಸಿದವರು ಯಾರು ?
21.ಮಾಯಾದೇವಿಯ ಮನೆದೇವರು ಯಾರು?
22.ಪೂಜ್ಯ ಮಾತಾಜಿಯವರ ಪ್ರಥಮ ಕೃತಿ ಯಾವುದು?
23.ಹುತಾತ್ಮ ಹರಳಯ್ಯನವರು ಗುರು ಬಸವಣ್ಣನವರಿಗೆ ಅರ್ಪಿಸಿದ ಚಮ್ಮಾವುಗೆ ಯಾವ ಊರಿನಲ್ಲಿದೆ.
24.ಅನುಭವ ಮಂಟಪದಲ್ಲಿ ಇಷ್ಟಲಿಂಗ ಬೇಡವೆಂದು ವಾದಿಸಿದ ಇಬ್ಬರು ಶರಣರು ಯಾರು?
25.ಆಧುನಿಕ ಶೂನ್ಯ ಪೀಠವನ್ನು ಎಲ್ಲ ಸ್ಥಾಪಿಸಿದ್ದಾರೆ ?

ಬಸವ ಮಂಟಪಗಳ ನಿರ್ಮಾಣಕ್ಕೆ ಧನ ಸಹಾಯ ಮಾಡಲು ಕರೆ

ಶರಣ ಬಂಧುಗಳೇ,

ಪ್ರತಿ ಊರಿನಲ್ಲೂ ಜನರಿಗೆ ಉತ್ತಮ ಸಂಸ್ಕಾರ ನೀಡುವ ಬಸವ ಮಂಟಪಗಳು ನಿರ್ಮಾಣವಾಗುತ್ತಿರುವುದು ಅತೀವ ಸಂತೋಷ ತರುತ್ತದೆ. ಈಗಾಗಲೇ ಅನೇಕ ಕಡೆ ಬಸವ ಮಂಟಪಗಳು ನಿರ್ಮಾಣವಾಗಿ ವಿವಿಧ ಕಾರ್ಯ ಯೋಜನೆಗಳನ್ನು ಹಮ್ಮಿಕೊಂಡಿವೆ; ಮತ್ತೆ ಕೆಲವು ಬಸವ ಮಂಟಪಗಳು ಈಗ ನಿರ್ಮಾಣವಾಗುತ್ತಿವೆ.ಇವುಗಳ ನಿರ್ಮಾಣಕ್ಕೆ ಸ್ಥಳೀಯರು ತನು ಮನ ಧನಗಳಿಂದ ನೆರವು ನೀಡುವುದು ಕರ್ತವ್ಯವಾಗಿದೆ.

1.ರಾಷ್ಟ್ರೀಯ ಬಸವ ದಳ, ಶಿವಮೊಗ್ಗ

ನಗರಾಭಿವೃದ್ಧಿ ಪ್ರಾಧಿಕಾರದಿಂದ ಉತ್ತಮವಾದ, ವಿಶಾಲವಾದ, ಸುಂದರ ನಿವೇಶನವನ್ನು ಖರೀದಿಸಿದ್ದು ಈಗ ಅದರಲ್ಲಿ ನಿರ್ಮಾಣ ಕಾರ್ಯ ಆರಂಭವಾಗಿದೆ. ಧನ ಸಹಾಯ ಮಾಡುವವರು ಮುಂದೆ ಕೊಟ್ಟಿರುವ ವಿಳಾಸಕ್ಕೆ ಸಂಪರ್ಕಿಸಬಹುದು, ಎಂ.ಜಿ.ಚಂದ್ರಶೇಖರಪ್ಪ , ಬಸವ ಸಾಗರ ಪ್ರಿಂಟರ್ಸ್ ,ಡಿ.ಟಿ.ಎಂ. ಉಷಾದೇವಿ ಕಾಂಪ್ಲೆಕ್ಸ್ , 4ನೇ ತಿರುವು, ಪಾರ್ಕ್ ಬಡಾವಣೆ, ಶಿವಮೊಗ್ಗ

2. ರಾಷ್ಟ್ರೀಯ ಬಸವ ದಳ (ರಿ.), ಬೆಳಗಾವಿ

ಮಹಾಂತೇಶ ನಗರದಲ್ಲಿ ಗುಡಸ್ ಕುಟುಂಬದವರು ದಾನವಾಗಿ ಕೊಟ್ಟ ನಿವೇಶನದಲ್ಲಿ ಕಟ್ಟಡ ಕೆಲಸ ಆರಂಭವಾಗಿದೆ.ಸಂಪರ್ಕಿಸುವ ವಿಳಾಸ: ಕೆ. ಬಸವರಾಜಪ್ಪ , ಎಲ್.ಐ.ಸಿ.ಅಧಿಕಾರಿ, ಕ್ವಾರ್ಟರ್, ಜಿ-1, ಜೀವ ವಿಮಾ ಅಧಿಕಾರಿಗಳ ಕ್ವಾರ್ಟರ್ಸ್, ಸಂಗೊಳ್ಳಿ ರಾಯಣ್ಣ ರಸ್ತೆ, ಬೆಳಗಾವಿ-1

3.ರಾಷ್ಟ್ರೀಯ ಬಸವ ದಳ (ರಿ.), ಬಳ್ಳಾರಿ

ಬಳ್ಳಾರಿಯ ಬಸವ ನಗರದಲ್ಲಿ, ವೀರಶೈವ ಸಂಘದವರು ಮಾಡಿದ್ದ ಲೇಔಟಿನ, ನಾಗರಿಕ ಸೌಲಭ್ಯಕ್ಕಾಗಿ ಇದ್ದ ರಾಷ್ಟ್ರೀಯ ಬಸವ ದಳದ ನಿವೇಶನವನ್ನು ಜಿಲ್ಲಾಧಿಕಾರಿಗಳಿಂದ ಪಡೆದು, ಚಿಕ್ಕ ಬಸವಾಲಯ, ರಂಗ ಮಂಟಪ ಕಟ್ಟಿಸಿದ್ದು ಶರಣರು ಈಗ ಪ್ರಾರ್ಥನಾ ಮಂಟಪ ಕಟ್ಟಲಾರಂಭಿಸಿದ್ದಾರೆ. ಸಂಪರ್ಕಿಸುವ ವಿಳಾಸ: ಶರಣೆ. ಶಾರದಮ್ಮ, ಅಧ್ಯಕ್ಷರು, ಬಸವ ಮಂಟಪ, 2ನೆಯ ಲಿಂಕ್ ರಸ್ತೆ, 2ನೇ ಮುಖ್ಯರಸ್ತೆ, ಬಸವೇಶ್ವರ ನಗರ, ಬಳ್ಳಾರಿ-583103

4.ರಾಷ್ಟ್ರೀಯ ಬಸವ ದಳ, ಬಾಗಲಕೋಟೆ

ಕೂಡಲ ಸಂಗಮದ ಬಸವ ಧರ್ಮ ಪೀಠ ಮತ್ತು ರಾಷ್ಟ್ರೀಯ ಬಸವ ದಳ ಬಾಗಲಕೋಟೆ ಇವು ನವನಗರದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ನಿವೇಶನವನ್ನು ಖರೀದಿಸಿದ್ದು ಕಟ್ಟಡ ಕೆಲಸವು ಆರಂಭವಾಗಿದೆ. ಸಂಪರ್ಕಿಸುವ ವಿಳಾಸ: ಎಸ್.ಬಿ.ಅಂಗಡಿ, ಅಧ್ಯಕ್ಷರು, ಬಾಗಲಕೋಟೆ ರಾಷ್ಟ್ರೀಯ ಬಸವ ದಳ, ಸಕ್ರಿ ಹೈಸ್ಕೂಲ್ ಸಮೀಪ, ಮುಚಕಂಡಿ ಕ್ರಾಸ್, ಬಾಗಲಕೋಟೆ (ಡಿಡಿ/ ಚೆಕ್ ಮೇಲೆ ಇರಬೇಕಾದ ಹೆಸರು "ಬಸವ ಧರ್ಮ ಪೀಠ", ಬಾಗಲಕೋಟೆ ಬ್ಯಾಂಕ್)

5. ರಾಷ್ಟ್ರೀಯ ಬಸವ ದಳ, ಚಿತ್ರದುರ್ಗ

ಕಟ್ಟಡದ ಮಹಡಿಯನ್ನು ಕಟ್ಟಿಸಲಾಗುತ್ತದೆ. ಧನ ಸಹಾಯ ಮಾಡುವವರು ಬಸವ ಧರ್ಮ ಪೀಠದ ಹೆಸರಿಗೆ ಕಳಿಸಬೇಕು. ಮತ್ತು ಬೇರೆ ರಾ.ಬ.ದಳಗಳಿಂದ ಕಟ್ಟಡ ಕೆಲಸ ನಡೆಯುತ್ತಿದ್ದರೆ ಕಲ್ಯಾಣ ಕಿರಣಕ್ಕೆ ಬರೆದು ತಿಳಿಸುವುದು.

ಶರಣರ ವಾಣಿ

ಮೂರ್ಖನಿಗೆ ಸ್ವಗೃಹದಲ್ಲಿ ಮಾತ್ರ ಗೌರವ, ಊರಿನ ಮುಖಂಡನಿಗೆ ಊರಿನಲ್ಲಿ ಮಾತ್ರ ಗೌರವ; ರಾಜನಿಗೆ ತನ್ನ ರಾಜ್ಯದಲ್ಲಿ ಮಾತ್ರ ಗೌರವ ಆದರೆ, ಪೂಜ್ಯ ಮಾತಾಜಿಯಂಥವರಿಗೆ ವಿಶ್ವದಲ್ಲೇ ಗೌರವ ಸಿಗುತ್ತದೆ.

- ಡಾ|| ರಾಜಣ್ಣ ವೈದ್ಯ, ಹಾವೇರಿ.

ಬಸವ ಧರ್ಮ ಪೀಠದ ಉತರಾಧಿಕಾರಿಯಾಗಿ

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ

ಕೂಡಲ ಸಂಗಮದ ಬಸವ ಧರ್ಮದ ಮಹಾಜಗದ್ಗುರು ಪೀಠಕ್ಕೆ ಪ್ರಥಮ ಅಧಿಕಾರಿಯಾಗಿ ಲಿಂ|| ಪೂಜ್ಯ ಶ್ರೀಮನ್ ನಿರಂಜನ ಮಹಾ ಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳು ದಿ: 13-1-1992 ರಂದು ಪೀಠಾರೋಹಣ ಮಾಡಿದರು. ಪೂಜ್ಯರು ದಿ:30-6-1995ರಂದು ಲಿಂಗೈಕ್ಯರಾಗಿ ಕ್ರಿಯಾ ವಿಶ್ರಾಂತಿ ಹೊಂದಿದ ಬಳಿಕ, ದಿ: 13-1-1996ರಂದು ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಎರಡನೆಯ ಪೀಠಾಧೀಶರಾಗಿ ಪೀಠಾರೋಹಣ ಮಾಡಿದರು. ಇದಕ್ಕೆ ಉತರಾಧಿಕಾರಿಯನ್ನಾಗಿಯೂ ಮತ್ತು ಬಸವ ಕಲ್ಯಾಣದಲ್ಲಿ ದಿ: 30-4-2002ರಂದು ಸ್ಥಾಪಿತವಾದ ಜಗದ್ಗುರು 'ಅಲ್ಲಮ ಪ್ರಭು ಶೂನ್ಯ ಪೀಠಕ್ಕೆ ಪೂಜ್ಯ ಶ್ರೀ ಅಲ್ಲಮ ಪ್ರಭು ಸ್ವಾಮಿಗಳನ್ನು ಪ್ರಥಮ ಅಧಿಕಾರಿಯನ್ನಾಗಿ ಪೀಠಾರೋಹಣ ಮಾಡಿಸಲಾಗಿದ್ದು. ಅವರು ಸಂಸ್ಥೆಯಿಂದ ತಪೋಸಾಧನೆಗಾಗಿ ಹೊರ ಹೋದುದರಿಂದ ಬಸವ ಧರ್ಮದ ಮಹಾ ಜಗದ್ಗುರು ಪೀಠಕ್ಕೆ ಉತ್ತರಾಧಿಕಾರಿಯನ್ನಾಗಿ ದ್ವಿತೀಯ ಮಹಿಳಾ ಜಗದ್ಗುರು ಮಾತೆ ಗಂಗಾದೇವಿಯವರನ್ನು ನೇಮಕ ಮಾಡಿ ಪೂಜ್ಯ ಮಾತಾಜಿ ದಿ:13-1-2007 ರಂದು ಪೀಠಾರೋಹಣ ಮಾಡಿದಾಗ ಕೂಡಲ ಸಂಗಮದಲ್ಲಿ ಘೋಷಿಸಿದರು. ಪೂಜ್ಯ ಮಾತೆ ಗಂಗಾದೇವಿಯವರ ನಂತರ ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠಕ್ಕೆ 3ನೆಯ ಅಧಿಕಾರಿಯನ್ನಾಗಿ ಜಂಗಮ ಮೂರ್ತಿ ಪೂಜ್ಯ ಶ್ರೀ ಮಾತೆ ಸತ್ಯಾದೇವಿಯವರನ್ನು ಘೋಷಿಸಲಾಯಿತು.

ಬಸವ ಕಲ್ಯಾಣದ ಜಗದ್ಗುರು ಅಲ್ಲಮ ಪ್ರಭು ಶೂನ್ಯ ಪೀಠಕ್ಕೆ ಕಾಯಕ ಯೋಗಿ ಶ್ರೀ ಸಿದ್ಧರಾಮೇಶ್ವರ ಸ್ವಾಮೀಜಿಯವರನ್ನು ಎರಡನೆಯ ಅಧಿಕಾರಿಯನ್ನಾಗಿ ಪೂಜ್ಯ ಮಾತಾಜಿಯವರು ಘೋಷಿಸಿ ಕಲ್ಯಾಣ ಪರ್ವದಲ್ಲಿ ದಿ. 3-5-2007ರಂದು ಪೀಠಾರೋಹಣವು ನೆರವೇರುವುದೆಂದು ತಿಳಿಸಿದರು.

ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆಯ ಹಾತ್‌ಕಣಂಗಲೆ ತಾಲೋಕಿನಲ್ಲಿ ಸಾಂಗ್ಲಿ-ಕೊಲ್ಹಾಪುರ ಹೆದ್ದಾರಿಯಲ್ಲಿರುವ ಅಲ್ಲಮ ಪ್ರಭು ಗಿರಿ (ಡೋಂಗರ್) ಯಲ್ಲಿರುವ ಜಗದ್ಗುರು ಅಲ್ಲಮ ಪ್ರಭು ಮಠದಲ್ಲಿ ದಿ:19-3-2007ರಂದು ಸ್ಥಾಪನೆಗೊಳ್ಳಲಿರುವ ಜಗದ್ಗುರು ಅಲ್ಲಮ ಪ್ರಭು ಯೋಗಪೀಠಕ್ಕೆ ಪೂಜ್ಯ ಶ್ರೀ ಬಸವ ಕುಮಾರ ಸ್ವಾಮೀಜಿಯವರನ್ನು ಪ್ರಥಮ ಅಧಿಕಾರಿಯನ್ನಾಗಿ ಪೀಠಾರೋಹಣ ಮಾಡಿಸಲಾಗುವುದು ಎಂದು ಘೋಷಿಸಿದರು.

- ವರದಿ: ವೀರಣ್ಣ ಲಿಂಗಾಯತ

ಓ ಮಾತೆ ಓ ಮಾತೆ ಓ ನನ್ನ ಗುರು ಮಾತೆ

ಓ ಮಾತೆ ಓ ಮಾತೆ ಓ ಮಾತೆ
ಬಸವ ಪೀಠವು ಎದ್ದು ಮೆರೆಯುತ್ತಿದೆ
ಒಸೆದು ನಾಣ್ಯವು ಹುಟ್ಟಿ ಹರಿಯುತ್ತದೆ ||

ಬಸವ ಧ್ವಜಗಳು ಹಾರುತಲಿವೆ
ಬಸವನ ಮುದ್ರೆ ಮೆರೆಯುತಲಿವೆ
ಲಿಂಗದೇವನ ನಿಷ್ಠೆಯ ಭಕ್ತಿ ಹರಿಯುತ್ತಿದೆ
ಏಕ ದೇವೋಪಾಸನೆಯ ಭಕ್ತಿ ಬೆಳೆಯುತ್ತಿದೆ
ಇದಕ್ಕೆಲ್ಲ ಕಾರಣ ಗುರು ಮಾತೆ ನೀವು

ಅಲ್ಲಮ ಪ್ರಭು ಗಿರಿಯ ತೋರುತ
ಸಿದ್ಧರಾಮರ ದರ್ಶನಕ್ಕೆ ಒಯ್ಯುತ್ತ
ಬಸವ ಧರ್ಮ ಬೆಳೆಸುತ
ಬಸವಾದಿ ಶರಣರ ವಚನಗಳ ಪರಿಚಯಿಸುತ್ತ

ಹೋಗೋಣ ಬನ್ನಿ ಕೂಡಲ ಸಂಗಮದ ಶರಣ ಮೇಳಕ್ಕೆ
ಬಸವ ಕಲ್ಯಾಣದ ಕಲ್ಯಾಣ ಪರ್ವಕ್ಕೆ
ಅಲ್ಲಮ ಗಿರಿಯ ಲಿಂಗಾಯತ ಗಣ ಮೇಳಕ್ಕೆ
ಮಾತಾಜಿ ದರುಶನ ಪಡೆಯಲಿಕೆ

-ಶರಣ ಪ್ರಿಯ ಶಿವಶರಣಪ್ಪ ವಲ್ಲೇಪುರೆ

ಪೀಠಾರೋಹಣ ಸಂದೇಶದಲ್ಲಿ ಮಾತಾಜಿಯವರಿಂದ ನುಡಿಪುಷ್ಪಗಳು

1.ಶರಣರು ಕಾಲಜ್ಞಾನ ವಚನದಲ್ಲಿ ಶರಣ ಮೇಳದ ಬಗ್ಗೆ ಎಂದೋ ಹೇಳಿದ್ದಾರೆ. " ದಕ್ಷಿಣದ ಕಪ್ಪಿಗೆ ಕರೆವರಯ್ಯಾ ಜನ ನೆರೆವರಯ್ಯಾ" ಎಂದು. ಶರಣ ಮೇಳ ಕೇವಲ ನನ್ನ ಶಕ್ತಿಯಿಂದ ನಡೆಯುತ್ತಿಲ್ಲ ಕೇವಲ ನಿಮ್ಮ ಶಕ್ತಿಯಿಂದ ನಡೆಯುತ್ತಿಲ್ಲ ನಮ್ಮೆಲ್ಲರಲ್ಲಿ ಹುದುಗಿರುವ ಗುರು ಬಸವ ಶಕ್ತಿಯಿಂದ ನಡೆಯುತ್ತಿದೆ.

2.ಇಂದು ತಾವು ನನಗೆ ಮಾಲೆ ಹಾಕಿ ಪುಷ್ಪವೃಷ್ಟಿ ಗೈದು, ಮಂಗಳಾರತಿ ಬೆಳಗಿ ಅಭಿಮಾನ ಭಕ್ತಿ ವ್ಯಕ್ತಪಡಿಸಿದ್ದೀರಿ. ಇದು ವ್ಯಕ್ತಿ ಮಾತೆ ಮಹಾದೇವಿಗೆ ಸಂದ ಗೌರವವಲ್ಲ ಇದು ಗುರು ಬಸವಣ್ಣನವರ ತತ್ವಕ್ಕೆ ಸಂದ ಗೌರವ ಬಸವ ಧರ್ಮ ಪೀಠ ಸ್ಥಾಪನೆಯಾಗಿರುವುದು ಬಸವ ತತ್ವ ಪ್ರತಿಷ್ಠಾಪನೆಗಾಗಿ

3.ನಾನು ಯಾವತ್ತೂ ಯಾರನ್ನು ನನ್ನ ಅನುಯಾಯಿಗಳು ಆಗಬೇಕೆಂದು ಬಯಸುವುದಿಲ್ಲ, ಎಲ್ಲರೂ ಗುರು ಬಸವಣ್ಣನವರ ಅನುಯಾಯಿಗಳಾಗಬೇಕು ಎಂದು ನಾನು ಬಯಸುತ್ತೇನೆ.

4. ಅಳುವಿನ ಸ್ಥಿತಿಯಲ್ಲಿ ಲಿಂಗಾಯತ ಧರ್ಮಕ್ಕೆ ಮಠಗಳು ಎನ್ನುವ ಅನ್ನನಾಳದ ಮುಖಾಂತರ ಧರ್ಮದ ಆಹಾರ ಕೊಡಬೇಕಿತ್ತು. ಇದು ಇಲ್ಲಿಯವರೆಗೆ ಆಗುತ್ತಿಲ್ಲ. ಆದ್ದರಿಂದ ನಾವು ಇಂದು ನೇರವಾಗಿ ಸಮಾಜದ ಹೊಟ್ಟೆಗೆ ಧರ್ಮದ ಆಹಾರ ಕೊಡುತ್ತಿದ್ದೇವೆ.

5. ಲಿಂಗಾಯತ ಸಮಾಜ ಕಲುಷಿತಗೊಂಡು ಹರಿಯುವ ನದಿಯಂತೆ ಇದೆ. ಜಲ ಮಂಡಳಿಯವರು ಶುದ್ಧೀಕರಣ ಘಟಕ ಸ್ಥಾಪಿಸಿರುತ್ತಾರೆ. ಶುದ್ಧೀಕರಿಸಿದ ನೀರು ಮಾತ್ರ ಕುಡಿಯಲು ಯೋಗ್ಯವಾದುದು. ಅದೇ ರೀತಿ ಇಂದು ರಾಷ್ಟ್ರೀಯ ಬಸವ ದಳಗಳೆನ್ನುವ ಶುದ್ಧೀಕರಣ ಘಟಕದ ಒಳಗೆ ಬಂದವರು ಮಾತ್ರ ಶುದ್ಧ ಲಿಂಗಾಯತರು, ಶುದ್ಧ ಬಸವ ಭಕ್ತರು .

6.ನನ್ನ ಕುಟುಂಬವೇ ಜಗತ್ತು ಎಂದು ಭಾವಿಸಬಾರದು. ಜಗತ್ತೇ ನನ್ನ ಕುಟುಂಬ ಎಂದು ಭಾವಿಸಿ ಸಮಾಜ ಸೇವೆ ಮಾಡಬೇಕು.

7 ಧರ್ಮದ ರಕ್ಷಣೆಗಾಗಿ ಪ್ರಸಂಗ ಬಂದರೆ ಪ್ರಾಣವನ್ನಾದರೂ ಕೊಡಬೇಕಾಗುತ್ತದೆ. ಸಮಾಜ ಕಟ್ಟುವ ಕೆಲಸ ಬಹಳ ಕಷ್ಟವಿದ್ದು, ಒಡೆಯುವ ಕೆಲಸ ಮಾಡಬಾರದು, ನಾವು ಬೇಡವಾದರೆ ಬಿಡಿ, ಶರಣ ಮೇಳ ಮತ್ತು ಗುರು ಬಸವ ತಂದೆಯನ್ನು ಬಿಡಬೇಡಿ ಎಂದು ಗದ್ಗದಿತರಾಗಿ ನುಡಿದರು.

8. ಮಸೀದಿಯಲ್ಲಿ ಇರುವ ಮೌಲ್ವಿ ಯಾರೇ ಇರಲಿ ; ಚರ್ಚಿನಲ್ಲಿ ಪಾದ್ರಿ ಯಾರೇ ಇರಲಿ, ಗುರುದ್ವಾರದಲ್ಲಿ ಗ್ರಂಥಿ (ಅಲ್ಲಿಯ ಗುರುವಿಗೆ ಕರೆಯುವ ಹೆಸರು) ಯಾರೇ ಇರಲಿ, ಆಯಾ ಧರ್ಮದ ಅನುಯಾಯಿಗಳು ತಮ್ಮ ಧರ್ಮ ಮಂದಿರಗಳಿಗೆ ಹೋಗುತ್ತಾರೆ, ಪ್ರಾರ್ಥನೆ ಮಾಡುತ್ತಾರೆ. ಲಿಂಗಾಯತ ಸಮಾಜದಲ್ಲಿಯೂ ಎಂದು ಈ ರೀತಿ ಎಲ್ಲರೂ, ಬಸವ ಮಂಟಪಗಳಿಗೆ ಬಂದು ಪ್ರಾರ್ಥನೆ ಮಾಡುತ್ತಾರೋ ಅಂದು ಈ ಧರ್ಮ ವಿಶ್ವ ಧರ್ಮವಾಗುತ್ತದೆ.

9.ಲಕ್ಷಗಾವುದ ದೂರಹೋಗಿ ಭಕ್ತನ ಭಕ್ತನು ಕಾಂಬುದು ಸದಾಚಾರ, ಅದಕ್ಕಾಗಿ ಶರಣ ಮೇಳದಲ್ಲಿ ಬಂದು ಸೇವೆ ಮಾಡುವುದು ನನ್ನ ಪುಣ್ಯ ಎಂದು ಭಾವಿಸಬಾರದು.

10.ಮಣ್ಣು ಮಡಕೆಯಾಗುತ್ತೆ, ಮಡಕೆ ಮಣ್ಣಾಗಲ್ಲ ನಿಜ ಆದರೆ ಮಡಕೆ ಒಡೆದರೆ ಮರಳಿ ಮಡಕೆ ಮಾಡಬಹುದೆ? ಮುತ್ತು ನೀರಲ್ಲಾಗುತ್ತೆ ಆದರೆ ಮುತ್ತು ಮತ್ತೆ ನೀರಾಗಲ್ಲ ಆದರೆ ಮುತ್ತು ಒಡೆದರೆ ಏನು ಪ್ರಯೋಜನ? ಅದೇ ರೀತಿ ಮಾನವನು ಶರಣನಾಗಬಹುದು ಗುರುವಾಗಬಹುದು. ಮರಳಿ ಮಾನವನಾಗಲಿಕ್ಕಿಲ್ಲ, ಆದರೆ ದೌರ್ಬಲ್ಯದಿಂದ ಕಾಂಚನ, ಕಾಮಿನಿ, ಕೀರ್ತಿಗಳಿಗೆ ಬಲಿಯಾಗಿ ಒಡೆದು ಹೋಗಬಾರದು.

11. ಅಹಂಕಾರ ಬಿಡಬೇಕು. ಅಕ್ಕಮಹಾದೇವಿ ಅಲ್ಲಮ ಪ್ರಭು, ಚನ್ನ ಬಸವಣ್ಣ, ಸಿದ್ಧರಾಮೇಶ್ವರ, ಮಡಿವಾಳ ಮಾಚಿದೇವ ಇವರು ತತ್ವ ದಿಗ್ಗಜರು, ಆದರೆ ಗುರು ಬಸವಣ್ಣನವರು ಎನ್ನುವ ಸೂತ್ರದಲ್ಲಿ ಬಂಧಿತರಾದವರು.

-ಶರಣ ಬಸವ ಕುಮಾರ

ಧಾರವಾಡದಲ್ಲಿ ಲಿಂಗಾಯತ ಧರ್ಮ ಸಮ್ಮೇಳನ ಮತ್ತು ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠಾರೋಹಣ 37ನೆಯ ವಾರ್ಷಿಕೋತವ

ಧಾರವಾಡ ಜಿಲ್ಲಾ ಲಿಂಗಾಯತ ಧರ್ಮ ಮಹಾ ಸಭೆಯು ಲಿಂಗಾಯತ ಸಮಾವೇಶವನ್ನು ಏರ್ಪಡಿಸಿದ್ದು ದೇವ(ಭಾನು)ವಾರ ದಿ: 1-4-2007ರಂದು ಬೆಳಿಗ್ಗೆ 10-30ರಿಂದ ಧಾರವಾಡದ ಮಲ್ಲಿಕಾರ್ಜುನ ಮನ್ಸೂರು ಕಲಾ ಭವನದಲ್ಲಿ ಸಮಾವೇಶವು ನಡೆಯಲಿದೆ. ಕೂಡಲ ಸಂಗಮದ ಬಸವ ಧರ್ಮ ಪೀಠಾಧೀಶರಾದ ಪೂಜ್ಯ ಶ್ರೀಮನ್ ನಿರಂಜನ ಮಹಾ ಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ಧಾರವಾಡ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠದ ದ್ವಿತೀಯ ಪೀಠಾಧೀಶರಾದ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ನೇತೃತ್ವದಲ್ಲಿ ನಡೆಯಲಿರುವ ಸಮಾವೇಶದಲ್ಲಿ ಅನೇಕ ಜನ ಗಣ್ಯರು, ಉಪನ್ಯಾಸಕರು, ಭಾಗವಹಿಸಲಿದ್ದಾರೆ.

ಪೀಠಾರೋಹಣ ವಾರ್ಷಿಕೋತ್ಸವ

ಜಗನ್ಮಾತಾ ಅಕ್ಕಮಹಾದೇವಿ ಮಹಿಳಾ ಜಗದ್ಗುರು ಪೀಠವು 1970ರಲ್ಲಿ ಅಕ್ಕಮಹಾದೇವಿ ಜಯಂತಿ, ದವನದ ಹುಣ್ಣಿಮೆಯಂದು ಸ್ಥಾಪನೆಯಾಯಿತು. ಪೂಜ್ಯ ಮಾತಾಜಿಯವರು ಪ್ರಥಮ ಜಗದ್ಗುರುವಾಗಿ ಪೀಠಾರೋಹಣ ಮಾಡಿದರು. ಪ್ರವಚನ ಪಿತಾಮಹರಾದ ಪೂಜ್ಯ ಶ್ರೀಮನ್ ನಿರಂಜನ ಮಹಾ ಜಗದ್ಗುರು ಲಿಂಗಾನಂದ ಸ್ವಾಮಿಗಳು 30-6-1995ರಂದು ಲಿಂಗೈಕ್ಯರಾಗಿ ಕ್ರಿಯಾ ವಿಶ್ರಾಂತಿಯನ್ನು ಹೊಂದಿದ ಬಳಿಕ ಪೂಜ್ಯ ಮಾತಾಜಿಯವರು ಬಸವ ಧರ್ಮ ಪೀಠಕ್ಕೆ 2ನೆಯ ಪೀಠಾಧೀಶರಾದರು. ಆಗ ಪೂಜ್ಯ ಶ್ರೀ ಮಾತೆ ಗಂಗಾದೇವಿ ಅವರನ್ನು ಜಗನ್ಮಾತಾ ಅಕ್ಕಮಹಾದೇವಿ ಪೀಠಕ್ಕೆ ಪೀಠಾರೋಹಣ ಮಾಡಿಸಲಾಯಿತು.

ಜಗನ್ಮಾತಾ ಅಕ್ಕಮಹಾದೇವಿ ಪೀಠದ 37ನೆಯ ವಾರ್ಷಿಕೋತವವನ್ನು ದವನದ ಹುಣ್ಣಿಮೆ ದಿ. 2-4-07ರಂದು ಬೆಳಿಗ್ಗೆ 10-30ಕ್ಕೆ ಶಿವ(ಸೋಮ)ವಾರದಂದು ನೆರವೇರಿಸಲಾಗುತ್ತಿದೆ. ಸದ್ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕೆಂದು ಕೋರುತ್ತೇವೆ.

ಶರಣ.ಎಸ್.ಎಲ್.ಗೌಡರು
ಅಧ್ಯಕ್ಷರು, ಲಿಂಗಾಯತ ಧರ್ಮ ಮಹಾ ಸಭಾ
ಧಾರವಾಡ

ಶರಣ. ಸಿದ್ದಣ್ಣ ನಟೇಗಲ್
ಅಧ್ಯಕ್ಷರು, ರಾಷ್ಟ್ರೀಯ ಬಸವ ದಳ
ಧಾರವಾಡ

ಹೊತ್ತಿದ ಜ್ಯೋತಿ

ಜ್ಯೋತಿ ಹೊತ್ತಿತೋ ಕಲ್ಯಾಣದ
ಜ್ಯೋತಿ ಹೊತ್ತಿತೋ ॥ ಪ ॥

ಜಾತಿಭೇದ ಅಳಿಸುತ
ನೀತಿವಾದ ಬೋಧಿಸುತ
ಶರಣರ ತತ್ವ ಸಾರುತ ॥ 1 ॥

ಜಗದ ಭ್ರಾಂತಿ ಅಳಿಸುತ
ಜ್ಞಾನ ಜ್ಯೋತಿ ಬೆಳಗುತ
ಸ್ತ್ರೀ ಕುಲಕೆ ಧೈರ್ಯ ತುಂಬುತಾ ॥ 2॥

ಜ್ಞಾನ ಭಕ್ತಿ ತುಂಬುತಾ
ಗುರುವಿನ ಮಹಿಮೆಯ ಬೀರುತಾ
ಬಸವ ಮಂತ್ರದ ಮಹಿಮೆ ಸಾರುತಾ ॥3॥

ಕ್ರಾಂತಿ ಕಹಳೆ ಊದುತಾ
ಮತೆ ಶಾಂತಿಯ ನೆಲೆಸುತಾ
ಧರ್ಮ ಕ್ರಾಂತಿ ಮಾಡುತಾ ॥ 4 ॥

ತ್ಯಾಗದ ಮಹಿಮೆ ಬೀರುತಾ
ಸಮಾನತೆಯ ತತ್ವ ಸಾರುತಾ
ಲೀಲಾವಿಶೇಷ ಲಿಂಗದೇವನ ಮೆರೆಸುತಾ

-ಮಾತೆ ಜ್ಞಾನೇಶ್ವರಿ, ಬೆಂಗಳೂರು

ಜಗದ್ಗುರು ಅಲ್ಲಮ ಪ್ರಭು ಯೋಗ ಪೀಠ;ಅಲ್ಲಮ ಪ್ರಭು ಗಿರಿ 20-3-07ರಂದು ಪೀಠಾರೋಹಣ ಮಾಡುತ್ತಲಿರುವ ಪೂಜ್ಯ ಶ್ರೀ ಬಸವ ಕುಮಾರ ಸ್ವಾಮಿಗಳ ಕಿರು ಪರಿಚಯ

ಸಾತ್ವಿಕ, ಶಾಂತ ಸ್ವಭಾವ, ಪೂಜಾ ನಿಷ್ಠೆ, ಧರ್ಮ ಪ್ರಚಾರದ ಕಳಕಳಿ ಇವುಗಳಿಂದ ಗಮನ ಸೆಳೆಯುವ ಜಂಗಮ ಮೂರ್ತಿ ಪೂಜ್ಯ ಬಸವ ಕುಮಾರ ಸ್ವಾಮೀಜಿಯವರು. ಗೋಕಾಕಿನ ಶರಣ. ಲಿಂ॥ ಮಲಪ್ಪ ಮತ್ತು ಶರಣೆ.ಸಾತವ್ವನವರ ಪುತ್ರನಾಗಿ ದಿ:20-1-1953ರಂದು ಜನಿಸಿದ ಚಂದ್ರಪ್ಪ ಬಾಲ್ಯದಿಂದಲೂ ಆಧ್ಯಾತ್ಮ ಜೀವಿ. ಯೋಗಾಸನ, ಪೂಜೆ, ಅಧ್ಯಯನಗಳನ್ನು ರೂಢಿಸಿಕೊಂಡೇ ಬೆಳೆದ ಚಂದ್ರಪ್ಪ ಎಸ್.ಎಸ್.ಎಲ್.ಸಿ. ಮುಗಿಸಿ ಟೈಪಿಂಗ್ ಕಲಿತು ಗೋಕಾಕಿನ ಜೆ.ಎಸ್.ಎಸ್. ಕಾಲೇಜಿನಲ್ಲಿ 1973ರಿಂದ 1998ರವರೆಗೆ ಬೆರಳಚ್ಚುಗಾರರಾಗಿ ಕಾಯಕ ನಿರ್ವಹಿಸುತ್ತಿದ್ದರು. ಪೂಜ್ಯ ಶ್ರೀ ಲಿಂಗಾನಂದ ಮಹಾಸ್ವಾಮಿಗಳು ಗೋಕಾಕದಲ್ಲಿ 1984ರಲ್ಲಿ ಪ್ರವಚನ ಮಾಡಿದಾಗ ಬಾಲ್ಯದಿಂದಲೂ ಸುಪ್ತವಾಗಿದ್ದ ಆಧ್ಯಾತ್ಮಿಕ ಆಸಕ್ತಿ ಅಭಿವ್ಯಕ್ತಗೊಂಡಿತು. ತಪ್ಪದೆ ಪ್ರವಚನ ಕೇಳಿದರು. 1994ರಲ್ಲಿ ಮತ್ತೊಮ್ಮೆ ಪ್ರವಚನ ನಡೆದಾಗ ಭಕ್ತಿಯ ಹೂವು ವೈರಾಗ್ಯದ ಫಲವಾಗಿ ರೂಪುದಳೆಯಿತು. ಸತತವಾಗಿ ಶರಣ ಮೇಳಕ್ಕೆ ಬಂದುದಲ್ಲದೆ, ಜೆ.ಎಸ್.ಎಸ್ ಕಾಲೇಜನಲ್ಲಿ ರಾಷ್ಟ್ರೀಯ ಬಸವ ದಳದ ಪ್ರಾರ್ಥನಾ ಕಾರ್ಯಕ್ರಮ ಆರಂಭಿಸಿದರು. ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರಿಂದ ದಿ.15-1-1997ರಂದು ಕ್ರಿಯಾ ಮೂರ್ತಿ ದಕ್ಷೆಯನ್ನು ಪಡೆದರು. ಗುರುವಾರ ಪೇಟೆಯಲ್ಲಿದ್ದ ತಮ್ಮ ಮನೆಯ ಮುಂದಿನ ಬಯಲು ಜಾಗದಲ್ಲಿ ಬಸವ ಮಂಟಪ ನಿರ್ಮಿಸಿ ದಿ.9-3-1997ರಂದು ಅದರಲ್ಲಿ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಹಸ್ತದಿಂದ ಶ್ರೀ ಗುರು ಬಸವಣ್ಣನವರ ಮೂರ್ತಿಯನ್ನು ಪ್ರತಿಷ್ಠಾಪಿಸಿದರು.

ವೈರಾಗ್ಯ ಪಕ್ವಗೊಂಡು ಬಸವ ಧರ್ಮ ಪೀಠಕ್ಕೆ ತಮ್ಮನ್ನು ತಾವು ಅರ್ಪಿಸಿಕೊಳ್ಳಲು ನಿರ್ಧರಿಸಿದರು. ದಿ: 29-3-1998ರಂದು ಅಲ್ಲಮ ಪ್ರಭು ಜಯಂತಿ, ಬೆಂಗಳೂರಿನ ಬಸವ ಮಂಟಪದಲ್ಲಿ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಜಂಗಮ ದೀಕ್ಷೆ ನೀಡಿದಾಗ ಚಂದ್ರಪ್ಪನವರು ಆಧ್ಯಾತ್ಮಿಕ ಪುನರ್ಜನ್ಮ ಪಡೆದು ಪೂಜ್ಯ ಬಸವ ಕುಮಾರ ಸ್ವಾಮಿಗಳಾದರು.

ಗೋಕಾಕಿನಲ್ಲಿ 1998ರ ಮೇ ತಿಂಗಳಲ್ಲಿ ಅಖಿಲ ಭಾರತ ಬಸವ ಧರ್ಮ ಸಮ್ಮೇಳನವನ್ನು ರಾ.ಬ.ದಳದ ನೇತೃತ್ವದಲ್ಲಿ ಯಶಸ್ವಿಯಾಗಿ ನಡೆಸಿದರು. ಪುರಸಭೆಯಿಂದ ವಿಶಾಲವಾದ ಒಂದು ನಿವೇಶನ ಪಡೆದು 1999ರಲ್ಲಿ ಬಸವ ಮಂಟಪ ನಿರ್ಮಾಣ ಮಾಡಲು ಪ್ರೇರಕರಾದರು. 1998ರಿಂದ ಬಸವ ಧರ್ಮ ಪೀಠದ ಜಂಗಮ ಮೂರ್ತಿಯಾಗಿ ಧರ್ಮ ಪ್ರಚಾರದಲ್ಲಿ ನಿರತರಾಗಿದ್ದಾರೆ.

ಇದೇ 19-3-2007ರಂದು ಮಹಾರಾಷ್ಟ್ರ ರಾಜ್ಯದ ಕೊಲ್ಹಾಪುರ ಜಿಲ್ಲೆಯ ಹಾತ್‌ಕಣಂಗಲೆ ತಾಲ್ಲೋಕಿನಲ್ಲಿರುವ ಆಳತೆ ಗ್ರಾಮದ ಬಳಿಯ ಅಲ್ಲಮ ಪ್ರಭು ಡೋಂಗರ (ಗಿರಿ)ದಲ್ಲಿ ಸ್ಥಾಪನೆಯಾಗಲಿರುವ ಜಗದ್ಗುರು ಅಲ್ಲಮ ಪ್ರಭು ಯೋಗ ಪೀಠದ ಪ್ರಥಮ ಅಧಿಕಾರಿಯಾಗಿ ಪೀಠಾರೋಹಣ ಮಾಡಲಿದ್ದಾರೆ.

ಕಂಗೊಳಿಸಿದ ಕಲ್ಯಾಣ

ಅಂದು ಒಬ್ಬ ಜಂಗಮನ ಅಭಿಮಾನದಿಂದ ಹಾಳಾಯಿತು ಕಲ್ಯಾಣ
ಇಂದು ಒಬ್ಬ ಜಂಗಮಳ ಅಭಿಮಾನದಿಂದ ಕಲ್ಯಾಣಕ್ಕೆ ಕಳೆಯೇರಿತ್ತು
ಮಠಾಧಿಪತಿಗಳ, ರಾಜಕಾರಣಿಗಳ ಕ್ರೂರತ್ವ ಬೀದಿಗೆ ಬಂದಿತ್ತು
ಕಲ್ಯಾಣ ಪರ್ವದ ಜಯಭೇರಿಯಲ್ಲಿ
ಸರ್ವಜನಕೆ ಶರಣರ ರಾಜ ಮಾರ್ಗ ಸುಲಭವಾಯ್ತು
ಹೇ ಲೀಲಾ ವಿಶೇಷ ಲಿಂಗದೇವ.

- ಮಾತೆ ಜ್ಞಾನೇಶ್ವರಿ

ಸಮಸ್ಯೆ..? - ಸಮಾಧಾನ..!

ಲೀಲಾವತಿ ಕರಡಿ, ಬೆಂಗಳೂರು

?ತಾವು ಸದಾ ಯೋಜನೆಗಳನ್ನು ಹಾಕಿಕೊಳ್ಳುತ್ತೀರಿ. ಇದರಿಂದ ಸಾಧಕರಿಗೆ ಕೆಲಸದ ಅಬ್ಬರ ಜಾಸ್ತಿಯಾಗಿ, ಸಾಧನೆಗೆ ಸಮಯ ಸಿಕ್ಕಲಿಲ್ಲ ಎಂದು ಬೇಸರಗೊಂಡು ಬಿಟ್ಟು ಹೋಗುತ್ತಾರೆ ಎಂದು ಕೆಲವು ಭಕರ ವಾದ?

★ಲೇಸೆನಿಸಿಕೊಂಡು ಒಂದು ದಿನ ಬದುಕಿದರೆ ಸಾಲದೆ? ಎಂಬ ಧರ್ಮಪಿತರ ವಾಣಿಯಂತೆ ತನು-ಮನಗಳನ್ನು ಸಾಧಕರು ಸದಾ ಕ್ರಿಯಾಶೀಲವಾಗಿ ಇಟ್ಟು ಕೊಳ್ಳಬೇಕು. ನಮ್ಮ ಜೀವನ ಅನುಭವದಿಂದ ಕಲಿತ ಪಾಠವೆಂದರೆ ಧ್ಯಾನ-ಯೋಗಾಭ್ಯಾಸ ಇವು ಹೋಳಿಗೆಯಂತೆ. ಎಷ್ಟೇ ರುಚಿ ಇದ್ದರೂ ಒಂದೋ ಎರಡೋ ತಿನ್ನುವುದರಿಂದ ಬೇಸರ ಬರುತ್ತದೆ. ಕಾಯಕವು ರೊಟ್ಟಿ ಮುದ್ದೆಯಂತೆ ಜೀವನ ಪರ್ಯಂತರ ಬೇಸರ ತರಿಸುವುದಿಲ್ಲ. ಅಂತೆಯೇ ಸಂಸ್ಥೆ ಬಿಟ್ಟು ತಪಸು ಮಾಡುತ್ತೇವೆ ಎಂದು ಉಳವಿಯ ಅರಣ್ಯಕ್ಕೆ ಹೋದ ಅನೇಕರು ಒಂದು ಹೋಗಿ ಎರಡು ಆಗಿ, ಎರಡು ಹೋಗಿ, ಮೂರು ಆಗಿದ್ದಾರೆ. ಗುರು ಸನ್ನಿಧಿಯಲ್ಲಿ, ಧರ್ಮ ಪ್ರಚಾರ ಕಾಯಕದಲ್ಲಿ ನಿರತರಾದವರು ಅಪಾರ ಪ್ರಗತಿ ಸಾಧಿಸಿದ್ದಾರೆ. ಯಾರಿಗೆ ಧರ್ಮಗುರುವಿನಲ್ಲಿ ಶ್ರದ್ಧೆ- ಶರಣಾಗತಿ ಇದೆಯೋ, ಆ ತತ್ವಗಳನ್ನು ಪ್ರಚಾರ ಮಾಡಬೇಕು ಎಂಬ ಕಳಕಳಿ ಇದೆಯೋ ಅವರಿಗೆ ದಣಿವು ಎನ್ನಿಸುವುದೇ ಇಲ್ಲ. ಪರಿಶ್ರಮವನ್ನು ಸಂತೋಷದಿಂದ ಆಹ್ವಾನಿಸುತ್ತಾರೆ ಜೀವನವನ್ನೇ ತಪಸ್ಸನ್ನಾಗಿ ಭಾವಿಸುತ್ತಾರೆ.

ಚಂದ್ರಕಲಾ ಶಂಕರ್, ತುಮಕೂರು

?ಮಾಯಾದೇವಿಗೂ (ಅಕ್ಕ) ಮಹಾದೇವಿಗೂ ಇರುವ ವ್ಯತ್ಯಾಸವೇನು?

★ಮಾಯಾದೇವಿಯೂ ಮಧುಕೇಶ್ವರ (ಶಿವ)ನನ್ನು ತನ್ನ ಪತಿಯೆಂದು ಭಾವಿಸಿ ವಿವಾಹವಾಗದೆ ಉಳಿದಿದ್ದಳು. (ಅಕ್ಕ)ಮಹಾದೇವಿಯೂ ಮಲ್ಲಿಕಾರ್ಜುನನನ್ನು ತನ್ನ ಪತಿ ಎಂದು ಭಾವಿಸಿ ವಿವಾಹವಾಗದೆ ಉಳಿದಿದ್ದಳು. ಇವರಿಬ್ಬರೂ ಅಪಾರ ಸುಂದರಿಯರಾಗಿದ್ದರು. ಆದರೆ ಮಾಯಾದೇವಿಯಲ್ಲಿ ತನ್ನ ಸೌಂದರ್ಯದ ಅಭಿಮಾನವಿತ್ತು. ಮೋಹ ಮಮಕಾರ ಅಳಿದಿರಲಿಲ್ಲ ಆದರಿಂದಲೇ ಅಲ್ಲಮ ಪ್ರಭುವನ್ನು ತನ್ನ ಮೋಹ ಜಾಲಕ್ಕೆ ವಿಳೆಯಲೆತ್ನಿಸಿದಳು.

ಎಳನಡುವಿನ ಸೋಮಶೇಖರಪ್ಪ ತೋಟದ ಮನೆ

? ಶ್ರೀ ಸಿದ್ದರಾಮೇಶ್ವರ ಚರಿತ್ರೆ ಎಂಬ ಒಂದು ಪುಸ್ತಕ ಸಿಕ್ಕಿತು. ಅದು ಹೊಟಗಿ ಬೃಹನ್ಮಠದಿಂದ ಪ್ರಕಾಶನಗೊಂಡಿದೆ. ಅದರಲ್ಲಿ ಸಿದ್ಧರಾಮೇಶ್ವರರು ಕಲ್ಯಾಣಕ್ಕೆ ಬಂದ ಪ್ರಸಂಗವೇ ಇಲ್ಲ ಮತ್ತು ಅದರಲ್ಲಿ ಸಿದ್ದರಾಮೇಶ್ವರರೇ ಅಲ್ಲಮಪ್ರಭುವಿಗೆ ದೀಕ್ಷೆ ಮಾಡಿದ್ದಾರೆ. ಏನು ಇದೆಲ್ಲ ?

★ ಪಂಚ ಪೀಠಾಧೀಶರು ಮತ್ತು ಅವರ ಅನುಯಾಯಿಗಳು ಬರೀ ಸುಳ್ಳಿನ ಬಲೆ ಹೆಣೆಯುವಲ್ಲಿ ಪರಿಣಿತರು. ನೀವು ಅನವಶ್ಯಕ ಪುಸ್ತಕಗಳನ್ನು ಓದಿ ತಲೆ ಕೆಡಿಸಿಕೊಳ್ಳದೆ ನೇರವಾಗಿ ಸಿದ್ಧರಾಮೇಶ್ವರರ ವಚನಗಳನ್ನು ಓದಿ, ಸತ್ಯವನ್ನು ಅರಿತುಕೊಳ್ಳಿರಿ.

ಧರ್ಮಣ್ಣ ಮಾಸ್ಟರ್, ಕಣಮಾಸ, ಆಳಂದ

?ಬರಹ, ಭಾಷಣಗಳಲ್ಲಿ ಅನುಭವ ಮಂಟಪದ ಶರಣರನ್ನು ಕುರಿತು ಸಂಬೋಧಿಸುವಾಗ ಶಿವಶರಣರು ಎನ್ನಬೇಕೋ ಶರಣರು ಎನ್ನಬೇಕೋ?

★ವಚನ ಸಾಹಿತ್ಯದಲ್ಲಿ "ಶಿವ" ಎಂಬ ಪದವನ್ನು ನಿರಾಕಾರ ದೇವರ ಸೂಚಕವಾಗಿಯೂ ಬಳಸಲಾಗಿದೆ. ಉದಾ: ಶಿವ ಗುರುವೆಂದು ಬಲ್ಲಾತನೆ ಗುರು. ಆದರೆ ಈಗ ಬಳಸುವಾಗ "ಶಿವ"ಎಂದ ತಕ್ಷಣ ವಿಶಿಷ್ಟ ಆಕಾರವು ನಮ್ಮ ಕಣ್ಣೆದುರಿನಲ್ಲಿ ಮೂಡುತ್ತದೆ. ಆದ್ದರಿಂದ ಶಿವ ಶರಣರು ಎನ್ನದೆ, ಶರಣರು ಎಂದು ಬಳಸಿದರೆ ಸಾಕು. ಏಕೆಂದರೆ ಶೈವ, ವೀರಶೈವದಲ್ಲಿ ಶಿವಭಕ್ತ ಪದಕ್ಕೆ ಹೆಚ್ಚಿನ ಮಹತ್ವವಿದೆ. ಪಾರಿಭಾಷಿಕ ಶುದ್ಧಿ ಬಹಳ ಮುಖ್ಯ. ಆದ್ದರಿಂದ ಬಸವ ಪಥಿಕರಿಗೆ ಶರಣ ಎಂಬುದೇ ಸೂಕ್ತ.

ಡಿ.ಗುರುಮಲ್ಲಪ್ಪ, ದೊಡ್ಡಪುರ

1.?ನಾನು ಮರಣಾನಂತರ ದೇಹದಾನವನ್ನು ವೈದ್ಯಕೀಯ ಕಾಲೇಜಿಗೆ ಮಾಡಲು ನಿರ್ಧರಿಸಿ

ಕೇಳಿದಾಗ ತಾವು ಅನುಮತಿ ನೀಡಿದ್ದೀರಿ. ದೇಹವನ್ನು ಕಾಲೇಜಿನವರು ಪಡೆಯುತ್ತಾರೆ. ಇಷ್ಟಲಿಂಗವನ್ನು ಏನು ಮಾಡಬೇಕು?

★ಜೀವನ ಪರ್ಯಂತರ ಪೂಜಿಸಿದ ಇಷ್ಟಲಿಂಗವನ್ನು ಶರೀರ ರಹಿತವಾಗಿ ಭೂಮಿಯಲ್ಲಿ ಸಮಾಧಿ ಮಾಡುವುದಾಗಲಿ, ನೀರಿನಲ್ಲಿ ಬಿಡುವುದಾಗಲಿ ಸೂಕ್ತವಲ್ಲ. ಅನಿಮಿಷಯ್ಯನ ಇಷ್ಟಲಿಂಗವು ಅಲ್ಲಮಪ್ರಭುದೇವರಿಗೆ ಪ್ರಾಪ್ತವಾದಂತೆ, ನಿಮ್ಮ ನಂತರ ನಿಮ್ಮ ಮನೆಯಲ್ಲಿ ಯಾರಿಗಾದರೂ ಇನ್ನೂ ಲಿಂಗದೀಕ್ಷೆ ಆಗಿಲ್ಲದವರೊಬ್ಬರಿಗೆ ಮತ್ತು ನಿಷ್ಠೆಯಿಂದ ಪೂಜೆ ಮಾಡುವ ಆಸಕ್ತಿ ಇರುವವರಿಗೆ ಗುರುಗಳ ಮೂಲಕ ಇಷ್ಟಲಿಂಗ ದೀಕ್ಷೆ ಮಾಡಿಸಿ ಕೊಡುವುದು ಒಳ್ಳೆಯದು.

2.?ನಾನು 40 ವರ್ಷಗಳ ಹಿಂದೆ ಬಸವ ಎಂಬ ಮಂತ್ರವನ್ನು (ಶ್ರೀ ರಾಮ ಎಂದು ಬರೆಯುವ ಒಬ್ಬರನ್ನು ನೋಡಿ ಪ್ರೇರಿತನಾಗಿ) ಬರೆಯಲು ಆರಂಭಿಸಿದೆ. ಪ್ರತಿ ದಿವಸ 300-350ರಂತೆ ಬರೆಯಲಾಗಿ, ಈಗ ಸುಮಾರು 44ಲಕ್ಷದಷ್ಟಾಗಿದೆ ಜೀವನದ ಕಡೆಯ ಕ್ಷಣದವರೆಗೆ ಬರೆಯುತ್ತೇನೆ. ಹೀಗೆ ಬರೆದುದನ್ನು ಏನು ಮಾಡಬೇಕು?

★ಬಸವ ಮಂಟಪಗಳನ್ನು ಕಟ್ಟುವಾಗ ಅಡಿಪಾಯದಲ್ಲಿ ಗೋಡೆಗಳ ಮಧ್ಯದ ಪೊಳ್ಳು ಜಾಗದಲ್ಲಿ ಮಣ್ಣು ತುಂಬುವಾಗ ಅದರಲ್ಲಿ ಚದುರಿಸಿದಂತೆ ಹಾಕಬಹುದು ಅಥವಾ ನಿಮ್ಮದೇ ಆದ ಜಮೀನು ಇದ್ದರೆ ಅದರಲ್ಲಿ ಒಂದು ಬಸವ ಮಂಟಪ ಕಟ್ಟಿ, ಮಧ್ಯೆ ಒಂದು ಚೌಕಾಕಾರದ ಕಟ್ಟೆ ಕಟ್ಟಿ ಅದರೊಳಗೆ ಮಂತ್ರ ಬರೆದ ಗ್ರಂಥಗಳನ್ನು ಇಟ್ಟು ಕಟ್ಟೆಯ ಮೇಲೆ ಸ್ಲ್ಯಾಬ್ ಹಾಕಿ ಅದರ ಮೇಲೆ ಗುರು ಬಸವಣ್ಣನವರ ಒಂದು ಮೂರ್ತಿಯನ್ನು ಇಡಬಹುದು. ಅನುಕೂಲವಿದ್ದರೆ ಮುಂದೆ ಬಸವ ಮಂಟಪ ಎಂಬ ಪ್ರಾರ್ಥನಾ ಮಂದಿರ ಸಹ ಕಟ್ಟಿಸಬಹುದು.

ಸಿದ್ಧಲಿಂಗ ದೇಸಾಯಿ, ಧಾರವಾಡ. (ಮೊಬೈಲ್ ಮೂಲಕ)

?ಪೂಜ್ಯ ಮಾತಾಜಿಯವರು ಸಹ ಶಿವರಾತ್ರಿ ಆಚರಿಸುತ್ತಾರಲ್ಲ ಎಂದು ಕೆಲವರು ಆಕ್ಷೇಪಿಸುತ್ತಲಿದ್ದಾರೆ. ಇದಕ್ಕೆ ಏನನ್ನುತ್ತೀರಿ?

★ ಸಾಂಪ್ರದಾಯಿಕವಾಗಿ ಶಿವರಾತ್ರಿಯನ್ನು ಇಡೀ ಭಾರತದಾದ್ಯಂತ ಆಚರಿಸಲಾಗುತ್ತಿದೆ. ವರ್ಷವಿಡೀ ಗುಡಿಗೆ ಹೋಗದವರು ಅಂದು ಶಿವದೇವಾಲಯವನ್ನು ಹುಡುಕುತ್ತಾರೆ. ವರ್ಷವಿಡೀ ಇಷ್ಟಲಿಂಗಕ್ಕೆ ಬೆಳಕು-ಗಾಳಿ-ನೀರು ತೋರಿಸದವರು ಅಂದು ನೀರೆರೆದು, ವಿಭೂತಿ ಧರಿಸುತ್ತಾರೆ. ಹೀಗಿರುವಾಗ ಬಸವ ಪಥಿಕರಿಗೂ ಒಂದು ಪರ್ಯಾಯ ವ್ಯವಸ್ಥೆ ಬೇಕಲ್ಲವೆ ? ಅದಕ್ಕೆಂದೇ ಶರಣ ಗಣ ಮೇಳವನ್ನು ಸಂಯೋಜಿಸಿ ಸಾಮೂಹಿಕ ಪ್ರಾರ್ಥನೆ, ಸಾಮೂಹಿಕ ಇಷ್ಟಲಿಂಗಾರ್ಚನೆ ಮತ್ತು ಸರ್ವ ಶರಣರ ದಿನಚರಣೆ ಆಚರಿಸಲಾಗುವುದು. ಅದೇನೆ ಇರಲಿ ವಿಭೂತಿ, ರುದ್ರಾಕ್ಷಿ, ಓಂಕಾರಗಳ ಕೊಡುಗೆಯನ್ನು ಅಷ್ಟಾವರಣಗಳಲ್ಲಿ ತೆಗೆದುಕೊಂಡ ಮೇಲೆ ಅವುಗಳ ದಾತನಾದ ಮುತ್ತಜ್ಜ ಶಿವನಿಗೆ ವರ್ಷದಲ್ಲಿ ಒಂದು ದಿನವಾದರೂ ಕೃತಜ್ಞತೆ ಸಲ್ಲಿಸಬೇಕಾದುದು ಕರ್ತವ್ಯವಲ್ಲವೆ?

ಮಾತೆ ಕಸೂರಿ ದೇವಿ, ಬಸವ ಗಂಗೋತ್ರಿ

? ಕೆಲವು ಸಾಧಕರು, ವೈರಾಗ್ಯದ ಆದರ್ಶ ಇಟ್ಟುಕೊಂಡೇ ಬರುವರು. ನಂತರ ಮನಸ್ಸು ಹೊಯ್ದಾಡ ತೊಡಗುವುದು. ಆಗ ಅವರು ತಾವಿಟ್ಟುಕೊಂಡು ಬಂದ ಗುರಿ ತಲ್ಪಲಾಗಲಿಲ್ಲ ಎಂದು ತಾವಿಟ್ಟುಕೊಂಡ ಆದರ್ಶದಿಂದ ವಿಮುಖರಾಗಬೇಕೆ?

★ರಸ್ತೆಯಲ್ಲಿ ಸಾಗುವಾಗ ದಿಬ್ಬ-ತಗ್ಗುಗಳು ಬಂದಂತೆ ಜೀವನದಲ್ಲಿ ಸಹ ಏರಿಳಿತಗಳು ಬರುತ್ತವೆ. ವೈರಾಗ್ಯದ ದಾರಿ ರಸ್ತೆ ಮೇಲೆ ನಡೆದಂತಲ್ಲ, ಬೆಟ್ಟ ಗುಡ್ಡ ಕಾನನದಲ್ಲಿ ನಡೆದಂತೆ. ಅಧಿ ಭೌತಿಕ, ಅಧಿ ದೈವಿಕ, ಅಧ್ಯಾತ್ಮಿಕ ಎಡರುಗಳು ಬಂದಾಗ ಮನಸ್ಸು ವಿಚಲಿತವಾಗುವುದು ಸ್ವಾಭಾವಿಕ;ಆದರೆ ಆದರ್ಶದ ಕಡೆಗೆ ಗಮನವಿರಬೇಕು; ಮನಸ್ಸನ್ನು ಗಟ್ಟಿಗೊಳಿಸಿ ಗುರಿಯತ್ತ ಸಾಗಬೇಕು.

ನಾಗರಾಜು ಎಸ್.ನಿಂಬರ್ಗಿ, ಫರಹತಾಬಾದ

? ನಾನು ಒಮ್ಮೆ ಬೇರೆ ಊರಿಗೆ ಹೋಗುವುದಿತ್ತು. ರೇಲ್ವೆ ನಿಲ್ದಾಣದಲ್ಲಿದ್ದೆ. ಆಗ ಒಂದು ತಳ್ಳು ಗಾಡಿಯಲ್ಲಿ ಬಾಳೆಹಣ್ಣು ಬಂದಿತು. ಅದನ್ನು ತಗೊಂಡು ತಿನ್ನುತ್ತಲಿದ್ದೆ ಆಗ ಪರಿಚಯದ ಒಬ್ಬ ಶರಣರು ಬಂದು ವ್ಯಂಗ್ಯವಾಗಿ ನಕ್ಕು; ಏನಿದು ಹುಡುಗರಂತೆ ರಸ್ತೆಯಲ್ಲಿ ತಿನಕೋತಾ ನಿಂತಿದ್ದೀಯಲ್ಲ ಎಂದು

ನಾನೇನೋ ಮಹಾ ಅಪರಾಧ ಮಾಡಿದಂತೆ , ಏನಿದು ಅಸಹ್ಯತನ ಎಂದರು. ನಾನು ಮಾಡಿದ್ದು ತಪ್ಪೆ ?

★ ನೀವು ಮಾಡಿದ್ದು ಖಂಡಿತಾ ತಪ್ಪಲ್ಲ; ಅವರ ವ್ಯಂಗ್ಯವೇ ತಪ್ಪು. ನೀವೇನು ಆಮ್ಲೆಟ್, ಬಿರಿಯಾನಿ ತಿಂದಿಲ್ಲ ಶುದ್ಧ ಸಸ್ಯಾಹಾರವಾದ ಬಾಳೆಹಣ್ಣು ತಿಂದಿದ್ದೀರಿ.ಇದರಲ್ಲಿ ಅಸಹ್ಯತನವೇನೂ ಇಲ್ಲ. ಕೆಲವರಿಗೆ ಸದಾ ಇನ್ನೊಬ್ಬರಲ್ಲಿ ತಪ್ಪು ಹುಡುಕುವ, ಬುದ್ಧಿ ಹೇಳುವ "ಚಟ" ಇರುತ್ತದೆ. ತಾವೇ ಬಹಳ ಬುದ್ಧಿವಂತರು, ಧರ್ಮದ ಬಗ್ಗೆ ಬಹಳ ತಿಳಿದವರು ಎಂದು ಪ್ರದರ್ಶಿಸುವ ಚಪಲವು ಈ ತರಹ ಟೀಕಿಸಲು ಪ್ರಚೋದನೆ ನೀಡುತ್ತದೆ.

☐ ವಿನೋದಾ ಕೃಷ್ಣ ಮೂರ್ತಿ. ಬೆಂಗಳೂರು.

? ಒಬ್ಬರು ಲಿಂಗದೇವಾ ಎಂಬ ವಚನಾಂಕಿತ ಬದಲಾವಣೆಯನ್ನು ಸಮರ್ಥಿಸಿ ಕೊಂಡುದಲ್ಲದೆ, ಸಮಾರು 11 ವರ್ಷ ಕಾಲ ಪ್ರಾರ್ಥನೆ, ಪೂಜೆಯಲ್ಲಿ ಬಳಸಿ ಈಗ ಇದ್ದಕ್ಕಿದ್ದಂತೆ ಅದನ್ನು ಬಿಟ್ಟು ಕೂಡಲ ಸಂಗಮ ದೇವ ಎಂದು ಬಳಸಲು ಆರಂಭಿಸಿದ್ದಾರೆ. ಇದಕ್ಕೆ ನಿಮ್ಮ ಪ್ರತಿಕ್ರಿಯೆ ಏನು?

★ ಜಗನ್ಮಾತಾ ಅಕ್ಕಮಹಾದೇವಿ ಹೀಗೆ ಹೇಳುತ್ತಾರೆ :

1. ಕಳನೇರಿ ಇಳಿವುದು ವೀರಂಗೆ ಮತವಲ್ಲ
   ಶಿವಶರಣಂಗೆ ಹಿಮ್ಮೆಟ್ಟುವುದು ಪಥವಲ್ಲ. (118)
2. ಕಡೆಗೆ ಮಾಡದ ಭಕ್ತಿ, ದೃಢವಿಲ್ಲದಾಳುತನ
   ಮೃಡನೊಲಿಯ ಹೇಳಿದಡೆ ಎಂತೊಲಿವನಯ್ಯಾ ?
   ಮಾಡಲಾಗದು ಅಳಿಮನವ ಮಾಡಿದೊಡೆ ಮನದೊಡೆಯ ಬಲ್ಲನೈಸೆ ? (120)
3. ಹೇಡಿಗೆ ಸುಖವಿಲ್ಲ, ಏನು ಮಾಡಿದಡೇನಯ್ಯಾ ?
   ಕಲಿಗೆ ಭಯವಿಲ್ಲ, ಎಲ್ಲಿ ಹೋದಡೇನಯ್ಯಾ ? (117)

ಮನಸು ಒಪ್ಪದಿದ್ದು 11 ವರ್ಷ ಕಾಲ ಪ್ರಾರ್ಥನೆಯಲ್ಲಿ ಬಳಸಿದ್ದರೆ ಅದು ದೇವನಿಗೆ ಮಾಡಿದ ವಂಚನೆ, ತನಗೆ ತಾನು ಮಾಡಿ ಕೊಂಡ ಆತ್ಮ ವಂಚನೆ ಕೂಡ! ಇಲ್ಲವೇ ಜನರನ್ನು ಎದುರಿಸಲಾರದ ಪುಕ್ಕಲು ತನ ಇದ್ದಿರಲೂಬಹುದು. ಅದು ಸಹ ತಪ್ಪೆ !ಸಾಮಾನ್ಯ ಗೃಹಿಣಿ ಎಂತಹ ಬಡತನ, ಸಂಕಷ್ಟ ಬಂದರೂ ಪತಿಯಲ್ಲಿನ ನಿಷ್ಠೆ ಕಳೆದುಕೊಳ್ಳುವುದಿಲ್ಲ. ಅಂಥ ಲಿಂಗಪತಿ ನಿಷ್ಠೆ ಇಲ್ಲದೆ ಇದ್ದವರಿಗೆ ದೇವರು ಒಲಿಯನು. ಅಂತರಾತ್ಮಕ್ಕೆ ವಿರುದ್ಧವಾಗಿ ಆದರ್ಶ ವ್ಯಕ್ತಿಗಳು ಎಂದೂ ನಡೆಯಬಾರದು.

☐ ಚನ್ನಬಸಪ್ಪ ಲಿಂಗಾಯತ್, ಧಾರವಾಡ

?4 ಅನಾಥಾಶ್ರಮಗಳನ್ನು (ಕೂಡಲ ಸಂಗಮ, ಬೆಂಗಳೂರು, ಬಸವ ಕಲ್ಯಾಣ, ಧಾರವಾಡ) ತೆಗೆದಿರುವುದರಿಂದ ಅಧ್ಯಾತ್ಮಿಕ ಸಾಧನೆ ಮಾಡುವ ಮುಮುಕ್ಷುಗಳಿಗೆ ಮಾನಸಿಕ ಹಿಂಸೆಯಾಗುತ್ತದೆ.ಇದು ಒಂದು ಉಪಾಧಿ ಎಂದು ಕೆಲವು ಶರಣ-ಶರಣೆಯರ ಅಭಿಪ್ರಾಯ. ಇದಕ್ಕೆ ನೀವೇನಂತೀರಿ?

★ ಇವರಿಗೆಲ್ಲ ಮಾನವತಾವಾದಿ ಬಸವಣ್ಣನವರ ಕಳಕಳಿಯಾಗಲಿ, ತತ್ವವಾಗಲಿ ಅರ್ಥವೇ ಆಗಿಲ್ಲ ಅಂತೀನಿ. ದೀನರು-ದಲಿತರು, ನೊಂದವರು, ಶೋಷಿತರು ಇವರಿಗೆ ಆಸರೆ ನೀಡುವುದು ಧರ್ಮದ ಕರ್ತವ್ಯ. ಅದರ ಮೂಲಕವಾಗಿಯೆ ಕ್ರೈಸ್ತ ಧರ್ಮ ಬೆಳೆದಿರುವುದು."ಲಿಂಗದಲ್ಲಿ ಪೂಜೆ ಜಂಗಮದಲ್ಲಿ ಉದಾಸೀನ ! ಎಂತಯ್ಯಾ ಇವರ ಭಕ್ತರೆಂಬೆ, ಎಂತಯ್ಯಾ ಇವರ ಯುಕ್ತರೆಂದೆಂಬೆ.?" ಎಂದು ಧರ್ಮಪಿತರು ಅಂಥವರ ಸಲುವಾಗಿಯೇ ಹೇಳಿದ್ದಾರೆ.

☐ ಚಂದ್ರಕಾಂತ್ ಪಾಟೀಲ್, ಬೆಂಗಳೂರು

? ಶರಣ ಮೇಳ, ಕಲ್ಯಾಣ ಪರ್ವಗಳಲ್ಲಿ ಖ್ಯಾತ ಸಂಗೀತಗಾರರನ್ನು ಕರೆಸಿ ವಚನ ಸಂಗೀತೋತ್ಸವ ಏಕೆ ಏರ್ಪಡಿಸಬಾರದು ?

★ ವಚನ ಸಾಹಿತ್ಯವನ್ನು ಹಾಡಿ, ಆಡಿ, ನರ್ತಿಸಿ ಸಂತೋಷ ಪಟ್ಟರೆ ಸಾಲದು, ಅದನ್ನೀಗ ಆಚರಣೆಗೆ ತರುವುದು ಅನುಷ್ಠಾನ ಮಾಡುವುದು ಅತ್ಯಗತ್ಯವಿದೆ. ಶರಣ ಮೇಳ, ಕಲ್ಯಾಣ ಪರ್ವಗಳು ಕಲಿಸುವುದು ಅದನ್ನು, ಇದಕ್ಕೇ ನಮಗೆ 5ದಿನ, 3ದಿನ ಸಾಕಾಗುತ್ತಿಲ್ಲ.

ತಿರುಪತಿ ತಿಮ್ಮಪ್ಪನಿಗೆ ಗ್ರಹಣ ಬಂಧನ ?

ಒಬ್ಬ ಗರ್ಭಿಣಿ ಮಹಿಳೆ ಚಂದ್ರಗ್ರಹಣ (3-3-07ರ ರಾತ್ರಿ ಅಥವಾ 4-3-07ರ ಬೆಳಗಿನ ಜಾವ)ದ ಹಿಂದಿನ ದಿನ ಅನುಗ್ರಹ ಪಡೆದುಕೊಳ್ಳಲು ಬಂದಿದ್ದಳು. ಜ್ಯೋತಿಷಿಗಳು ಪತ್ರಿಕೆ, ಟಿ.ವಿ ಮೂಲಕ ಹೇಳಿದ್ದರಂತೆ ಗರ್ಭಿಣಿಯರು ಗ್ರಹಣದ ದಿನ ರಾತ್ರಿ ಊಟ ಮಾಡಬಾರದು ಮತ್ತು ಗ್ರಹಣ ಕಾಲದಲ್ಲಿ ನಿದ್ದೆ ಮಾಡಬಾರದು. ಅದೋ ಬೆಳಗಿನ ಜಾವ 3ರಿಂದ ಬೆಳಿಗ್ಗೆ 7ರ ತನಕ ಏನು ಮಾಡಬೇಕು.?ಎಂದು ಆಕೆಯ ಪ್ರಶ್ನೆ.

"ಜ್ಯೋತಿಷಿಗಳು ಎಷ್ಟು ಸಾಧ್ಯವೋ ಅಷ್ಟು ಹೆದರಿಸುತ್ತಾರೆ.ಗ್ರಹಣ ಒಂದು ಪ್ರಾಕೃತಿಕ ಕ್ರಿಯೆ, ನೆರಳು ಬೆಳಕಿನ ಆಟ ಮಾತ್ರ. ಏನೂ ಚಿಂತಿಸಬೇಡ, ಊಟಮಾಡು, ಸುಮ್ಮನೆ ನಿದ್ದೆ ಮಾಡು; ಅಂಜಿಕೆಯೇ ಬೇಡ," ಎಂದು ಹೇಳಿ ಕಳಿಸಿದೆ.

ಆದರೆ ಸೋಜಿಗ ತಿರುಪತಿ ತಿಮ್ಮಪ್ಪ ಗ್ರಹಣಕ್ಕೆ ಅಂಜಿ ಬಂಧಿಯೇ ಆಗಿದ್ದ. ಆಶ್ಚರ್ಯವೇ ? ಗ್ರಹಣ ಎಂದು ದೇವಾಲಯದವರು ದಿ:3-3-07ರಂದು ರಾತ್ರಿ ಇಡೀ ಗುಡಿಗೆ ಬೀಗ ಜಡಿದಿದ್ದು ತಿಮ್ಮಪ್ಪನನ್ನು ಬಂಧನದಲ್ಲಿಟ್ಟಿದ್ದರು.ಇಂಥ ತಿಮ್ಮಪ್ಪ ಭಕ್ತರ ಸಂಕಷ್ಟಗಳನ್ನು ಪರಿಹರಿಸುವುದುಂಟೆ?

ಮಾರ್ಚ್-ಏಪ್ರಿಲ್ ತಿಂಗಳಿನ ಮುಖ್ಯ ಕಾರ್ಯಕ್ರಮಗಳು

1. ಮಹಾರಾಷ್ಟ್ರದ ರಾಜ್ಯದ ಕೊಲ್ಹಾಪುರ ಜಿಲ್ಲೆಯ ಹಾತ್‌ಕಣಂಗಲೆ ತಾಲೋಕಿನ ಆಳತೆ ಗ್ರಾಮದ ಬಳಿಯ ಅಲ್ಲಮ ಪ್ರಭು ಗಿರಿಯಲ್ಲಿ 18,19,20 ರಂದು 2ನೆಯ ಲಿಂಗಾಯತ ಗಣ ಮೇಳ.

ದಿ:18-03-07 ಬೆಳಿಗ್ಗೆ 10-30ಕ್ಕೆ ಉದ್ಘಾಟನೆ
ಸಂಜೆ 5-30ಕ್ಕೆ ಚಿಂತನ ಗೋಷ್ಠಿ

ದಿ:19-03-07 ಬೆಳಿಗ್ಗೆ 10-30ಕ್ಕೆ ಅಲ್ಲಮ ಪ್ರಭು ಜಯಂತಿ, ಸಮುದಾಯ ಪ್ರಾರ್ಥನೆ,
ಜಗದ್ಗುರು ಅಲ್ಲಮ ಪ್ರಭು ಪೀಠಾರೋಹಣ.
ಸಂಜೆ 5-30ಕ್ಕೆ ಚಿಂತನಗೋಷ್ಠಿ

ದಿ:20-3-07 ಬೆಳಿಗ್ಗೆ 10-30.ಸಮಾರೋಪ ಸಮಾರಂಭ,
ಸಾಮೂಹಿಕ ಇಷ್ಟಲಿಂಗಾರ್ಚನೆ, ದಿ: 19 ಮತ್ತು 20ರ ಬೆಳಿಗ್ಗೆ 7-30ರಿಂದ ನಡೆಯುತ್ತದೆ.

2. ದಿ: 2-4-2007ರಂದು ಜಗನ್ಮಾತಾ ಅಕ್ಕಮಹಾದೇವಿಯ ಜಯಂತಿ
3. ದಿ: 20-4-07ರಂದು 874ನೆಯ ಬಸವ ಜಯಂತಿ

ಬಸವ ಕಿರಣ ಪತ್ರಿಕೆ ಹಸ್ತಾಂತರ

ಕಲ್ಯಾಣ ಕಿರಣ ಮಾಸ ಪತ್ರಿಕೆ 1970ರಲ್ಲಿ ಪ್ರಾರಂಭವಾಗಿ ಸತತವಾಗಿ ನಡೆಯುತ್ತ ಬಂದಿರುವ ಕಾರಣ ವಿಶ್ವಕಲ್ಯಾಣ ಮಿಷನ್, ಬಸವ ಧರ್ಮ ಪೀಠ, ರಾಷ್ಟ್ರೀಯ ಬಸವ ದಳಗಳ ಕಾರ್ಯವ್ಯಾಪ್ತಿಗೆ ಕಲ್ಯಾಣ ಕಿರಣವೇ ಸಾಕು ಎಂಬ ಕಾರಣದಿಂದ ಬಸವ ಕಿರಣ ಪತ್ರಿಕೆ ಹೊಣೆಗಾರಿಕೆಯನ್ನು ಬಿಟ್ಟುಕೊಡಲಾಗಿದೆ. ಆದ್ದರಿಂದ ಸಾರ್ವಜನಿಕರಿಗೆ ತಿಳಿಸುವ ಸಂಗತಿ ಏನೆಂದರೆ,

1. ಬಸವ ಕಿರಣ ಮಾಸ ಪತ್ರಿಕೆಗೆ ಸಂಬಂಧಿಸಿದಂತೆ ಬೆಂಗಳೂರು ಬಸವ ಮಂಟಪದ ವಿಳಾಸಕ್ಕೆ ಯಾರು ಪತ್ರ ವ್ಯವಹಾರ ಮಾಡಬಾರದು, ಚಂದಾ ಮುಂತಾಗಿ ಕಳಿಸಬಾರದು.
2. ರಾಷ್ಟ್ರಿಯ ಬಸವ ದಳ ಮತ್ತು ಗಣಾಚಾರ ದಳಕ್ಕೆ ಸಂಬಂಧಿಸಿದ ಲೇಖನ, ಭಾವ ಚಿತ್ರಗಳನ್ನು ಕಲ್ಯಾಣ ಕಿರಣಕ್ಕೆ ಕಳಿಸಿಕೊಡಬೇಕು.
3. ಇನ್ನು ಮುಂದೆ ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್‌ಗೂ ಬಸವ ಕಿರಣಕ್ಕೂ ವ್ಯವಹಾರಿಕ ಸಂಬಂಧವಿಲ್ಲ.

ಪೂಜ್ಯ ಮಾತೆ ಕಸ್ತೂರಿದೇವಿ
ಸಂಪಾದಕರು, ಕಲ್ಯಾಣ ಕಿರಣ,ಬಸವ ಮಂಟಪ, 2035, 20ನೇ ಮೇನ್
2ನೇ ಬ್ಲಾಕ್, ರಾಜಾಜಿ ನಗರ, ಬೆಂಗಳೂರು-560010

ವೈರಾಗ್ಯ ಯೋಗದ ಮೇಲೆ ನಿಂತ 61 ವರ್ಷದ ನಿಲವು ನೋಡಾ!

- ಶರಣ ಸಚ್ಚಿದಾನಂದ

ಕೆಲವು ದಿನಗಳ ಹಿಂದೆ ಹೀಗೆ ಬಸವ ಮಂಟಪದಲ್ಲಿ ಕಂಪ್ಯೂಟರ್ ಜೊತೆ ಕೆಲಸ ಮಾಡುತ್ತಿರುವಾಗ ಶರಣೆ ಶಾಂತಕ್ಕನವರು ಕೆಲವೊಂದು ಹಳೆಯ ಪೋಟೊಗಳನ್ನು ತಂದು ಕೊಟ್ಟರು, ಅದರಲ್ಲಿ ಮೂರು ಫೋಟೊಗಳು ನನ್ನ ಗಮನ ಸೆಳೆದವು. ಒಂದು ಕ್ಷಣ ಸರ್ವಾಂಗದಲ್ಲಿ ಕಂಪನವಾಯಿತು. ನನಗರಿವಿಲ್ಲದೆ ಕಣ್ಣಿನಿಂದ ಅಶ್ರು ಬಿಂದುಗಳು ಬರಲಾರಂಭಿಸಿದವು! ಕಾರಣ, ಆ ಭಾವ ಚಿತ್ರಗಳು 1972ನೇ ಇಸವಿಯಲ್ಲಿ ಬೆಂಗಳೂರಿನ ಬಸವ ಮಂಟಪ ಕಟ್ಟುವಾಗ ತೆಗೆದಂಥವುಗಳು. ಆ ಫೋಟೊದಲ್ಲಿ ಪೂಜ್ಯ ಮಾತಾಜಿಯವರು ತಲೆಯ ಮೇಲೆ ಸೆರಗನ್ನು ಹೊದ್ದು ಸಿಮೆಂಟಿನ ಬುಟ್ಟಿಯನ್ನು ಹೊತ್ತಿದ್ದಾರೆ. ಇನ್ನೊಂದರಲ್ಲಿ ಪೂಜ್ಯ ಗಂಗಾ ಮಾತಾಜಿಯವರು, ಬುಟ್ಟಿಯಲ್ಲಿ ಇಟ್ಟಿಗೆ ಹೊತ್ತಿದ್ದಾರೆ. ಮತ್ತೊಂದು ಫೋಟೋದಲ್ಲಿ ಪೂಜ್ಯ ಅಪ್ಪಾಜಿಯವರು ಹಾರೆಯನ್ನು ಹಿಡಿದು ಅಡಿಪಾಯಕ್ಕಾಗಿ ನೆಲ ಅಗೆಯುತ್ತಿದ್ದಾರೆ. ನಾವು ಇಂದು ಯಾವ ಕಟ್ಟಡದಲ್ಲಿ ಕುಳಿತು, ಪ್ರಾರ್ಥನೆ ಮಾಡುತ್ತಿದ್ದೇವೆಯೋ ಆ ಕಟ್ಟಡ ಸಾಮಾನ್ಯವಾದುದಲ್ಲ. ಅದರಲ್ಲಿ ಬಸವ ಧರ್ಮದ ತ್ರೈ ರತ್ನಗಳಾದ ಪೂಜ್ಯ ಅಪ್ಪಾಜಿ, ಪೂಜ್ಯ ಮಾತಾಜಿ, ಹಾಗೂ ಪೂಜ್ಯ ಗಂಗಾ ಮಾತಾಜಿಯವರ ಬೆವರಿನ ಹನಿಗಳು ಸೇರಿಕೊಂಡಿವೆ. ಅವರ ದಿವ್ಯ ಶರೀರದ ಪರಿಶ್ರಮದಿಂದ ಈ ಬಸವ ಮಂಟಪ ನಿರ್ಮಾಣವಾಗಿದೆ. ಬಸವ ಮಂಟಪ ಕಟ್ಟುವಾಗ ಮಾತಾಜಿಯವರು ಕಲ್ಲು, ಇಟ್ಟಿಗೆ ಕಾಂಕ್ರಿಟ್‌ನ್ನು ತಲೆಯ ಮೇಲೆ ಹೊತ್ತಿದ್ದಾರೆ. ಎಂದು ಅರಿತಾಗ ನನ್ನ ಶರೀರದಲ್ಲಿ ಕಂಪನವಾಯಿತು.



ಈ ಚಿತ್ರವನ್ನು ನೋಡಿದಾಗ "ಆಳಾಗ ಬಲ್ಲವನು ಆಳುವನು ಅರಸಾಗಿ। ಆಳಾಗಿ ಬಾಳಲರಿಯದವನು ಕಡೆಯಲ್ಲಿ। ಹಾಳಾಗಿ ಹೋಹ ಸರ್ವಜ್ಞ" ಎನ್ನುವ ಸರ್ವಜ್ಞನ ವಾಣಿಗೆ ಪ್ರತ್ಯಕ್ಷ ಸಾಕ್ಷಿ ಇದ್ದಂತೆ ಇದೆಯಲ್ಲವೇ?

ಅಂದು ಲಿಂಗಾಯತ ಧರ್ಮದ ಇತಿಹಾಸದಲ್ಲಿ ಮೊಟ್ಟ ಮೊದಲ ಬಸವ ಮಂಟಪ ಬೆಂಗಳೂರಿನಲ್ಲಿ ಕಟ್ಟುವಾಗ ಸ್ವತಃ ಪೂಜ್ಯ ಮಾತಾಜಿಯವರು, ಅಪ್ಪಾಜಿಯವರು, ಗಂಗಾ ಮಾತಾಜಿಯವರು ಆಳಿನಂತೆ ಕಟ್ಟಡ ಕಟ್ಟಲಿಕ್ಕೆ ಸಿಮೆಂಟು , ಇಟ್ಟಿಗೆ, ಮಣ್ಣು, ಕಲ್ಲು, ನೀರುಗಳನ್ನು ತಲೆಯ ಮೇಲೆ ಹೊತ್ತು ಕೆಲಸ ಮಾಡಿದ್ದಾರೆ. ಪಕ್ಕದಲ್ಲಿದ್ದ ಬಾಡಿಗೆ ಮನೆಯಲ್ಲಿ ಉಳಿದು ಕಟ್ಟಡ ಕಟ್ಟಲಿಕ್ಕಾಗಿ ಹಗಲೆಲ್ಲಾ ದುಡಿದು ಸಾಯಂಕಾಲ ಪ್ರವಚನ ಮಾಡಿದುದರಿಂದ ಇಂದು ನಮ್ಮಂಥ ಅಸಂಖ್ಯಾತ ಶರಣರ ಹೃದಯ ಸಿಂಹಾಸನದ ಮೇಲೆ ರಾರಾಜಿಸುವ ಅರಸಿಯಾಗಿದ್ದಾರೆ ಪೂಜ್ಯ ಮಾತಾಜಿಯವರು.

ಪೂಜ್ಯ ಮಾತಾಜಿಯವರು ತಾಯಿ ತಂದೆಯರಾದ ಶರಣೆ ಗಂಗಮ್ಮ ತಾಯಿ, ಮತ್ತು ಶರಣ ಡಾ|| ಬಸಪ್ಪನವರು, ಈ ಬಸವ ಮಂಟಪ ನಿವೇಶನದ ದಾಸೋಹಿಗಳು. ಅಗರ್ಭ ಶ್ರೀಮಂತ ಮನೆತನದವರು ಪೂಜ್ಯ ಮಾತಾಜಿಯವರು. ಅವರ ತಂದೆಯವರಾದ ಲಿಂ. ಡಾ|| ಬಸಪ್ಪನವರು ಈ ಬಸವ ಮಂಟಪದ ನಿವೇಶನದಲ್ಲಿ ನರ್ಸಿಂಗ್ ಹೋಮ್ (ಆಸ್ಪತ್ರೆ) ಕಟ್ಟಿಸಬೇಕು, ತಮ್ಮ ಮಗಳನ್ನು ವೈದ್ಯರನ್ನಾಗಿ ಮಾಡಿ ಈ ನರ್ಸಿಂಗ್ ಹೋಮ್ ಅವರಿಗೆ ವಹಿಸಿಕೊಡಬೇಕು ಎನ್ನುವ ಸಂಕಲ್ಪದಿಂದ

ಖರೀದಿಸಿದ್ದರು.

ಅವರ ಸಂಕಲ್ಪದಂತೆ ಆ ನಿವೇಶನದಲ್ಲಿ ಆಸ್ಪತ್ರೆಯಾಗಲಿಲ್ಲ, ಅವರ ಮಗಳು ವೈದ್ಯರಾಗಲಿಲ್ಲ. ಆದರೇನಂತೆ? ಅದಕ್ಕೂ ಮಿಗಿಲಾದ ಭವರೋಗ ವೈದ್ಯರಾಗಿದ್ದಾರೆ ಇಂದು ಮಾತಾಜಿಯವರು. ಜೀವನದಲ್ಲಿ ನೊಂದವರ ಬೆಂದವರ ಅನೇಕ ಜೀವಗಳನ್ನು ಉಳಿಸಿದ್ದಾರೆ, ಆತ್ಮ ಹತ್ಯೆ ಮಾಡಿಕೊಳ್ಳಬೇಕು ಎಂದು ಮನೆಯಲ್ಲಿ ವಿಷ ತಂದಿಟ್ಟು ಒಂದೇ ಒಂದು ಪ್ರವಚನ ಕೇಳಿ ಸಾಯೋಣ ಎಂದು ಬಂದವರು, ಪ್ರವಚನ ಕೇಳಿ ಹೊಸ ಮನುಷ್ಯರಾಗಿ ಪುನರ್ಜನ್ಮ ಪಡೆದಂತೆ, ಇಂದು ಅನೇಕರು, ಜೀವನದಲ್ಲಿ ಮತ್ತೆ ಎದ್ದು ನಿಂತ ಅನೇಕ ಘಟನೆಗಳಿವೆ. ಇಲ್ಲಿ ನರ್ಸಿಂಗ್ ಹೋಮ್ ಆಗುವ ಬದಲಿಗೆ, ಬಸವ ಮಂಟಪವಾಯಿತು. ವಿಶ್ವ ಕಲ್ಯಾಣ ಮಿಷನ್ ಎನ್ನುವ ಸಂಸ್ಥೆಯಾಯಿತು. ಇದರ ಮೂಲಕ ಅನೇಕ ಗ್ರಂಥಗಳು ಎನ್ನುವ ಔಷಧಿಗಳು ಜನಮನಕ್ಕೆ ದೊರೆತು, ಅಂತಃಸತ್ವವನ್ನು ಗಳಿಸಿಕೊಂಡು ಮತ್ತೆ ಲಿಂಗಾಯತ ಧರ್ಮ ತಲೆ ಎತ್ತಿ ನಿಲ್ಲಲು ಸಾಧ್ಯವಾಯಿತು.

ಪೂಜ್ಯ ಮಾತಾಜಿಯವರ ತಂದೆಯವರಾದ ಶರಣ. ಲಿಂ.ಡಾ|| ಬಸಪ್ಪನವರ ಸಂಕಲ್ಪವೂ ಹುಸಿಯಾಗಲಿಲ್ಲ ; ಅವರು ಕಲ್ಪಿಸಿ ಕೊಂಡಿರುವುದಕ್ಕಿಂತ ಹೆಚ್ಚಿನ ಜನಸೇವೆ ಬಸವ ಮಂಟಪದಿಂದ ಆಗಿದೆ ಎನ್ನುವುದರಲ್ಲಿ ಸಂದೇಹವೇನಿಲ್ಲ. ಆದರೆ ಅವರ ನಿಜ ಸಂಕಲ್ಪದಂತೆ ಬಸವ ಮಂಟಪದ ಪಕ್ಕದಲ್ಲಿಯೇ ಇಂದು ಸಿಟಿ ಆಸ್ಪತ್ರೆ ಎನ್ನುವ ಬೃಹತ್ತಾದ ಆಸ್ಪತ್ರೆಯಾಗಿರುವುದು, ಮಹಾತ್ಮರ ಸಂಕಲ್ಪಗಳು ಹುಸಿಯಾಗುವುದಿಲ್ಲ ಎನ್ನುವುದಕ್ಕೆ ಜೀವಂತ ಉದಾಹರಣೆ ಆಗಿದೆ.

ಸಚ್ಚಿದಾನಂದ ಸ್ವರೂಪವಾದ, ನಿತ್ಯ ನಿರಂಜನ ಪರಂಜ್ಯೋತಿ, ನಿತ್ಯ ನಿಜವನ್ನೊಳಕೊಂಡ, ಅರಿವಿನ ಬೆಳಗನುಟ್ಟು ನಿಂದ ನಿರಂಜನ ಜಂಗಮ ಪೂಜ್ಯ ಮಾತಾಜಿಯವರ ಹುಟ್ಟುಹಬ್ಬ ಮಾರ್ಚ 13ರಂದು ಬಂದಿದೆ. ಎನ್ನ ಅನುಭಾವ ಗಮ್ಯ, ಎನ್ನರುಹಿನ ವಿಶ್ರಾಮ ಎನ್ನ ಭಾವದ ಬಯಕೆ ಎನ್ನ ನಿಜದ ನಿಲುವಾದ ಪೂಜ್ಯ ಶ್ರೀಮನ್ ನಿರಂಜನ ಮಹಾ ಜಗದ್ಗುರು ಮಾತೆ ಮಹಾದೇವಿಯವರು, ತ್ಯಾಗಾಂಗದ ಮೇಲೆ ನಿಂದು, ಭೋಗಾಂಗದ ಮೇಲೇರಿ ಯೋಗಾಂಗದ ಮೇಲೆ ಸ್ಥಿರಗೊಂಡು , ಕೋಟಿ ಜನರ ಮುಕ್ತಿಗಾಗಿ ತಾನೆ ಆದಿ ಶಕ್ತಿಯಾಗಿದ್ದಾರೆ. ನನಗೆ ಮುಕ್ತಿ ಬೇಡ ಎಷ್ಟೇ ಜನ್ಮ ಬಂದರೂ ಬಸವ ತತ್ವ ಪ್ರಚಾರ ಮಾಡುವೆ ಎನ್ನುವ ಸಂಕಲ್ಪಧಾರಿಯಾಗಿದ್ದಾರೆ. " ಭವ ಭವದಲ್ಲಿ ಭಕ್ತನಾದರೆ ಭವವೇ ಲೇಸು ಕಂಡಯ್ಯಾ; ಎಂದೆಂದಿಗೂ ನಾನಿದನೆ ಬಯಸುವೆ ತಂದೆ ಕರುಣಿಸಯ್ಯಾ ಲಿಂಗದೇವಾ" ಎನ್ನುವ ಗುರು ಬಸವಣ್ಣನವರ ವಾಣಿಯ ಪ್ರತ್ಯಕ್ಷ ರೂಪವಾಗಿ ನಮ್ಮೆಲ್ಲರ ಮುಂದೆ ಇದ್ದಾರೆ ಪೂಜ್ಯ ಮಾತಾಜಿಯವರು.

ಪೂಜ್ಯರ ಈ 61 ವರ್ಷಗಳ ಜೀವನದಲ್ಲಿ 41ವರ್ಷಗಳು ಧರ್ಮಕ್ಕಾಗಿ ಸವೆದಿವೆ. ತಮ್ಮ 19ನೆಯ ವಯಸ್ಸಿನಲ್ಲಿಯೇ ಜಂಗಮ ದೀಕ್ಷೆ ಪಡೆದ ಮಾತಾಜಿಯವರ ಒಂದೊಂದು ಸಾಧನೆಯೂ ಲಿಂಗಾಯತ ಧರ್ಮದ ಪುನರುತ್ಥಾನದಲ್ಲಿ ಮೈಲಿಗಲ್ಲಾಗಿ ನಿಲ್ಲುತ್ತದೆ. ಅವರು ಬರೆದ ಒಂದೊಂದು ಗ್ರಂಥವು ಲಿಂಗಾಯತ ಧರ್ಮ ಎನ್ನುವ ಕಟ್ಟಡ ಎದ್ದು ನಿಲ್ಲಲಿಕ್ಕೆ ಅಡಿಪಾಯಗಳಾಗಿವೆ.

ಪೂಜ್ಯ ಮಾತಾಜಿಯವರ ಪ್ರವಚನವೇ ಏಕೆ ಪ್ರಭಾವ ಶಾಲಿ ಇರುತ್ತೇ? ಇವರೇ ಏಕೆ ಕೂಡಲ ಸಂಗಮ, ಬಸವ ಕಲ್ಯಾಣ, ಅಲ್ಲಮ ಗಿರಿ, ದೆಹಲಿಯಲ್ಲಿ ಬಸವ ಮಂಟಪ, ಇಂಥ ಲಿಂಗಾಯತ ಧರ್ಮದ ಅಭಿವೃದ್ಧಿ ಪರ ಕಾರ್ಯಗಳನ್ನು ಮಾಡಬೇಕು. ಎಂದು ಯೋಚನೆ ಗೈದಾಗ ಅಕ್ಕಮಹದೇವಿ ತಾಯಿಯವರ ವಚನವೇ ಇದಕ್ಕೆ ಉತರ ಕೊಟ್ಟಿತು.

"ನಡೆಯದೆ ನುಡಿಗಡಣ ಮಾಡದ ಕಲಿತನ, ಚಿತ್ರದ ಸತಿಯ
ಶೃಂಗಾರ ವದೇತಕ್ಕೆ ಪ್ರಯೋಜನ?" ಎನ್ನುತ್ತಾರೆ.

ನುಡಿದಂತೆ ನಡೆಯದವರ ನುಡಿಯಿಂದ ಯಾವುದೇ ಪರಿಣಾಮ ಪ್ರಭಾವ ಬದಲಾವಣೆಗಳು ಈ ಸಮಾಜದಲ್ಲಿ ಆಗಲು ಸಾಧ್ಯವೇ ಇಲ್ಲ. 800ವರ್ಷಗಳ ಅವಧಿಯಲ್ಲಿ ಸಾವಿರ ಸಾವಿರ ಮಠಾಧೀಶರು ಆಗಿ ಹೋದರೂ ಯಾರು ಮಾಡದ ಕಾರ್ಯ ಪೂಜ್ಯ ಅಪ್ಪಾಜಿ, ಪೂಜ್ಯ ಮಾತಾಜಿಯವರು ಮಾಡಿದ್ದಾರೆ. ಕಾರಣ ಇವರದು ನುಡಿದಂತೆ ನಡೆ, ನಡೆದಂತೆ ನುಡಿ.

ಪೂಜ್ಯ ಮಾತಾಜಿಯವರು ಸಾಮಾನ್ಯರಲ್ಲ, ಅವರು ಮಹಾತ್ಮರು. ಅವರನ್ನು ಮಹಾತ್ಮ ಬುದ್ಧರೊಂದಿಗೆ ಹೋಲಿಸಬಹುದು. ಬುದ್ಧ, ರಾಜಕುಮಾರ ಸಿದ್ಧಾರ್ಥನಾಗಿದ್ದಾಗ ಕೇವಲ, ಒಬ್ಬನೇ ರೋಗಿ, ಒಬ್ಬನೇ ಮುದುಕ, ಒಂದೇ ಶವವನ್ನು ನೋಡಿದ. ಜೀವನ ನಶ್ವರವೆಂದು ತಿಳಿದು, ಸತ್ಯದ ಮಾರ್ಗ ಕಂಡುಕೊಳ್ಳಲಿಕ್ಕೆ ಅರಮನೆಯನ್ನು ತೊರೆದ. ತಪಸ್ಸು ಮಾಡಿ ಪರಮಾತ್ಮನ ಸಾಕ್ಷಾತ್ಕಾರ ಪಡೆದು ಬುದ್ಧನಾದ. ನಾವು ದಿನ ನಿತ್ಯವೂ ನೂರಾರು ರೋಗಿಗಳನ್ನು ಸಾವಿರಾರು ಮುದುಕರನ್ನು ಹಲವಾರು ಶವಗಳನ್ನು ನೋಡಿದರೂ, ಸಂಸ್ಕಾರಕ್ಕೆ ಅಂಟಿಕೊಂಡೇ ಇದ್ದೇವೆ. ನಮ್ಮಲ್ಲಿ ವೈರಾಗ್ಯ ಬರುತ್ತಿಲ್ಲ. ಅದೇ ರೀತಿ ಪೂಜ್ಯ ಮಾತಾಜಿಯವರು ಪೂಜ್ಯ ಲಿಂಗಾನಂದ ಅಪ್ಪಾಜಿಯವರ ಒಂದೇ ಒಂದು ಪ್ರವಚನ ಕೇಳಿ ಪರಿವರ್ತಿತರಾಗಿ ಇಂಥ ಅಮೂಲ್ಯ ಧರ್ಮವನ್ನು ಒಂದೇ ಪ್ರವಚನದಿಂದ ಅರ್ಥ ಮಾಡಿಕೊಂಡು ತಮ್ಮ ಜೀವನವನ್ನು ಬಸವ ತತ್ವಕ್ಕಾಗಿ ಮುಡುಪಾಗಿಟ್ಟರು. ಪೂಜ್ಯ ಮಾತಾಜಿಯವರು ಯಾವ ರಾಜಕುಮಾರಿಗಿಂತಲೂ ಕಡಿಮೆ ಇರಲಿಲ್ಲ, ಅಗರ್ಭ ಶ್ರೀಮಂತ ಮನೆತನದವರು, ನೂರಾರು ಎಕರೆ ತೋಟ,ಗದ್ದೆ, ಅವರೇ ಹೇಳುವಂತೆ, ಅವರು ಕಾಲೇಜು ಓದುವಾಗ ಅವರ ಮೈಮೇಲೆ 35 ತೊಲಕ್ಕಿಂತ ಹೆಚ್ಚು ಬಂಗಾರವಿತ್ತಂತೆ, ಪ್ರವಚನ ಕೇಳಿದ ನಂತರ ಸರಳ ಜೀವನಕ್ಕೆ ಒಲಿದು, ಇಂದು ನಮ್ಮೆಲ್ಲರ ಗುರು, ಬಸವ ಧರ್ಮ ಪೀಠದ ಮಹಾ ಜಗದ್ಗುರುವಾಗಿದ್ದಾರೆ. ಮಾತಾಜಿಯವರಿಗಿಂತ ಮೊದಲು ಅನೇಕರು ಅನೇಕ ಸಲ ಅಪ್ಪಾಜಿಯವರ ಪ್ರವಚನ ಕೇಳಿದರೂ ಅವರಲ್ಲಿ ವೈರಾಗ್ಯ ಬರಲಿಲ್ಲ. ನಾವು ಇಂದು ಮಾತಾಜಿಯವರ ನೂರಾರು ಪ್ರವಚನ ಕೇಳಿದ ಮೇಲೂ, ನಮ್ಮಲ್ಲಿ ಇನ್ನು ಅವರಷ್ಟೆ ಕಳಕಳಿ ತ್ಯಾಗ ಮನೋಭಾವನೆ ಬರುತ್ತಿಲ್ಲ! ಇದೇ ಮಹಾತ್ಮರಿಗೂ ಸಾಮಾನ್ಯರಿಗೂ ಇರುವ ವ್ಯತ್ಯಾಸ.

ಈ ನಿಸರ್ಗದಲ್ಲಿ ಲಿಂಗದೇವನ ರಾಜ ತೇಜದಲ್ಲಿ ಒಂದು ನಿಯಮವಿದೆ. ಈ ಲೋಕದ ಉದ್ಧಾರಕ್ಕಾಗಿ ಮಹಾತ್ಮರು ಲಿಂಗದೇವನ ವಿಶೇಷ ಕಾರುಣ್ಯವನ್ನು ಹೊತ್ತು ಪೂರ್ಣಾವತಾರಿಗಳಾಗಿ ಮರ್ತ್ಯಲೋಕದಲ್ಲಿ ಹುಟ್ಟುತ್ತಾರೆ. ಆ ಮಹಾತ್ಮರು ಬಂದ ಮಣಿಹವನ್ನು ಪೂರೈಸಲು ಇನ್ನು ಅನೇಕರು ಅಂಶಾವತಾರಿಗಳಾಗಿ ಹುಟ್ಟಿ ಬರುತ್ತಾರೆ. 12ನೆಯ ಶತಮಾನದಲ್ಲಿ ಗುರು ಬಸವಣ್ಣನವರು ದೇವನ ಕರುಣೆಯನ್ನು ಧರಿಸಿಕೊಂಡು ಪೂರ್ಣಾವತಾರಿಗಳಾಗಿ ಇಳೆಗೆ ಬಂದರು. ಅವರು ಬಂದ ಬಳ್ಳಲಿಕೆಯ ಕಳೆಯಲು ಚನ್ನಬಸವಣ್ಣನವರು, ಅಲ್ಲಮ ಪ್ರಭುದೇವರು, ಅಕ್ಕಮಹಾದೇವಿ, ಮಡಿವಾಳ ಮಾಚಿದೇವರು ಬಂದು ಗುರು ಬಸವಣ್ಣನವರು ಕೈಗೊಂಡ ಕಾರ್ಯದಲ್ಲಿ ಹೆಗಲುಕೊಟ್ಟು ಆ ಕಾರ್ಯವನ್ನು ಯಶಸ್ವಿಯಾಗಿ ನೆರವೇರಿಸಿದ್ದನ್ನು ಕಾಣುತ್ತೇವೆ.

ಅದೇ ರೀತಿ ಪೂಜ್ಯ ಅಪ್ಪಾಜಿಯವರು ಗುರು ಬಸವಣ್ಣನವರಿಂದ ಅನುಗ್ರಹಗೊಂಡು, ಬಸವ ತತ್ವದ, ಲಿಂಗಾಯತ ಧರ್ಮದ ಪುನರುತ್ಥಾನ ಕಾರ್ಯ ಕೈಗೊಂಡಾಗ ಅಕ್ಕಮಹಾದೇವಿ ತಾಯಿಯವರ ಅನುಗ್ರಹ ಪಡೆದು ಪೂಜ್ಯ ಮಾತಾಜಿಯವರು, ಅಪ್ಪಾಜಿಯವರು ಬಂದ ಕಾರ್ಯಕ್ಕೆ ನೆರವಾದರು. ಅವರ ಬಳಲಿಕೆಯನ್ನು ತೊಡೆದು ಹಾಕಿದರು. ಇದನ್ನು ನೋಡಿದಾಗ ಅಪ್ಪಾಜಿಯವರು ಅವತಾರಿಯಾಗಿ ಬಂದು ಕಾರ್ಯ ಮಾಡುತ್ತಿರುವಾಗ ಅಂಶಾವತಾರಿಗಳಾಗಿ ಪೂಜ್ಯ ಮಾತಾಜಿ, ಪೂಜ್ಯ ಗಂಗಾ ಮಾತಾಜಿ ಹಾಗೂ ಇನ್ನುಳಿದ ಅನೇಕ ಜಂಗಮರು ಬಂದು ಈ ಕಾರ್ಯದಲ್ಲಿ ಕೈಗೂಡಿಸಿರುವುದನ್ನು ನೋಡಿದಾಗ ಪೂಜ್ಯ ಮಾತಾಜಿಯವರು ಖಂಡಿತವಾಗಿಯೂ ಆದಿ ಶರಣರ ಸಂಕಲ್ಪದಂತೆಯೇ ಕಾರ್ಯ ನಿರ್ವಹಿಸುತ್ತಿದ್ದಾರೆ ಎನ್ನುವುದರಲ್ಲಿ ಸಂಶಯವೇ ಇಲ್ಲ.

ಪೋಲಿಯೋ ಒಂದು ಭಯಾನಕ ರೋಗ. ಅದನ್ನು ಮನುಕುಲದಿಂದ ಹೊಡೆದೋಡಿಸಲು ಜಾನ್.ಇ.ಸಾಲ್ಕ್ ಎನ್ನುವ ವಿಜ್ಞಾನಿ ಲಸಿಕೆಯನ್ನು ಕಂಡು ಹಿಡಿದ. ಕೇವಲ ಆ ವಿಜ್ಞಾನಿ ಲಸಿಕೆಯನ್ನು ಕಂಡು ಹಿಡಿದ ಮಾತ್ರಕ್ಕೆ ಪೋಲಿಯೋ ರೋಗ ನಿವಾರಣೆಯಾಗಲು ಸಾಧ್ಯವಿದೆಯೇ? ಇಲ್ಲ. ಮೊನ್ನೆ ಫೆಬ್ರವರಿ 11ರಂದು ಲಕ್ಷ ಲಕ್ಷ ವೈದ್ಯಕೀಯ ಕಾರ್ಯಕರ್ತರು ರೈಲ್ವೇ ನಿಲ್ದಾಣ, ಬಸ್ ನಿಲ್ದಾಣ ಪ್ರತಿಯೊಂದು ಓಣಿ ಓಣಿಯಲ್ಲೂ ಒಂದು ಶಿಬಿರ ಮಾಡಿಕೊಂಡು ಎಲ್ಲಾ ಮಕ್ಕಳಿಗೂ ಪೋಲಿಯೋ ಲಸಿಕೆಯನ್ನು ಹಾಕಿದರು. ಸರಕಾರ ಇದಕ್ಕಾಗಿ ಲಕ್ಷ ಲಕ್ಷ ರೂಪಾಯಿ ಖರ್ಚು ಮಾಡಿ ವರ್ಷದಲ್ಲಿ ಎರಡು-ಮೂರು ಬಾರಿ ಎಲ್ಲಾ ಮಾಧ್ಯಮಗಳಲ್ಲಿ ಪ್ರಚಾರ ಮಾಡುವ ಮುಖಾಂತರ ನಡೆಸುತ್ತದೆ. ಇದರಿಂದ

ಮನುಕುಲದಲ್ಲಿ ಈ ರೋಗ ನಿವಾರಣೆಯಾಗುತ್ತಿದೆ.

ಅದೇ ರೀತಿ ನಮ್ಮ ಗುರು ಮಾತಾಜಿಯವರೆನ್ನುವ ವಿಜ್ಞಾನಿ ನಮ್ಮ ಪರಮ ಗುರು ಬಸವಣ್ಣನವರೆಂಬ ಮಹಾವಿಜ್ಞಾನಿ ಕೊಟ್ಟ ವಚನ ಸಾಹಿತ್ಯ ಎನ್ನುವ ಸೂತ್ರ ಬಳಸಿ ಲಿಂಗಾಯತ ಧರ್ಮ ಎನ್ನುವ ಲಸಿಕೆ ಕಂಡು ಹಿಡಿದರು. ಮನುಕುಲದ ಮನಸಿಗೆ ಅಂಟಿರುವ ಜಾತೀಯತೆ, ಮೂಢ ನಂಬಿಕೆ, ದ್ವೇಷ, ಅಸೂಯೆಗಳೆಂಬ ರೋಗಗಳು ಲಿಂಗಾಯತ ಧರ್ಮ ಎನ್ನುವ ಲಸಿಕೆ ಹಾಕುವುದರ ಮೂಲಕ ನಿವಾರಣೆಯಾಗುತ್ತವೆ. ಇದಕ್ಕಾಗಿ ಪೂಜ್ಯ ಮಾತಾಜಿಯವರೊಬ್ಬರೆ ದುಡಿದರೆ ಸಾಲದು, ನಾವು ಬಸವ ಭಕ್ತರು ಸಾವಿರ ಸಾವಿರ, ಲಕ್ಷ ಲಕ್ಷ ಸಂಖ್ಯೆಯಲ್ಲಿ ಧರ್ಮ ಪ್ರಚಾರಕ್ಕಾಗಿ ಮುಂದೆ ಬರಬೇಕು, ಪ್ರತಿಯೊಂದು ಮನೆ ಮನೆಯಲ್ಲಿರುವ ಮನಗಳಿಗೂ ಈ ಧರ್ಮದ ಲಸಿಕೆಯನ್ನು ನಾವು ಹಾಕಬೇಕು. ಅಂದಾಗ ಮಾತ್ರಮನುಕುಲದ ಈ ಮಾನಸಿಕ ರೋಗ ಹೋಗಿ ಈ ಭೂಮಿಯ ಮೇಲೆ ಶಾಂತಿ ನೆಮ್ಮದಿಗಳು ನೆಲೆಸಲು ಸಾಧ್ಯವಾಗುತ್ತದೆ. ಅದಕ್ಕಾಗಿ ಬನ್ನಿ ಧರ್ಮ ಬಾಂಧವರೆ ತತ್ವಕ್ಕಾಗಿ ನಾವು ಕೂಡ ದುಡಿಯೋಣ. ಕರ್ತಾರನ ಕಮ್ಮಟವಾದ ಈ ಮರ್ತ್ಯಲೋಕವನ್ನು ಸುಂದರಗೊಳಿಸೋಣ.

ತಮ್ಮ ಜೀವನದ ಸಾರ್ಥಕವಾದ 61 ವರ್ಷಗಳನ್ನು ಪೂರೈಸಿ 62ನೇ ವರ್ಷಕ್ಕೆ ಕಾಲಿಡುತ್ತಿರುವ ಮಾತಾಜಿಯವರು ನೊಂದವರ ನಂದಾದೀಪ, ಬಡವರ ಬಂಧು, ಶೋಷಿತರ ಸಂಜೀವಿನಿ, ಸ್ತ್ರೀಕುಲದ ಭಾಗ್ಯದೇವತೆ, ಆಳವಾದ ಅಧ್ಯಯನ ಮಾಡಿದ ವಿದ್ವಾಂಸರು ಮತ್ತು ವಿದ್ವಜ್ಜನ ಪ್ರಶಂಸಿತರು, ಅಪೂರ್ವ ವಾಗ್ಮಿಗಳು, ಕ್ರಾಂತಿಕಾರಿ ಬರವಣಿಗೆಯುಳ್ಳ ಲೇಖಕಿ, ನಡೆವ ಗ್ರಂಥಾಲಯ, ನುಡಿವ ಬಸವ ಪ್ರಕಾಶ, ಶಾರೀರಿಕ ತಪ, ವಾಙ್ಮಯ ತಪ ಮತ್ತು ಮಾನಸಿಕ ತಪವೆಂಬ ಮೂರು ಬಗೆಯ ತಪಗೈದ ಉನ್ನತ ತಪಸ್ವಿಗಳು. ಸಾಹಿತ್ಯ ಗಂಗೋತ್ರಿ, ವಚನ ಸಾಹಿತ್ಯ ವಿಶಾರದೆ, ಧರ್ಮ ಕ್ರಾಂತಿಯ ದಿವ್ಯ ಜ್ಯೋತಿ, ಅಭಿನವ ಅಕ್ಕಮಹಾದೇವಿ, ಪ್ರಥಮ ಮಹಿಳಾ ಜಗದ್ಗುರು ಬಂಗಾರ ಕಿರೀಟ ಬಯಸದ ಜನಪ್ರಿಯತೆಯ ಕಿರೀಟ ಧಾರಿಣಿ, ಚಿನ್ಮೂಲಾದ್ರಿ ಚಿತ್ಕಳೆ, ಎಲ್ಲಕ್ಕೂ ಮಿಗಿಲಾಗಿ ಲಿಂಗಾಯತ ಧರ್ಮ ಪುನರುತ್ಥಾರಕರು ಮತ್ತು ವಿಶ್ವಧರ್ಮ ಪ್ರವಚನಕಾರರ ನಿರ್ಮಾಪಕರು.

ಪೂಜ್ಯ ಮಾತಾಜಿಯವರು ಉರಿಯುತ್ತಿರುವ ಜ್ಯೋತಿಯ ಹಾಗೆ ಜ್ಞಾನದ ಬೆಳಕನ್ನು ನೀಡುತ್ತಿದ್ದಾರೆ. ಜ್ಯೋತಿ ಹೆಚ್ಚು ಕಾಲ ಉರಿಯಬೇಕಾದರೆ, ಎಣ್ಣೆ ಹಾಕುವವರು ಬೇಕು. ಅದೇ ರೀತಿ ಮಾತಾಜಿಯವರು ಹೆಚ್ಚು ಕಾಲ ಈ ಜಗತ್ತಿಗೆ ಜ್ಞಾನದ ಬೆಳಕನ್ನು ನೀಡ ಬೇಕಾದರೆ ಅವರು ಕೈಗೊಂಡ ಕಾರ್ಯಗಳಿಗೆ ನಾವು ಪ್ರೋತ್ಸಾಹ ನೀಡಬೇಕು. ನಮ್ಮ ತನು-ಮನ-ಧನಗಳಿಂದ ಸಹಾಯ ಸಹಕಾರ ನೀಡಿ ಅವರು ಹಾಕಿಕೊಂಡ ಯೋಜನೆಗಳು ಯಶಸ್ವಿಯಾಗುವಂತೆ ಮಾಡೋಣ.

61 ವರ್ಷ ಪೂರೈಸಿ 62ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿರುವ ಪೂಜ್ಯ ಮಾತಾಜಿಯವರಿಗೆ ಪರಮ ಪ್ರಭು ಲಿಂಗದೇವರು ಹಾಗು ಗುರುಬಸವಣ್ಣನವರು ಆರೋಗ್ಯಯುತ ದೀರ್ಘವಾದ ಆಯುಷ್ಯವನ್ನು ನೀಡಿ ನಮ್ಮೆಲ್ಲರನ್ನು ಬಹು ಕಾಲದವರೆಗೆ ಅನುಗ್ರಹಿಸುತ್ತ ಮುನ್ನಡೆಸುವಂತಾಗಲಿ ಎಂದು ಗುರು ಬಸವಣ್ಣನವರಲ್ಲಿ ಪ್ರಾರ್ಥಿಸೋಣ.

ಶರಣ ಮೇಳದಲ್ಲಿ ಶರಣರ ವಾಣಿಗಳು

1. ಕೋಟಿ ಹಣ ಕೊಟ್ಟರೂ ಸಿಗಲಾರದಂಥ ಸಾಹಿತ್ಯವನ್ನು ತಮ್ಮ ಪ್ರಾಣ ತ್ಯಾಗ ಮಾಡಿ ಉಳಿಸಿದರು. ಗುರು ಬಸವಣ್ಣನವರ ತತ್ವ, ವಚನ ಸಾಹಿತ್ಯ ಉಳಿಯದಿದ್ದರೆ ನಮ್ಮಂಥ ಪರಿಶಿಷ್ಟರು ಅಧಿಕಾರಕ್ಕೆ ಬರಲು ಸಾಧ್ಯವಾಗುತ್ತಿರಲಿಲ್ಲ. ಗುರು ಬಸವಣ್ಣನವರು ಹುಟ್ಟದೇ ಇದ್ದಿದ್ದರೆ ಮಾರ್ಕ್ ಲೆನಿನ್, ಗಾಂಧೀಜಿಯವರಂಥ ವಿಚಾರವಾದಿಗಳು ಹುಟ್ಟುತ್ತಿರಲಿಲ್ಲ.

- ಆಲ್ಕೋಡು ಹನುಮಂತಪ್ಪ.

2. ನಾನು ಬಟ್ಟೆಯಿಂದ ಹಾವು ಮಾಡುವುದು, ನಾಲಿಗೆಯ ಮೇಲೆ ಕರ್ಪೂರ ಉರಿಸುವುದು, ಏನೂ ಇಲ್ಲದೆ ಭಸ್ಮ ತೆಗೆದು ಕೊಡುವುದು, ಮಾಡುವುದು ಪವಾಡವಲ್ಲ; ಲಕ್ಷ ಲಕ್ಷ ಶರಣರ ತಲೆಯಲ್ಲಿ ಜ್ಞಾನ ಜ್ಯೋತಿ ಉರಿಯುವಂತೆ; ಶರಣ ಮೇಳ ನಡೆಸುತ್ತಿರುವುದು ಮಾತಾಜಿಯವರು ಮಾಡುತ್ತಿರುವುದು ನಿಜವಾದ ಪವಾಡ

- ಹುಲಿಕಲ್ ನಟರಾಜ


ದಣಿವರಿಯದ ದಾಸೋಹಿ ಶರಣೆ. ಡಾ|| ಎ.ಸುಶೀಲಮ್ಮ

-ಮಾತಾಜಿ


ಮುಪ್ಪಿನಿಂದ ಶರೀರ ದುರ್ಬಲಗೊಂಡಿದ್ದರೂ ಬಸವ ಭಕ್ತಿ ಮತ್ತು ಅದರ ಪ್ರಚಾರದಲ್ಲಿ ದಣಿವಿಲ್ಲದ ಉತ್ಸಾಹ ಡಾ| ಸುಶೀಲಮ್ಮನವರದು. ಬೆಂಗಳೂರಿನ ಶೇಷಾದ್ರಿಪುರಂ ಬಡಾವಣೆಯ ನೆಹರೂ ಪಾರ್ಕಿನಲ್ಲಿ ಪೂಜ್ಯ ಲಿಂಗಾನಂದ ಅಪ್ಪಾಜಿಯವರ ಪ್ರವಚನವು 1973-1974ರಲ್ಲಿ ನಡೆದಾಗ ಕಾರಿನಲ್ಲಿ ಹೋಗುತ್ತಿದ್ದ ಡಾ||ಲಲಿತ ಗುರುಬಸವಯ್ಯ ಮತ್ತು ಅವರ ಅಕ್ಕ ಚನ್ನಮ್ಮನವರ ಪುತ್ರಿ ಡಾ|| ಸುಶೀಲಮ್ಮ ಆಕಸ್ಮಿಕವಾಗಿ ಪ್ರವಚನ ಕೇಳಿ, ಒಳಗೆ ಬಂದು ಬಹಳ ಹತ್ತಿರದವರಾದರು. ಉತ್ತಮ ವೈದ್ಯರಾಗಿ ಸರ್ಕಾರಿ ಆಸ್ಪತ್ರೆಯಲ್ಲಿ ಸೇವೆ ಗೈಯುತ್ತ ಬಡವರ ಬಂಧು ಎಂದು ಕೀರ್ತಿ ಪಡೆದರು. ಅವರ ತಂದೆ ಲಿಂ|| ಗುರು ಬಸವಯ್ಯನವರು ಸ್ವಾತಂತ್ರ ಹೋರಾಟಗಾರರು, ಗಾಂಧಿವಾದಿ. ಅವರು ಬಸವ ಪಥಿಕರಾಗಿ ತಮ್ಮ ಮಕ್ಕಳಲ್ಲಿ ಆದರ್ಶ ಗುಣಗಳನ್ನು ಬೆಳೆಸಿದ್ದರು. ಹಿರಿಯ ಮಗಳು ರತ್ನಮ್ಮ ಮತ್ತು ಚನ್ನಮ್ಮ ಗಾನ ಕೋಕಿಲೆ ಎಂಬ ಬಿರುದು ಪಡೆದ ಗಾನ ವಿಶಾರದರು. ಅವರ ಇಬ್ಬರು ಮಕ್ಕಳು ವಿಶಾಲಾಕ್ಷಿ ಮತ್ತು ಸುಶೀಲಮ್ಮ. ವಿಶಾಲಾಕ್ಷಿ ಅವರನ್ನು ಬನವಾಸಿಯವರಾದ ಶರಣ ಅಭಿಶಂಕರ್ ಅವರಿಗೆ ಮದುವೆ ಮಾಡಿಕೊಡಲಾಗಿತ್ತು..

ಶರಣ ಅಭಿಶಂಕರ್ ಅವರು ನಾಡಿನ ಹಿರಿಯ ವಿದ್ವಾಂಸರು ಕರ್ನಾಟಕ ಗೆಜೆಟಿಯರ್ ಕ್ಷೇತ್ರಕ್ಕೆ ಅವರ ಕೊಡುಗೆ ಅಪಾರ ಮಾತ್ರವಲ್ಲ ಬನವಾಸಿಯವರೇ ಆದ ಲಿಂ. ಶರಣ ಹರ್ಡೇಕರ್ ಮಂಜಪ್ಪನವರ ಬಗ್ಗೆ ವಿಶೇಷ ಅಧ್ಯಯನ ಮಾಡಿದ್ದರು. ವಿಶಾಲಾಕ್ಷಿಯವರು ಬೋರಿಂಗ್ ಆಸ್ಪತ್ರೆಯಲ್ಲಿ ಮೇಲ್ವಿಚಾರಣಾ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದರು. ಇವರೆಲ್ಲರ ಮಧ್ಯ ಒಬ್ಬಳೇ ಮಗಳು ಉಷಾ. ಡಾ|| ಲಲಿತಾ ಗುರುಬಸವಯ್ಯನವರು ತರಗಿಣಿ ಪುಸ್ತಕ ಪ್ರಕಟಿಸಲು ಹಣದ ತೊಂದರೆ. ಎಂದಾಗ ತತ್‌ಕ್ಷಣ ಮುಂದೆ ಬಂದರು ಡಾ|| ಸುಶೀಲಮ್ಮ ಪುಸ್ತಕ ಪ್ರಕಟಣೆಗೆ ನೆರವು ನೀಡಿದರು. ಬೆಂಗಳೂರು ಬಸವ ಮಂಟಪ ನಿರ್ಮಾಣ, ಕಲ್ಯಾಣ ಕ್ರಾಂತಿ ಪುಸ್ತಕ ಪ್ರಕಟಣೆ, ಹೀಗೆ ಇಬ್ಬರು ನೆರವು ಉದಾರವಾಗಿ ಹರಿದು ಪ್ರೋತ್ಸಾಹಿಸುತ್ತಿತ್ತು. ಪೂಜ್ಯ ಗುರುಗಳು ಮತ್ತು ನನ್ನ ಪ್ರವಚನಗಳು ಯಾವ ಊರುಗಳಲ್ಲೇ ಇರಲಿ ಅಲ್ಲಿಗೆಲ್ಲ ಬಂದು ತಾವು ಕೊಟ್ಟು ಜನರಿಗೂ ಕಾಣಿಕೆ ಕೊಡಲು ಪ್ರೇರೇಪಿಸುತ್ತಿದ್ದರು. ನಮ್ಮ ಅವರ ಭಕ್ತಿ ಸಂಬಂಧ ಬಹಳ ಗಾಢವಾಗಿತ್ತು.


ಕೆಲವು ಸ್ವಾರ್ಥಿ ಜನರ ಚಾಡಿಗಳಿಂದ ಮನಸನ್ನು ವಿಚಲಿತ ಗೊಳಿಸಿಕೊಂಡ ಅವರು ನಮ್ಮಿಂದ ದೂರವಾದರು. ನಮ್ಮ ಧಾರ್ಮಿಕ ಅಭಿಮಾನಿಗಳ ವಲಯ ವಿಸ್ತಾರವಾಗುವ ಕಾಲದಲ್ಲೇ ದೂರ ಉಳಿದರು. ಮತ್ತೆ ಬಸವ ಮಂಟಪಕ್ಕೆ, ಸಂಗಮಕ್ಕೆ,ಕಲ್ಯಾಣಕ್ಕೆ ಬಂದರು. ದೂರ ಉಳಿದಿದ್ದಕ್ಕೆ ಪರಿತಾಪ ಪಟ್ಟರು. ಬಂದು ನೋಡಿ, ಆದ ಪ್ರಗತಿ ಕಂಡು ಸಂತೋಷ ಪಟ್ಟರು. ಆದರೆ, ಅಕ್ಕಯ್ಯ ಅಂದರೆ ಡಾ|| ಲಲಿತಾ ಗುರುಬಸವಯ್ಯ ಅವರು ಇದನ್ನೆಲ್ಲ ನೋಡಲಿಲ್ಲವಲ್ಲ ಎಂದರು ಡಾ|| ಸುಶೀಲಮ್ಮ ತುಂಬಾ ವ್ಯಥೆ ಪಟ್ಟರು. ಮಗಳು ಶರಣೆ ಉಷಾಳನ್ನು ಕಲ್ಯಾಣಕ್ಕೆ ಕರೆತಂದಿದ್ದರು. ಪುನಃ ದಾಸೋಹ ನಿಧಿಗೆ, ಕಲ್ಯಾಣ ಪರ್ವದ ನಿಧಿಗೆ ಗುರು ಬಸವಣ್ಣನವರ ಪುತ್ಥಳಿಗೆ ಉದಾರ ದೇಣಿಗೆ ನೀಡಿದ್ದಾರೆ, ನೀಡುತ್ತಲಿದ್ದಾರೆ. ಅವರ ಮನಸ್ಸು , ಕೈ ಅಕ್ಷಯ ಪಾತ್ರೆ. ಶರಣೆ ವಿಶಾಲಾಕ್ಷಿ ಮತ್ತು ಶರಣೆ. ಸುಶೀಲಮ್ಮ ಇಬ್ಬರೂ ವೃದ್ಧಾಪ್ಯದಲ್ಲಿದ್ದು ಮಗಳು ಡಾ|| ಉಷಾ ಮತ್ತು ಅಳಿಯ ಶರಣ. ಡಾ|| ಮಹೇಶ ಕಾಗಲಿ ಅವರ ಮೇಲಾರೈಕೆಯಲ್ಲಿ ನೆಮ್ಮದಿಯಿಂದ ಇದ್ದು ಪೂನಾದಲ್ಲೇ ನೆಲೆಸಿದ್ದಾರೆ. ಅವರಿಗೆ ಉತ್ತಮ ಆರೋಗ್ಯ ಭಾಗ್ಯವನ್ನು, ಉಷಾ ಮಹೇಶ್ ಕಾಗಲಿ ಅವರ ಸಮಸ್ತ ಕುಟುಂಬ ಪರಿವಾರಕ್ಕೆ ಆಯುಷ್ಯ, ಆರೋಗ್ಯ, ಭಾಗ್ಯವನ್ನು ವಿಶ್ವಗುರು ಬಸವಣ್ಣನವರು ದಯಪಾಲಿಸಲೆಂದು ಡಾ|| ಉಷಾ ಮತ್ತು ಮಹೇಶ್ ಅವರು ಈ ಎಲ್ಲ ಹಿರಿಯ ಶರಣ ಸಂಸ್ಕೃತಿಯನ್ನು ಕಾಯ್ದುಕೊಂಡು ಬರಲೆಂದು ಹಾರೈಸುತ್ತೇನೆ.



2003ನೆಯ ಇಸವಿಯ 16ನೆಯ ಶರಣ ಮೇಳದಲ್ಲಿ ಪೂಜ್ಯ ಮಾತಾಜಿಯವರಿಗೆ ಮಾಲಾರ್ಪಣೆ ಮಾಡಿರುವ ಡಾ|| ಸುಶೀಲಮ್ಮ




ಮಂಗಳೂರಿನಲ್ಲಿ 1980ರಲ್ಲಿ ನಡೆದ ಮಾತಾಜಿಯವರ ಹುಟ್ಟು ಹಬ್ಬದಲ್ಲಿ ಭಾಗಿಯಾದ ಭಾಗಿಯಾದ ಡಾ|| ಸುಶೀಲಮ್ಮ




16-02-07 ಶರಣ ಗಣ ಮೇಳದಲ್ಲಿ ಇಷ್ಟಲಿಂಗ ಪೂಜಾ ಕಾರ್ಯಕ್ರಮದಲ್ಲಿ
ಭಾಗಿಗಳಾದ ಗುಲ್ಬರ್ಗಾ ರಾ.ಬ.ದಳದ ಶರಣ ಶರಣೆಯರು



ಮಲೆ ಮಾದೇಶ್ವರ ಬೆಟ್ಟದಿಂದ ದಿ-31-1-2007ರಂದು ಹೊರಟು ಸಂಚರಿಸುತ್ತಿರುವ ಕಲ್ಯಾಣ ಜ್ಯೋತಿಯನ್ನು
ಬರಮಾಡಿಕೊಳ್ಳುತ್ತಿರುವ ಮೈಸೂರಿನ ಕೃಷ್ಣರಾಜ ಕ್ಷೇತ್ರದ ಶಾಸಕ ಸೋಮಶೇಖರ್



ಶರಣ. ಶಿವಶ ಗೌಡ ಬಿರಾದರ ಪಾಟೀಲ್, ವಕೀಲರು, ಮಕ್ಕಳ ಹುಟ್ಟುಹಬ್ಬದ ಸಂದರ್ಭದಲ್ಲಿ ಶರಣ. ಸುರೇಶ ಕಡೇಮನಿ ಗುರುಗಳಿಂದ ಪುಸ್ತಕ ಬಿಡುಗಡೆ.
ಚಿತ್ರದಲ್ಲಿ ರಾಷ್ಟ್ರೀಯ ಬಸವ ದಳದ ಅಧ್ಯಕ್ಷರಾದ ಮಲ್ಲಪ್ಪ ಗೌಡ ಶಿವಲಿಂಗಪ್ಪನವರು, ಶರಣ.ಸಿ.ಬಿ. ದೊಡ್ಡಗೌಡರ ಮತ್ತು ಶರಣ ಜಗದೀಶ್
ಶಿರಸಂಗಿ ಇವರನ್ನು ಕಾಣಬಹುದು.



ಜ್ಯೋತಿಯನ್ನು ಸ್ವಾಗತಿಸುತ್ತಿರುವ ಶಾಸಕರು, ಎಡದಿಂದ ಬಲಕ್ಕೆ ಹೊಸಮಠದ ಪೂಜ್ಯ ಚಿದಾನಂದ ಸ್ವಾಮಿಗಳು, ಪೂಜ್ಯ ಮಾತಾಜಿ, ಶಾಸಕರು, ಜ್ಯೋತಿಯ
ಸಂಚಾಲಕರಾದ ಪೂಜ್ಯ ಚನ್ನಬಸವನಂದ ಸ್ವಾಮೀಜಿ,ನೇತೃತ್ವ ವಹಿಸಿರುವ ಪೂಜ್ಯ ಗಂಗಾಮಾತಾಜಿ,
ಬಸವ ಪುತ್ಥಳಿಗೆ 1 ಲಕ್ಷ ರೂ ದೇಣಿಗೆ ನೀಡಿರುವ ಶರಣ. ಬಸಪ್ಪದೇವರು.

ಕಲ್ಯಾಣ ಕಿರಣ ಪತ್ರಿಕೆಯ ಒಡೆತನ ಮತ್ತಿತರ ವಿವರಗಳ ಪ್ರಕಟಣೆ


ಪ್ರಾರೂಪ 4 (ವಿಧಿ 8)

1.	ಪ್ರಕಟಣೆಯ ಸ್ಥಳ	ಬೆಂಗಳೂರು
2.	ಪ್ರಕಟಣೆಯ ನಿಯತಕಾಲಿಕತೆ	ಮಾಸಿಕ
3.	ಮುದ್ರಕರ ಹೆಸರು	ಶ್ರೀಮತಿ ಕಮಲಮ್ಮ
	ಭಾರತದ ಪ್ರಜೆಯೆ?	ಹೌದು
	ವಿಳಾಸ	ಪದ್ಮಶ್ರೀ ಪ್ರಿಂಟರ್ಸ್ ರಾಜಾಜಿನಗರ, ಬೆಂಗಳೂರು
4.	ಪ್ರಕಾಶಕರ ಹೆಸರು	ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ
	ಭಾರತದ ಪ್ರಜೆಯೆ ?	ಹೌದು
	ವಿಳಾಸ	ಕಲ್ಯಾಣ ಕಿರಣ ಕಾರ್ಯಾಲಯ ಬಸವ ಮಂಟಪ, ರಾಜಾಜಿನಗರ ಬೆಂಗಳೂರು - 560010
5.	ಸಂಪಾದಕರ ಹೆಸರು	ಪೂಜ್ಯ ಶ್ರೀಮಾತೆ ಕಸ್ತೂರಿದೇವಿ
	ಭಾರತದ ಪ್ರಜೆಯೆ?	ಹೌದು
	ವಿಳಾಸ	ಬಸವ ಮಂಟಪ, ರಾಜಾಜಿ ನಗರ ಬೆಂಗಳೂರು - 560010
6.	ಪತ್ರಿಕೆ ಒಡೆತನ ವಹಿಸಿರುವ ವ್ಯಕ್ತಿಯ ಮತ್ತು ಪಾಲುದಾರರ ಅಥವಾ ಒಟ್ಟು ಬಂಡವಾಳ ಶೇ.1.ಕಿಂತ ಹೆಚ್ಚು ಭಾಗಕ್ಕೆ ಪಾಲುದಾರರ ಹೆಸರು ಮತ್ತು ವಿಳಾಸ	ವಿಶ್ವ ಕಲ್ಯಾಣ ಮಿಷನ್ (ರಿಜಿಸ್ಟರ್ಡ್) ಚಾರಿಟಬಲ್ ಟ್ರಸ್ಟ್ ಬಸವ ಮಂಟಪ ರಾಜಾಜಿ ನಗರ, ಬೆಂಗಳೂರು-560010

ಮೇಲೆ ಕೊಟ್ಟಿರುವ ವಿವರಗಳು ನನಗೆ ತಿಳಿದ ಮಟ್ಟಿಗೆ ಮತ್ತು ನಂಬಿಕೆಯಂತೆ ನಿಜವೆಂದು ನಾನು ಪೂಜ್ಯ ಶ್ರೀಮಾತೆ ಕಸ್ತೂರಿದೇವಿ ಘೋಷಿಸುತ್ತೇನೆ.

ಕಲ್ಯಾಣ ಕಿರಣ, ದಿ.10-3-2007

ಪ್ರಕಾಶಕರು
ಪೂಜ್ಯ ಶ್ರೀ ಮಾತೆ ಕಸ್ತೂರಿ ದೇವಿ
ಬೆಂಗಳೂರು -560010



ಬೆಂಗಳೂರಿನಲ್ಲಿ ನಡೆದ ಮಾತಾಜಿಯವರ ವರ್ಧಂತಿಯ ಕಾರ್ಯಕ್ರಮದ ಉದ್ಘಾಟನೆ. ಎಡದಿಂದ ಬಲಕ್ಕೆ ದೇವಿಕಾ ಶರಣಪ್ಪ ಎನ್. ಪುಟ್ಟರುದ್ರ, ರಾಣಿ ಸತೀಶ್, ಮಾಜಿ ಸಚಿವರು, ಪೂಜ್ಯ ಮಾತಾಜಿ , ಚಲನ ಚಿತ್ರ ನಟ ಅಶೋಕ್, ದಯಾನಂದ ಸ್ವಾಮಿಜಿ.



ಬೆಂಗಳೂರಿನಲ್ಲಿ ನಡೆದ ಪೂಜ್ಯ ಮಹಾಜಗದ್ಗುರು ಮಾತೆ ಮಹಾದೇವಿಯವರ 62ನೆಯ ವರ್ಧಂತಿ ಸಮಾರಂಭ. ಎಡದಿಂದ ಬಲಕ್ಕೆ ಶರಣ ನೆ.ಲ.ನರೇಂದ್ರಬಾಬು, ಶಾಸಕರು, ಎನ್ ಪುಟ್ಟರುದ್ರ, ಶರಣೆ ಗಂಗಮ್ಮನವರು (ಮಾತಾಜಿಯವರ ತಾಯಿ), ಪೂಜ್ಯ ಶ್ರೀ ಮಾತಾಜಿ, ಚಲನ ಚಿತ್ರ ನಟ ಅಶೋಕ್. ದಯಾನಂದ ಸ್ವಾಮಿಜಿ, [illegible] ಲೀಲಾವತಿ ಕರಡಿ, ಕುಮಾರಿ ಗಂಗಾ ದೊಡ್ಡ ಅವರಿಂದ ನೃತ್ಯ ([illegible])

ವಿಶ್ವದ ಪ್ರಥಮ ಮಹಿಳಾ ಜಗದ್ಗುರು



ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರು

CPMG/KA/BGW-50/2006-2008 WPP(W)-17 R.NO.19980/70